# ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಅನುಗ್ರಹೀತ ಜೀವನ ಶೈಲಿ ಮತ್ತು ವ್ಯಂಗ್ಯ ಚಿತ್ರಗಳ ವಾಸ್ತವಿಕತೆ

**ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಮಾಮ್,

ಖಲೀಫತುಲ್ ಮಸೀಹ್ V

**The Blessed Model of the Holy Prophet Muhammad and the Caricatures**

Consisting of 5 Friday Sermons of:
Hadhrat Mirza Masroor Ahmad,
Imam Jama'at Ahmadiyya,
Khalifatul Masih V

Kannada Translation: M. Ubeidullah

Revised by: Muhammad Yusuf

Assisted by: Moulavi Inamullah

Type setting by: U. Basheer Ahmad

Published by: Nazarat Nashro-Isha'at,
Qadian – 143516

ISBN: 978-93-83882-70-0
2015

بسم الله الرحمن الرحيم ○ نحمده ونصلي على رسوله الكريم ○ وعلى عبده المسيح الموعود

# ಮುನ್ನುಡಿ

ಸೃಷ್ಟಿಯ ಆರಂಭದಿಂದಲೇ ಸತ್ಯ ಮತ್ತು ಮಿಥ್ಯೆ, ಪ್ರಕಾಶ ಮತ್ತು ಅಂಧಕಾರ ಇವುಗಳ ಮಧ್ಯೆ ಹೋರಾಟ ಜಾರಿಗೊಂಡಿತ್ತು. ಆದರೆ ಅಲ್ಲಾಹನ ನಡೆವಳಿಕೆಯ ಪ್ರಕಾರ ಯಾವಾಗಲೂ ಸತ್ಯ ಮತ್ತು ಪ್ರಕಾಶ ಜಯಗಳಿಸುತ್ತದೆ. ಕೆಲವು ಜನರು ದುರಹಂಕಾರ ಕಾರಣದಿಂದ ತಮ್ಮ ಬಗ್ಗೆ ಸುಲಭವಾಗಿ ಪ್ರಸಿದ್ಧಿಯನ್ನು ಪಡೆಯಲು ಅಲ್ಲಾಹನ ಸಂದೇಶವಾಹಕರ ವಿರುದ್ಧ ಎದ್ದು ನಿಲ್ಲುತ್ತಾ ಇರಲು ಬಯಸುತ್ತಾರೆ. ಆದರೆ ಅಂತಹ ಜನರು ಕೊನೆಗೆ ಸೋತು ಹೋಗಿ, ನಿರಾಶರಾಗಿ ನಷ್ಟವನ್ನನುಭವಿಸುವವರಾದರು. ಇಸ್ಲಾಮ್ ವಿರುದ್ಧ ಮತ್ತು ಸರ್ವ ಸೃಷ್ಟಿಗಳಿಗೆ ಅಭಿಮಾನವಾಗಿರುವ ನಮ್ಮ ನೇತಾರ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ವಿರುದ್ಧ ವಿವಿಧ ಜನರು ಗೌರವ ರಹಿತವಾಗಿ ವರ್ತಿಸಿದರು ಮತ್ತು ಅಲ್ಲಾಹನ ನಡೆವಳಿಕೆ ಪ್ರಕಾರ ಅಪಜಯ ಹೊಂದಿದರು. ಇತ್ತೀಚೆಗೆ ಮನಸ್ಸಾಕ್ಷಿಯ ಸ್ವಾತಂತ್ರ್ಯ ಮತ್ತು ಪತ್ರಿಕಾ ಧರ್ಮ ಸ್ವಾತಂತ್ರ್ಯದ ನೆವನವನ್ನು ಹೇಳಿ ಕೆಲವು ಶಕ್ತಿಗಳು ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ತಮ್ಮ ದ್ವೇಷವನ್ನು ಹೊರಹೊಮ್ಮಿಸಲು ಮತ್ತು ಪ್ರಾಯಶಃ ಇಸ್ಲಾಮೀ ಲೋಕದ ವಿರುದ್ಧ ಪರಸ್ಪರ ದ್ವೇಷವನ್ನು ಹಬ್ಬಿಸಲು ಅನಾವಶ್ಯಕ ವ್ಯಂಗ್ಯ ಚಿತ್ರಗಳನ್ನು ವಿವಿಧ ಪುಸ್ತಕಗಳಲ್ಲೂ ಪತ್ರಿಕೆಗಳಲ್ಲೂ ಪ್ರಕಟಿಸಿದರು. ಇದರ ಫಲಸ್ವರೂಪವಾಗಿ ವಿವಿಧ ಮುಸ್ಲಿಮ್ ಸಂಸ್ಥೆಗಳು ಮತ್ತು ವಿವಿಧ ಮುಸ್ಲಿಮ್ ದೇಶಗಳು ಪ್ರತಿಭಟಿಸಿದುವು. ತಮ್ಮ ಸಿಟ್ಟು ಪ್ರಕಟಿಸಲು ಬೆಂಕಿ ಹಚ್ಚಲಾಯಿತು; ವಿಧ್ವಂಸಕ ಕೃತ್ಯಗಳನ್ನು ನಡೆಸಲಾಯಿತು.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಥಾಪನೆಗೊಂಡುದರ ಮುಖ್ಯ ಉದ್ದೇಶ ಅಲ್ಲಾಹನ ಅನುಗ್ರಹದಿಂದ ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಲೋಕದಲ್ಲಿ ಪ್ರಚಾರಗೊಳಿಸುವುದಾಗಿದೆ. ಆದುದರಿಂದ ಮೇಲೆ ವಿವರಿಸಿದ ಸಂದರ್ಭಗಳಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪ್ರತಿಭಟಿಸುವುದು ಬೆಂಕಿ ಹಚ್ಚುವ ಮೂಲಕವಾಗಲಿ ವಿಧ್ವಂಸಕ ಕೃತ್ಯಗಳನ್ನು ನಡೆಸುವ ಮೂಲಕವಾಗಲಿ ಅಲ್ಲ; ಆಕ್ಷೇಪಿಸುವವರ ಆಕ್ಷೇಪಗಳಿಗೆ

ತೃಪ್ತಿದಾಯಕವಾದ ಉತ್ತರ ನೀಡಿ ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಲೋಕಕ್ಕೆ ತಲಪಿಸುವುದಕ್ಕೆ ಪ್ರಯತ್ನ ಮಾಡುವ ಮೂಲಕವಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಮಾಮರೂ ಪಂಚಮ ಖಲೀಫತುಲ್ ಮಸೀಹರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು (ಅಲ್ಲಾಹನು ಅವರಿಗೆ ಸರ್ವ ವಿಧ ನೆರವುಗಳನ್ನು ನೀಡುವವನಾಗಲಿ) 2006 ಫೆಬ್ರವರಿ 10, ಫೆಬ್ರವರಿ 17, ಫೆಬ್ರವರಿ 24, ಮಾರ್ಚ್ 3 ಮತ್ತು ಮಾರ್ಚ್ 10ರಂದು ಲಂಡನ್ ಮಸ್‌ಜಿದ್ ಬೈತುಲ್ ಫುತೂಹ್‌ನಲ್ಲಿ ನೀಡಿದ ಶುಕ್ರವಾರದ ಖುತ್‌ಬ ಪ್ರವಚನಗಳಲ್ಲಿ, ಮೇಲೆ ವಿವರಿಸಿದ ಸಂದರ್ಭಗಳಲ್ಲಿ ಒಬ್ಬ ಸತ್ಯವಿಶ್ವಾಸಿ ಹೇಗೆ ಪ್ರತಿಕ್ರಿಯೆ ಸೂಚಿಸಬೇಕು ಮತ್ತು ಹೇಗೆ ಪರಿಸ್ಥಿತಿಯನ್ನು ನಿಭಾಯಿಸಬೇಕು ಎಂಬುದರ ಬಗ್ಗೆ ವಿವರಿಸಿರುವರು.

ವಾಚಕರಾದ ಮಿತ್ರರು ಹಝ್ರತ್ ಖಲೀಫರ ಈ ಮಾರ್ಗದರ್ಶನಗಳನ್ನು ಸ್ವತಃ ಅಧ್ಯಯನ ಮಾಡಬೇಕು ಮತ್ತು ತಮ್ಮ ಸ್ನೇಹಿತರಿಗೆ ಸಹ ಓದಲು ಕೊಡಬೇಕು. ಅವರು ಇಸ್ಲಾಮಿನ ಸುಂದರ ತತ್ವಗಳನ್ನು ಮನವರಿಕೆ ಮಾಡಿಕೊಳ್ಳುವಂತಾಗಲಿ. ಈ ಉದ್ದೇಶದಿಂದ ಈ ಮಾರ್ಗದರ್ಶನಗಳ ಭಾಷಾಂತರವನ್ನು ವಿವಿಧ ಭಾಷೆಗಳಲ್ಲಿ ಪ್ರಕಟಿಸಲಾಗುವುದು.



ಜೂನ್ 2006

ವಿನೀತ:

**ಮುನೀರುದ್ದೀನ್ ಶಮ್ಸ್**

ಅಡಿಷನಲ್ ವಕೀಲುತ್ತಸ್‌ನೀಫ್

# ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರೀತಿ, ವಾತ್ಸಲ್ಯ ಮತ್ತು ಕರುಣೆಯ ಮಾದರಿಯನ್ನು ಲೋಕಕ್ಕೆ ತೋರಿಸಿಕೊಡಿರಿ

## ಜುಮುಅ ಖುತ್‌ಬ 10–2–2006

ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹುಝೂರ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನಗಳನ್ನು ಪಠಿಸಿದರು:

وَمَا أَرْسَلْنَاكَ إِلَّا رَحْمَةً لِّلْعَالَمِينَ

"ಲೋಕದ ಎಲ್ಲ ಜನರಿಗೆ ಒಂದು ಅನುಗ್ರಹವಾಗಿಯೇ ನಾವು ನಿನ್ನನ್ನು ಕಳುಹಿಸಿದ್ದೇವೆ." (21: 108)

إِنَّ اللَّهَ وَمَلَائِكَتَهُ يُصَلُّونَ عَلَى النَّبِيِّ يَا أَيُّهَا الَّذِينَ آمَنُوا صَلُّوا عَلَيْهِ وَسَلِّمُوا تَسْلِيمًا

إِنَّ الَّذِينَ يُؤْذُونَ اللَّهَ وَرَسُولَهُ لَعَنَهُمُ اللَّهُ فِي الدُّنْيَا وَالْآخِرَةِ وَأَعَدَّ لَهُمْ عَذَابًا مُّهِينًا

"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ. ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ಯಾರು ತೊಂದರೆ ಕೊಡುತ್ತಾರೋ, ನಿಶ್ಚಯವಾಗಿಯೂ ಅವರನ್ನು ಅಲ್ಲಾಹನು ಇಹದಲ್ಲೂ ಪರದಲ್ಲೂ ಶಪಿಸಿದ್ದಾನೆ. ಅವರಿಗೆ ಅಪಮಾನಕರವಾದ ಶಿಕ್ಷೆಯನ್ನು ಅವನು ಸಿದ್ಧಪಡಿಸಿಟ್ಟಿದ್ದಾನೆ." (33: 57, 58)

### ಡೆನ್ಮಾರ್ಕ್ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಅತ್ಯಂತ ಕೊಳಕು ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿದುದರ ವಿರುದ್ಧ ಇಸ್ಲಾಮೀ ಲೋಕದ ಪ್ರತಿಭಟನೆ

ಇತ್ತೀಚೆಗೆ ಡೆನ್ಮಾರ್ಕ್ ಮತ್ತು ಕೆಲವು ಪಾಶ್ಚಿಮಾತ್ಯ ದೇಶಗಳಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಅತ್ಯಂತ ಕೊಳಕು ಮತ್ತು ಮುಸ್ಲಿಮರ ಭಾವನೆಗಳನ್ನು ರೊಚ್ಚಿಗೆಬ್ಬಿಸುವ ವ್ಯಂಗ್ಯ ಚಿತ್ರಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಕಾರಣ ಇಸ್ಲಾಮೀ ಲೋಕದಲ್ಲಿ ದುಃಖ ಮತ್ತು ಸಿಟ್ಟಿನ ಒಂದು ಅಲೆಯು ಹರಿಯುತ್ತಿದೆ ಮತ್ತು ಪ್ರತಿಯೊಬ್ಬ ಮುಸ್ಲಿಮನು ಅದರ ಬಗ್ಗೆ ಪ್ರತಿಭಟನೆ ಸೂಚಿಸುತ್ತಿದ್ದಾನೆ. ಇಂತಹ ದುಷ್ಕೃತ್ಯದ ಬಗ್ಗೆ ಸಹಜವಾದ

ಪ್ರತಿಕ್ರಿಯೆ ಸೂಚಿಸಬೇಕಾದುದೇ ಆಗಿದೆ. ಪ್ರತಿಯೊಬ್ಬ ಅಹ್ಮದೀ ಮುಸ್ಲಿಮನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಪ್ರೀತಿಯನ್ನು ಇತರರಿಗಿಂತ ಅಧಿಕ ಮಟ್ಟದಲ್ಲಿ ನಿಶ್ಚಯವಾಗಿಯೂ ಹೊಂದಿದ್ದಾನೆ. ಏಕೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿದ ಉಪದೇಶಗಳ ಕಾರಣ ಹಝ್ರತ್ ಖಾತಮುಲ್ ಅನ್‌ಬಿಯಾ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಮರ ಮಹತ್ತರವಾದ ಸ್ಥಾನದ ಬಗ್ಗೆ ಅಹ್ಮದೀ ಮುಸ್ಲಿಮನಿಗೆ ಇತರ ಮುಸ್ಲಿಮರಿಗಿಂತ ಬಹಳ ಹೆಚ್ಚು ಜ್ಞಾನ ಲಭಿಸಿರುತ್ತದೆ. ಅನೇಕ ಅಹ್ಮದಿಯರು ನನಗೆ ಪತ್ರ ಬರೆದು ಮತ್ತು ನೇರವಾಗಿ ತಮ್ಮ ದುಃಖ ಮತ್ತು ಕೋಪವನ್ನು ಅದರ ಬಗ್ಗೆ ಪ್ರಕಟಿಸಿರುತ್ತಾರೆ. ಅವರು ಸಲಹೆ ನೀಡುತ್ತಾರೆ. ಈ ವೈಭವಶಾಲಿ ಪ್ರವಾದಿಯ ಮಹತ್ತರವಾದ ಸ್ಥಾನವನ್ನು ಲೋಕಕ್ಕೆ ತಿಳಿಸಿಕೊಡುವ ಒಂದು ಶಾಶ್ವತ ಅಭಿಯಾನ ಜಾರಿಯಲ್ಲಿರಬೇಕೆಂದು ಅವರು ಆಶಿಸುತ್ತಾರೆ. ನಮ್ಮ ಜಮಾಅತ್ ಲೋಕದಲ್ಲಿ ಯಾವ್ಯಾವ ಪ್ರದೇಶಗಳಲ್ಲಿ ಕಾರ್ಯನಿರತವಾಗಿದೆಯೋ ಅಲ್ಲಿ ಇಂತಹ ಕೆಲಸಗಳನ್ನು ಮಾಡುತ್ತಿದೆ. ಆದರೆ ನಮಗೆಲ್ಲರಿಗೂ ತಿಳಿದಿರುವಂತೆ ನಾವು ಪ್ರತಿಭಟನೆ ಸೂಚಿಸುವುದು ಹರತಾಳಗಳ ಮೂಲಕ ಮತ್ತು ಬೆಂಕಿ ಹಚ್ಚುವ ಮೂಲಕವಾಗಿರುವುದಿಲ್ಲ. ಹರತಾಳ, ವಿಧ್ವಂಸಕ ಕೃತ್ಯಗಳು, ಪತಾಕೆಗಳನ್ನು ಸುಡುವುದು ಇದಕ್ಕೆ ಪರಿಹಾರ ಮಾರ್ಗವೂ ಅಲ್ಲ.

ಈ ಕಾಲಘಟ್ಟದಲ್ಲಿ ಅನ್ಯ ಧರ್ಮಗಳಲ್ಲಿರುವ ಧಾರ್ಮಿಕ ಮನೋಭಾವದ ಜನರು ಮತ್ತು ಪಾಶ್ಚಿಮಾತ್ಯ ಲೋಕ ಇಸ್ಲಾಮ್ ಮತ್ತು ಇಸ್ಲಾಮಿನ ಪ್ರವಾದಿಯ ವಿರುದ್ಧ ಆಕ್ರಮಣ ಮಾಡುತ್ತಿದ್ದಾರೆ. ಇಂದಿನ ಕಾಲದಲ್ಲಿ ಪಾಶ್ಚಿಮಾತ್ಯ ಲೋಕದ ಜನರಿಗೆ ಧರ್ಮದ ಬಗ್ಗೆ ಯಾವ ಆಸಕ್ತಿಯೂ ಇಲ್ಲ. ಅವರಲ್ಲಿ ಬಹುತೇಕ ಜನರು ಲೌಕಿಕ ಆಟ ವಿನೋದಗಳಲ್ಲಿ ಮಗ್ನರಾಗಿರುತ್ತಾರೆ. ಅವರು ಅವುಗಳಲ್ಲಿ ಎಷ್ಟು ಸಿಲುಕಿಕೊಂಡಿರುವರೆಂದರೆ, ಅವರ ಧರ್ಮ ಇಸ್ಲಾಮ್ ಆಗಿರಲಿ, ಕ್ರೈಸ್ತ ಧರ್ಮವಾಗಿರಲಿ ಅಥವಾ ಬೇರೆ ಯಾವುದೇ ಧರ್ಮವಾಗಿರಲಿ, ಅವರಿಗೆ ಆ ಧರ್ಮಗಳ ಬಗ್ಗೆ ಯಾವ ಪರಿವೆಯೂ ಇರುವುದಿಲ್ಲ. ಅವರು ಆ ಧರ್ಮಗಳಿಂದ ಸಂಪೂರ್ಣವಾಗಿ ಬೇರ್ಪಟ್ಟಿರುತ್ತಾರೆ. ಅವರಲ್ಲಿ ಬಹುಸಂಖ್ಯಾತ ಜನರಿಗೆ ಧರ್ಮದ ಬಗ್ಗೆ ಗೌರವ ಭಾವನೆ ಇರುವುದಿಲ್ಲ. ಕೆಲವು ದಿವಸಗಳ ಹಿಂದೆ ಫ್ರಾನ್ಸ್‌ನಿಂದ ಬಂದ ಒಂದು ಸಮಾಚಾರದಲ್ಲಿ ಕೆಲವರು, *"ನಾವು ಬಯಸುವುದಾದರೆ ಅಲ್ಲಾಹನ ಬಗ್ಗೆ ಸಹ ವ್ಯಂಗ್ಯ ಚಿತ್ರ ಬರೆಯುವ ಅಧಿಕಾರ ಹೊಂದಿದ್ದೇವೆ"* ಎಂದು ಹೇಳಿದುದಾಗಿ ವರದಿಯಾಗಿತ್ತು. ಇದಾಗಿದೆ ಅವರ ಸ್ಥಿತಿ. ಕಾರ್ಟೂನ್ (ವ್ಯಂಗ್ಯ ಚಿತ್ರ) ರಚಿಸಿದವರು ಅತ್ಯಂತ ಹೀನಕೃತ್ಯ ಮಾಡಿದ್ದಾರೆ. ಅದರ ವಿರುದ್ಧ ಇಸ್ಲಾಮೀ ಲೋಕ ಪ್ರತಿಭಟನೆ ಸೂಚಿಸಿದೆ. ಅದರ ಬಗ್ಗೆ ಅನೇಕ ಪಾಶ್ಚಿಮಾತ್ಯ ಲೇಖಕರು ಹೀಗೆ ಬರೆದರು: ಇಸ್ಲಾಮೀ ಲೋಕದ ಈ ಪ್ರತಿಭಟನೆ ಇಸ್ಲಾಮೀ ಸಮಾಜ ವ್ಯವಸ್ಥೆ ಮತ್ತು ಪಾಶ್ಚಿಮಾತ್ಯ ಜಾತ್ಯತೀತ ಪ್ರಜಾಪ್ರಭುತ್ವದ ಮಧ್ಯೆ ನಡೆಯುವ ಸಂಘರ್ಷವಾಗಿದೆ.

ಆದರೆ ವಾಸ್ತವಿಕವಾಗಿ ಈ ವಿಷಯ ಸಮಾಜ ವ್ಯವಸ್ಥೆಗೆ ಸಂಬಂಧಿಸಿರುವುದಿಲ್ಲ. ನಾನು ಇದರ ಮೊದಲು ಹೇಳಿದ ಹಾಗೆ ಪಾಶ್ಚಿಮಾತ್ಯರಲ್ಲಿ ಬಹುಸಂಖ್ಯಾತರು ನೈತಿಕ ಸ್ವಭಾವಗುಣಗಳಿಂದ ವಿರಹಿತರಾಗಿದ್ದಾರೆ. ಸ್ವಾತಂತ್ರ್ಯದ ಹೆಸರಲ್ಲಿ ಅಶ್ಲೀಲತೆಯನ್ನು ಅವಲಂಬಿಸಲಾಗುತ್ತಿದೆ. ಲಜ್ಜೆಯು ಸಂಪೂರ್ಣವಾಗಿ ಕೊನೆಗೊಂಡಿದೆ.

# ಕೆಲವು ನ್ಯಾಯನಿಷ್ಠರ ಅಭಿಪ್ರಾಯಗಳು

ನ್ಯಾಯ ಪ್ರಿಯರಾದ ಕೆಲವು ಅಂಕಣಗಾರರು ಇಸ್ಲಾಮೀ ಸಮಾಜ ಮತ್ತು ಪಾಶ್ಚಿಮಾತ್ಯ ಜಾತ್ಯತೀತ ಪ್ರಜಾಪ್ರಭುತ್ವದ ವಿರುದ್ಧ ಸಂಘರ್ಷ ಇದಾಗಿದೆ ಎಂಬ ಅಭಿಪ್ರಾಯವನ್ನು ಅಲ್ಲಗಳೆದಿದ್ದಾರೆ. ಇಂಗ್ಲೆಂಡಿನ ಒಬ್ಬ ಅಂಕಣಗಾರ ರಾಬರ್ಟ್ ಫಿಸ್ಕ್ (Robert Fisk) ಸಾಕಷ್ಟು ನ್ಯಾಯಪೂರ್ಣವಾಗಿ ಹೀಗೆ ಬರೆದರು: "ಡೆನ್ಮಾರ್ಕ್ ನಾಗರಿಕನೊಬ್ಬ ಇಸ್ಲಾಮೀ ಸಮಾಜ ಮತ್ತು ಪಾಶ್ಚಿಮಾತ್ಯ ಜಾತ್ಯತೀತ ಪ್ರಜಾಪ್ರಭುತ್ವದ ಮಧ್ಯೆ ಸಂಘರ್ಷ ಎಂದು ಪ್ರಸ್ತಾಪಿಸಿದುದು ಸಂಪೂರ್ಣ ತಪ್ಪಾಗಿದೆ. ಇದು ಯಾವುದೇ ಸಂಸ್ಕೃತಿ ಅಥವಾ ಜಾತ್ಯತೀಯತೆಯ ಸಂಘರ್ಷವಲ್ಲ. ಇದು ಅಭಿಪ್ರಾಯ ಸ್ವಾತಂತ್ರ್ಯದ ಪ್ರಶ್ನೆಯೂ ಅಲ್ಲ. ವಾಸ್ತವಿಕ ವಿಷಯವೇನೆಂದರೆ, ಮುಸ್ಲಿಮರ ಅಭಿಪ್ರಾಯ ಪ್ರಕಾರ, ದೇವನು ಪೈಗಂಬರರಿಗೆ ತನ್ನ ಉಪದೇಶಗಳನ್ನು ನೇರವಾಗಿ ಇಳಿಸಿದನು. ಪೈಗಂಬರರು ಲೋಕದಲ್ಲಿ ದೇವನ ವಕ್ತಾರರಾಗಿದ್ದಾರೆ. ಆದರೆ ಕ್ರೈಸ್ತರು, ಮಾನವನ ಮೂಲಭೂತ ಹಕ್ಕುಗಳು ಮತ್ತು ಸ್ವಾತಂತ್ರ್ಯದ ನವೀನ ಕಲ್ಪನೆಗೆ ಸರಿಹೊಂದದ ಕಾರಣ ಪ್ರವಾದಿಗಳು ಮತ್ತು ಸಂತರು ಚರಿತ್ರೆಯ ಅಂಧಕಾರದಲ್ಲಿ ಕಣ್ಮರೆಯಾಗಿದ್ದಾರೆ ಎಂದು ಭಾವಿಸುತ್ತಾರೆ. ಮುಸ್ಲಿಮರು ಧರ್ಮವನ್ನು ತಮ್ಮ ಜೀವಿತದ ಒಂದು ಭಾಗ ಎಂದು ಭಾವಿಸುತ್ತಾರೆ. ಶತಮಾನಗಳ ಯಾತ್ರೆ ಮತ್ತು ಬದಲಾವಣೆಗಳ ನಂತರವೂ ಈ ಭಾವನೆ ಸ್ಥಿರವಾಗಿದೆ. ಆದರೆ (ಕ್ರೈಸ್ತರಾದ) ನಾವು ಧರ್ಮವನ್ನು ನಮ್ಮ ಜೀವಿತ ಕರ್ಮಗಳಿಂದ ಬೇರೆಯಾಗಿರಿಸಿದ್ದೇವೆ. ಆದುದರಿಂದ ನಾವು ಕ್ರೈಸ್ತ ಧರ್ಮವನ್ನು ಇಸ್ಲಾಮಿನೊಂದಿಗೆ ಹೋಲಿಸಿ ನೋಡದೆ, ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಇಸ್ಲಾಮಿನೊಂದಿಗೆ ಹೋಲಿಸಿ ನೋಡುತ್ತೇವೆ. ಇದರ ಆಧಾರದಲ್ಲಿ, ನಾವು ನಮ್ಮ ಪ್ರವಾದಿಗಳನ್ನೂ ಅವರ ಉಪದೇಶಗಳನ್ನೂ ಅಪಹಾಸ್ಯ ಮಾಡುತ್ತಿರುವುದಾದರೆ, ಅನ್ಯ ಧರ್ಮದ ಪ್ರವಾದಿಗಳನ್ನು ಏಕೆ ಅಪಹಾಸ್ಯ ಮಾಡಬಾರದೆಂದು ಚಿಂತಿಸುತ್ತೇವೆ."

ಅವರು ಹೀಗೆ ಮುಂದುವರಿಸುತ್ತಾರೆ: "ಏನು ಈ ವರ್ತನೆ ಅನೈಚ್ಛಿಕವಾಗಿ ಆದುದೇ? ನನಗೆ ನೆನಪಿದೆ – ಹತ್ತು ಹನ್ನೆರಡು ವರ್ಷಗಳ ಹಿಂದೆ Last Temptation of Christ (ಲಾಸ್ಟ್ ಟೆಂಪ್ಟೇಶನ್ ಆಫ್ ಕ್ರೈಸ್ಟ್) ಎಂಬ ಚಲಚ್ಚಿತ್ರ ಬಿಡುಗಡೆಗೊಳಿಸಲ್ಪಟ್ಟಾಗ ಅದರಲ್ಲಿ ಯೇಸು ಕ್ರಿಸ್ತರನ್ನು ಒಬ್ಬ ಮಹಿಳೆಯೊಂದಿಗೆ ಆಕ್ಷೇಪಕರವಾದ ರೀತಿಯಲ್ಲಿ ತೋರಿಸಿದಾಗ ಬಹಳ ಗದ್ದಲವೆದ್ದಿತು. ಪ್ಯಾರಿಸ್‌ನಲ್ಲಿ ಒಬ್ಬನು ಕೋಪಾವೇಶದಿಂದ ಒಂದು ಸಿನೇಮಾ ಥಿಯೇಟರನ್ನು ಸುಟ್ಟು ಹಾಕಿದನು. ಒಬ್ಬ ಫ್ರೆಂಚ್ ಯುವಕನು ಕೊಲ್ಲಲ್ಪಟ್ಟನು. ಇದರಿಂದ ತಿಳಿಯುವುದೇನು? ನಮ್ಮಲ್ಲಿ ಸಹ ಕೆಲವರು ಧಾರ್ಮಿಕ ಭಾವನೆಗಳನ್ನು ಅಪಮಾನಗೊಳಿಸುವುದನ್ನು ಸಹಿಸಲಾರರು. ಹೀಗಿದ್ದರೂ ನಾವು ಪ್ರತೀಕ್ಷಿಸುವುದೇನೆಂದರೆ, ಅಭಿಪ್ರಾಯ ಸ್ವಾತಂತ್ರ್ಯದ ನೆಪದಿಂದ ಕೀಳು ಅಭಿರುಚಿಯ ವ್ಯಂಗ್ಯ ಚಿತ್ರಗಳ ಪ್ರಕಟಣೆಯ ಬಗ್ಗೆ ಸಹನೆಯಿಂದ ವರ್ತಿಸಬೇಕು. ಏನು ನಾವು ಹೀಗೆ ವರ್ತಿಸುವುದು ಸರಿಯೋ? ಪತ್ರಿಕೆಗಳ ಅಭಿಪ್ರಾಯ ಸ್ವಾತಂತ್ರ್ಯದ ಮೇಲೆ ನಿಯಂತ್ರಣ ಹೇರಲಾಗದು ಎಂದು ಪಾಶ್ಚಿಮಾತ್ಯ ರಾಜಕೀಯ ನಾಯಕರು ಹೇಳುವಾಗ ನನಗೆ ನಗೆ ಬರುತ್ತಿದೆ. ಇಸ್ಲಾಮಿನ ಪೈಗಂಬರರಿಗೆ ಬದಲಾಗಿ ಒಬ್ಬ ಯಹೂದಿ ಪುರೋಹಿತನ (Rabbi) ತಲೆಯ ಮೇಲೆ ಬಾಂಬನ್ನು ಹೋಲುವ ಟೋಪಿ ಇರಿಸಿ ವ್ಯಂಗ್ಯ ಚಿತ್ರ ಪ್ರಕಟಿಸುತ್ತಿದ್ದರೆ ಎಷ್ಟು ಬೊಬ್ಬೆ ಹೊಡೆಯಲಾಗುತ್ತಿತ್ತು. ಆ್ಯಂಟಿ ಸೆಮಿಟಿಸಂ (Anti Semitism) – ಯಹೂದಿಯರ ವಿರುದ್ಧ ಧ್ವನಿ ಎತ್ತಲಾಗುತ್ತಿದೆ ಎಂದು ಬೊಬ್ಬೆ ಏಳುತ್ತಿತ್ತು. ಯಹೂದಿಯರ ಧರ್ಮವನ್ನು ನಿಂದಿಸಿ

ನೋಯಿಸಲಾಗುತ್ತಿದೆ ಎಂದು ಆಕ್ಷೇಪಿಸಲಾಗುತ್ತಿತ್ತು. ಅಭಿಪ್ರಾಯ ಸ್ವಾತಂತ್ರ್ಯವು ಅಷ್ಟು ಪವಿತ್ರವಾಗಿದ್ದರೆ, ಫ್ರಾನ್ಸ್, ಜರ್ಮನಿ ಅಥವಾ ಆಸ್ಟ್ರೀಯಾ ದೇಶಗಳಲ್ಲಿ, "ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಯಹೂದಿಯರ ಜನಾಂಗ ಹತ್ಯೆ ನಡೆದಿಲ್ಲ" ಎಂದು ಪಂಥಾಹ್ವಾನ ನೀಡುವುದು ಕಾನೂನು ಕಾಯಿದೆಗಳ ಪ್ರಕಾರ ಅಪರಾಧವಾಗುವುದಾದರೂ ಹೇಗೆ? ಮುಸ್ಲಿಮರಲ್ಲಿ ಧಾರ್ಮಿಕ ಸುಧಾರಣೆ ಬಯಸುವವರ ಅಥವಾ ಮಿತವಾದಿಗಳಾದವರ ಮತ್ತು ವಿಶಾಲ ಮನೋಭಾವದವರ ಚರ್ಚೆಗಳಿಗೆ ಪ್ರೋತ್ಸಾಹ ನೀಡುವ ರೀತಿಯಲ್ಲಿ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿದ್ದರೆ ಬಹಳ ಕಡಿಮೆ ಜನರಿಗೆ ಅದರ ಬಗ್ಗೆ ಆಕ್ಷೇಪ ಉಂಟಾಗುತ್ತಿತ್ತು. ಇಸ್ಲಾಮ್ ಒಂದು ಭೀಕರವಾದಿ ಧರ್ಮವಾಗಿದೆ ಎನ್ನುವುದರ ಹೊರತು ಬೇರೆ ಯಾವ ಸಂದೇಶ ಈ ವ್ಯಂಗ್ಯ ಚಿತ್ರಗಳಲ್ಲಿದೆ? ನಾಲ್ಕು ದಿಕ್ಕುಗಳಲ್ಲೂ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುವುದರ ಹೊರತು ಈ ವ್ಯಂಗ್ಯ ಚಿತ್ರ ಬೇರೆ ಯಾವ ಪ್ರಯೋಜನಕರ ಹೆಜ್ಜೆ ಹಾಕಿದೆ?". **("ಜಂಗ್" ದಿನ ಪತ್ರಿಕೆ, ಲಂಡನ್: 7–2–2006)**

ಮುಸ್ಲಿಮರ ಕೆಲವು ಕೆಟ್ಟ ವರ್ತನೆಗಳೂ ಇಂತಹ ಪರಿಸ್ಥಿತಿಗೆ ಸಂದರ್ಭವೊದಗಿಸಿದುವು. ಆದರೆ ಪಾಶ್ಚಿಮಾತ್ಯ ಜನರಲ್ಲಿ ಸಭ್ಯರಾದವರು ವಾಸ್ತವಿಕಾಂಶಗಳನ್ನು ವಿವರಿಸಲು ಬಯಸುತ್ತಾರೆ.

## ಮುಸ್ಲಿಮರ ಕೆಲವು ನಾಯಕರ ತಪ್ಪಾದ ಪ್ರತಿಕ್ರಿಯೆಗಳ ಕಾರಣದಿಂದ ಅನ್ಯರಿಗೆ ಇಸ್ಲಾಮನ್ನು ನಿಂದಿಸಲು ಸಂದರ್ಭ ಸಿಗುತ್ತದೆ

ವಿವಿಧ ದೇಶಗಳಲ್ಲಿರುವ ಮುಸ್ಲಿಮರ ಪ್ರತಿಕ್ರಿಯೆಗಳ ಬಗ್ಗೆ ಮತ್ತು ಪಾಶ್ಚಿಮಾತ್ಯ ದೇಶಗಳ ಸರಕಾರಿ ಪ್ರತಿನಿಧಿಗಳ ಹಾಗೂ ಪತ್ರಿಕೆಗಳ ಪ್ರತಿನಿಧಿಗಳ ಪ್ರತಿಕ್ರಿಯೆಗಳ ಬಗ್ಗೆ ನಾನು ವರದಿಗಳನ್ನು ತರಿಸಿದೆ. ಅವರಲ್ಲಿ ಬಹಳ ಸಂಖ್ಯೆಯ ಜನರು ವ್ಯಂಗ್ಯ ಚಿತ್ರಗಳ ಪ್ರಕಟಣೆಯನ್ನು ಇಷ್ಟಪಡಲಿಲ್ಲ ಎಂದೇ ನನಗೆ ತಿಳಿಯಿತು. ಯಾವುದಾದರೂ ಸಂದರ್ಭದಲ್ಲಿ ಎಲ್ಲಿಯಾದರೂ ಏನಾದರೂ ಮಾಡುವ ಕಾರಣ ಇಂತಹ ಕೊಳಕು ಮನೋಭಾವದವರ ಬುದ್ಧಿಯ ಕೊಳಕು ಮತ್ತು ದೇವನಿಂದ ಅವರು ದೂರ ಹೋಗಿರುವ ಬಗ್ಗೆ ಪ್ರಕಟವಾಗುತ್ತದೆ. ಇಸ್ಲಾಮ್ ವಿರುದ್ಧ ದ್ವೇಷ ಮತ್ತು ಅಸೂಯೆ ಪ್ರಕಟವಾಗುತ್ತದೆ. ಆದರೆ ನಾನು ಹೇಳಲು ಬಯಸುವುದೇನೆಂದರೆ, ಮುಸ್ಲಿಮರ ಕೆಲವು ನಾಯಕರ ತಪ್ಪು ಪ್ರತಿಕ್ರಿಯೆಗಳ ಕಾರಣ ಆ ಜನರಿಗೆ ಇಸ್ಲಾಮನ್ನು ಅಪಕೀರ್ತಿಗೊಳಪಡಿಸಲು ಸಂದರ್ಭ ಸಿಗುತ್ತದೆ. ಈ ಮೂಲಕ ಕೆಲವರು ರಾಜಕೀಯ ಲಾಭಗಳನ್ನು ಗಳಿಸಲು ಪ್ರಯತ್ನಿಸುತ್ತಾರೆ. ಈ ದೇಶಗಳಲ್ಲಿ ವಾಸಿಸುವ ಮುಸ್ಲಿಮರೆಂದು ಹೇಳಿಕೊಳ್ಳುವವರ ನಡೆವಳಿಕೆಯಿಂದ ಇಲ್ಲಿನ ಸರಕಾರಗಳ ಸಹನೆಗೆಟ್ಟು ಹೋಗುತ್ತದೆ. ಉದಾಹರಣೆಗೆ, ಅವರು ಕೆಲಸ ಮಾಡುವುದಿಲ್ಲ. ಬಹಳ ಜನರು ಮನೆಯಲ್ಲಿ ಕೆಲಸ ಮಾಡದೆ ಕುಳಿತು ಸೋಶಿಯಲ್ ಹೆಲ್ಪ್ (Social Help) ಎಂಬ ಸಹಾಯಧನ ಬೇಡುತ್ತಾರೆ. ಅಥವಾ ಸರಕಾರ ಅನುಮತಿಸದ ಕೆಲಸಗಳನ್ನು ಮಾಡುತ್ತಾರೆ. ಅಥವಾ ತೆರಿಗೆ ಪಾವತಿ ತಪ್ಪಿಸುವ ಕೆಲಸ ಮಾಡುತ್ತಾರೆ. ಈ ರೀತಿಯ ಬೇರೆ ಅನೇಕ ಕೆಟ್ಟ ಕೆಲಸ ಮಾಡುತ್ತಾರೆ. ಮುಸ್ಲಿಮರೇ ತಮ್ಮ ವಿರುದ್ಧ ಸರಕಾರ ವರ್ತಿಸುವ ಸಂದರ್ಭ ಒದಗಿಸುತ್ತಾರೆ. ಪಶ್ಚಿಮದ ಪ್ರಜ್ಞಾವಂತರಾದ ಜನಾಂಗಗಳು ಅದರ ಲಾಭ ಪಡೆಯುತ್ತವೆ.

ಕೆಲವು ಸಾರಿ ಪಾಶ್ಚಿಮಾತ್ಯರೇ ದೌರ್ಜನ್ಯ ನಡೆಸುತ್ತಾರೆ. ಆದರೆ ಮುಸ್ಲಿಮರ ತಪ್ಪು

ಪ್ರತಿಕ್ರಿಯೆಯ ಕಾರಣ ದೌರ್ಜನ್ಯಗಾರರೇ ದೌರ್ಜನ್ಯ ಪೀಡಿತರಾಗುತ್ತಾರೆ ಮತ್ತು ಮುಸ್ಲಿಮರನ್ನು ದೌರ್ಜನ್ಯಗಾರರನ್ನಾಗಿ ಚಿತ್ರಿಸುತ್ತಾರೆ. ಪ್ರಾಯಶಃ ಮುಸ್ಲಿಮರಲ್ಲಿ ಬಹುತೇಕ ಜನರು ವಿಧ್ವಂಸಕ ಹಿಂಸಾಚಾರಗಳನ್ನು ಇಷ್ಟಪಡದವರಾಗಿದ್ದಾರೆಂಬುದು ಸರಿಯೇ. ಆದರೆ ಕೆಲವು ನಾಯಕರು ಮತ್ತು ಕೆಲವು ಕಲಹಗಾರರು ಮುಸ್ಲಿಮರಿಗೆ ಅಪಕೀರ್ತಿ ಉಂಟುಮಾಡುತ್ತಾರೆ.

ಉದಾಹರಣೆಗೆ, ಡೆನ್ಮಾರ್ಕ್‌ನಿಂದ ಬಂದ ವರದಿ ನೋಡಿರಿ. ವ್ಯಂಗ್ಯ ಚಿತ್ರ ಪ್ರಕಟಿಸಿದ ಪತ್ರಿಕೆ ಕ್ಷಮೆ ಯಾಚಿಸಿದುದರಿಂದ ಅವರ ಕ್ಷಮಯಾಚನೆಯನ್ನು ಮುಸ್ಲಿಮರು ಅಂಗೀಕರಿಸಬೇಕೆಂದೂ ಈ ಪ್ರಶ್ನೆಯನ್ನು ಶಾಂತಿಯುತವಾಗಿ ಪರಿಹರಿಸಬೇಕೆಂದೂ ಇಸ್ಲಾಮಿನ ನೈಜ ಉಪದೇಶಗಳನ್ನು ಜನರಿಗೆ ತಲಪಿಸಬೇಕೆಂದೂ ಹಿಂಸಾಚಾರ ಮಾಡಬಾರದೆಂದೂ ಅಲ್ಲಿನ ಜನರು ಬಯಸುತ್ತಾರೆ. ಡೆನ್ಮಾರ್ಕ್ ದೇಶದ ದೂರದರ್ಶನದಲ್ಲಿ ಡೆನ್ಮಾರ್ಕ್ ಪತಾಕೆಗಳನ್ನು ಮತ್ತು ರಾಯಭಾರಿ ಕೇಂದ್ರಗಳನ್ನು ಸುಡುವ ದೃಶ್ಯಗಳನ್ನು ಕಂಡು ಮಕ್ಕಳು ಭಯಭೀತರಾಗಿದ್ದಾರೆಂದೂ ಯುದ್ಧ ಪ್ರಾರಂಭವಾಗುವ ಅಪಾಯ ಮತ್ತು ಕೊಲ್ಲಲ್ಪಡುವ ಬಗ್ಗೆ ಭಯಗೊಂಡಿದ್ದಾರೆಂದೂ ಹೇಳಲಾಗಿದೆ.

ಡೆನ್ಮಾರ್ಕ್ ದೇಶದ ಜನರಲ್ಲಿ ಕೆಲವರು ಮತ್ತು ರಾಜಕಾರಣಿಗಳಲ್ಲಿ ಕೆಲವರು ಪತ್ರಿಕೆಯ ವರ್ತನೆಯನ್ನು ಇಷ್ಟಪಡಲಿಲ್ಲ. ಕೆಲವರು ಹೀಗೆ ಸಹ ಅಭಿಪ್ರಾಯ ಸೂಚಿಸಿದರು: ಮುಸ್ಲಿಮರಿಗುಂಟಾದ ನೋವನ್ನು ನಿವಾರಿಸಲು ಒಂದು ದೊಡ್ಡ ಮಸ್‌ಜಿದ್ ನಿರ್ಮಿಸಿ ಮುಸ್ಲಿಮರಿಗೆ ಕೊಡಬೇಕು. ಅದರ ಖರ್ಚು ಇಲ್ಲಿನ ವಾಣಿಜ್ಯ ಸಂಸ್ಥೆಗಳು ವಹಿಸಬೇಕು. ಕೋಪನ್ ಹೇಗನ್ ನಗರದ ಸುಪ್ರೀಮ್ ಮೇಯರ್ ಈ ಸಲಹೆಯನ್ನು ಇಷ್ಟಪಟ್ಟರು. ಮುಸ್ಲಿಮರಲ್ಲಿ ಬಹುತೇಕ ಜನರು ಹೇಳುವುದೇನೆಂದರೆ, ಪತ್ರಿಕೆ ಕ್ಷಮೆ ಯಾಚಿಸಿದ ಕಾರಣ ಅದನ್ನು ಅಂಗೀಕರಿಸಬೇಕು. ಆದರೆ 27 ಸಂಸ್ಥೆಗಳ ಪ್ರತಿನಿಧಿ ಎಂದು ಹೇಳಿಕೊಳ್ಳುವ ಒಬ್ಬ ಮುಸ್ಲಿಮ್ ನಾಯಕ ಹೇಳುವುದೇನೆಂದರೆ, "ಪತ್ರಿಕೆ ಇನ್ನೊಮ್ಮೆ ನಮ್ಮೆಲ್ಲರ ಮುಂದೆ ಬಂದು ಕ್ಷಮೆ ಯಾಚಿಸಬೇಕು. ಹಾಗೆ ಮಾಡಿದರೆ ನಾವು ಮುಸ್ಲಿಮ್ ದೇಶಗಳಿಗೆ ಹೋಗಿ ಪ್ರತಿಭಟನೆಗಳನ್ನು ಕೊನೆಗೊಳಿಸಲು ಹೇಳುವೆವು." ಅವರು ಇಸ್ಲಾಮ್ ಧರ್ಮದ ವಿಚಿತ್ರ ಭಯಾನಕ ಚಿತ್ರ ರಚಿಸಲು ಪ್ರಯತ್ನಿಸುತ್ತಿದ್ದಾರೆ. ಶಾಂತಿ ಸಂಧಾನಕ್ಕೆ ಕೈಚಾಚುವುದಕ್ಕೆ ಬದಲಾಗಿ ಕಲಹದ ಕಡೆಗೆ ಅವರು ಅಭಿಮುಖೀಕರಿಸುತ್ತಾರೆ. ಇಂತಹ ಕಲಹದೊಂದಿಗೆ ಅಹ್ಮದಿಯಾ ಜಮಾಅತ್‌ಗೆ ಯಾವ ಸಂಬಂಧವೂ ಇಲ್ಲ. ಆದರೆ ನಮ್ಮ ಪ್ರಚಾರ ಕೇಂದ್ರಗಳಿಗೆ ಫೋನ್‌ಗಳು ಬರುತ್ತವೆ. ನಾವು ಹಾಗೆ ಮಾಡುವೆವು, ಹೀಗೆ ಮಾಡುವೆವು ಎಂದು ಬರೆದ ಬೆದರಿಕೆ ಪತ್ರಗಳು ಬರುತ್ತಿವೆ. ನಮ್ಮ ಜಮಾಅತ್‌ನ ಮಸ್‌ಜಿದ್‌ಗಳನ್ನು ಮತ್ತು ಪ್ರಚಾರ ಕೇಂದ್ರಗಳನ್ನು ಅಲ್ಲಾಹನು ಸಂರಕ್ಷಿಸಲಿ; ಶತ್ರುಗಳ ಕೆಡುಕುಗಳಿಂದ ಕಾಪಾಡಲಿ ಎಂದು ಅಲ್ಲಾಹನನ್ನು ಬೇಡಿಕೊಳ್ಳುತ್ತೇವೆ.

ತಪ್ಪು ಪ್ರತಿಕ್ರಿಯೆಗೆ ಉತ್ತರವು ಸಹ ತಪ್ಪಾದ ರೀತಿಯಲ್ಲಿಯೇ ಆಗುವುದು. ಅವರು ಕ್ಷಮೆ ಯಾಚಿಸಿದರು. ಅದಕ್ಕೆ ತಪ್ಪು ಪ್ರತಿಕ್ರಿಯೆ ಮುಸ್ಲಿಮರ ಕಡೆಯಿಂದ ಉಂಟಾದ ಕಾರಣ ದೌರ್ಜನ್ಯಗಾರರಾದ ಅವರೇ ಈಗ ದೌರ್ಜನ್ಯ ಪೀಡಿತರ ಹಾಗೆ ವರ್ತಿಸಲು ತೊಡಗಿದರು. ಈಗ ನೋಡಿರಿ; ಡೆನ್ಮಾರ್ಕ್‌ನವರು ಕ್ಷಮೆ ಯಾಚಿಸಿದರೂ ಮುಸ್ಲಿಮರು ಹಟ ತೋರಿಸುತ್ತಿದ್ದಾರೆ. ಮುಸ್ಲಿಮರು ಸ್ವಲ್ಪ ಬುದ್ಧಿ ಉಪಯೋಗಿಸಬೇಕು. ಪ್ರಜ್ಞಾವಂತರಾಗಿ

ತಮ್ಮ ಪ್ರತಿಕ್ರಿಯೆಯ ರೀತಿಯನ್ನು ಬದಲಾಯಿಸಬೇಕು.

## ಅಹ್ಮದಿಯರ ಪ್ರತಿಕ್ರಿಯೆಯ ರೀತಿ

ನಾನು ಮೊದಲು ಹೇಳಿದ ಹಾಗೆ, ಪ್ರಾಯಶಃ, ಅಲ್ಲ ಖಂಡಿತವಾಗಿ ಪತ್ರಿಕೆಯ ಈ ಕೆಲಸದಿಂದ ಅತ್ಯಂತ ಹೆಚ್ಚು ನೋವು ಉಂಟಾದುದು ನಮ್ಮ ಹೃದಯಗಳಿಗಾಗಿದೆ. ಆದರೆ ನಮ್ಮ ಪ್ರತಿಕ್ರಿಯೆಯ ರೀತಿ ಬೇರೆಯೇ ಆಗಿದೆ. ನಾನು ಹೇಳಲು ಬಯಸುವುದೇನೆಂದರೆ, ಇಂತಹ ಘಟನೆಗಳು ಆಗಾಗ, ಮುಂದೆ ಸಹ ಸಂಭವಿಸಬಹುದು. ಮುಸ್ಲಿಮರ ಹೃದಯಗಳಿಗೆ ನೋವುಂಟುಮಾಡುವ ಯಾವುದಾದರೂ ಕೆಲಸ ಅವರು ಮುಂದೆ ಸಹ ಮಾಡಲು ಸಾಧ್ಯವಿದೆ. ಇದರ ಉದ್ದೇಶ, ಮುಸ್ಲಿಮರ ಮೇಲೆ, ಪೂರ್ವದೇಶಗಳಿಂದ ಮತ್ತು ವಿಶಿಷ್ಟವಾಗಿ ಭಾರತ–ಪಾಕಿಸ್ತಾನ ಉಪಭೂಖಂಡದಿಂದ ಪಾಶ್ಚಿಮಾತ್ಯ ದೇಶಗಳಿಗೆ ವಲಸೆ ಬಂದ ಮುಸ್ಲಿಮರ ಮೇಲೆ ನಿರ್ಬಂಧಗಳನ್ನು ಹೇರುವ ಪ್ರಯತ್ನದ ಭಾಗವಾಗಿರಲೂಬಹುದು. ಆದರೆ ನಿರ್ಬಂಧಗಳನ್ನು ಜಾರಿಗೊಳಿಸಿದರೂ ಇಲ್ಲವಾದರೂ ನಾವು ನಮ್ಮ ವರ್ತನೆಗಳನ್ನು ಇಸ್ಲಾಮೀ ಉಪದೇಶಗಳಿಗೆ ಮತ್ತು ಮೌಲ್ಯಗಳಿಗನುಸಾರವಾಗಿ ರೂಪಿಸಬೇಕಾಗಿದೆ.

ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರ ವಿರುದ್ಧ ಆರಂಭದಿಂದಲೇ ಗೂಢ ಕಾರಸ್ಥಾನಗಳನ್ನು ಹೂಡಲಾಗುತ್ತಿತ್ತು. ಆದರೆ ಅಲ್ಲಾಹನು ಇಸ್ಲಾಮನ್ನು ಸಂರಕ್ಷಿಸುವ ವಾಗ್ದಾನ ನೀಡಿರುವ ಕಾರಣ ಅವನು ಸಂರಕ್ಷಣೆ ನೀಡುತ್ತಾ ಇರುತ್ತಾನೆ. ವಿರೋಧಿಗಳ ಎಲ್ಲ ಪ್ರಯತ್ನಗಳು ಸೋತುಹೋಗುತ್ತವೆ.

## ಇಸ್ಲಾಮ್ ಮತ್ತು ಹಝ್ರತ್ ಪೈಗಂಬರರ(ಸ) ವಿರುದ್ಧ ಹೂಡಲಾಗುವ ಗುಪ್ತ ಷಡ್ಯಂತ್ರಗಳನ್ನು ತಡೆಯುವವರು ಹಝ್ರತ್ ಮಸೀಹ್ ಮೌಊದ್(ಅ)

ಈ ಕಾಲಘಟ್ಟದಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರನ್ನು(ಅ) ಈ ಉದ್ದೇಶಲಕ್ಷ್ಯಕ್ಕೋಸ್ಕರ ನೇಮಿಸಿದನು. ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ಉಂಟಾದ ದೂಷಣೆಗಳು ಮತ್ತು ಅವುಗಳನ್ನು ಹಝ್ರತ್ ಮಸೀಹ್ ಮೌಊದ್(ಅ) ಹಾಗೂ ಅನಂತರ ಅವರ ಉಪದೇಶಗಳನ್ನು ಅನುಸರಿಸಿ ಆಯಾಕಾಲದ ಖಲೀಫರು ಜಮಾಅತ್‌ಗೆ ಮಾರ್ಗದರ್ಶನ ನೀಡುತ್ತಾ ಇದ್ದು ಆ ಪ್ರಕಾರ ಜಮಾಅತ್ ಪ್ರತಿಕ್ರಿಯೆ ನೀಡುತ್ತಾ ಇದ್ದುದು ಮತ್ತು ಅದರಿಂದ ಉಂಟಾದ ಪರಿಣಾಮ ಇವುಗಳ ಬಗ್ಗೆ ಒಂದೆರಡು ಉದಾಹರಣೆ ನಿಮ್ಮ ಮುಂದಿಡುತ್ತೇನೆ. ನಾವು ಹರತಾಳ ಆಚರಿಸುವುದರಲ್ಲಿ ಅಹ್ಮದಿಯೇತರರೊಂದಿಗೆ ಜೊತೆ ಸೇರದಿರುವುದರಿಂದ ಹಝ್ರತ್ ಪೈಗಂಬರರ(ಸ) ವಿರುದ್ಧ ಕೊಳಕೆಸೆಯುವ ಶತ್ರುಗಳ ವರ್ತನೆಯ ಬಗ್ಗೆ ನಮಗೆ ನೋವಿಲ್ಲ ಎಂದು ಸಾಬೀತುಗೊಳಿಸುತ್ತಿದ್ದೇವೆ ಎಂದು ಆರೋಪಿಸುವವರಿಗೆ ಜಮಾಅತ್ ಏನು ಮಾಡಿದೆ ಎಂಬುದನ್ನು ಸ್ಪಷ್ಟಗೊಳಿಸಲು ಬಯಸುತ್ತೇನೆ.

ನಮ್ಮ ಪ್ರತಿಕ್ರಿಯೆ ಯಾವಾಗಲೂ ಹೇಗೆ ಇರುತ್ತದೆ ಮತ್ತು ಯಾವಾಗಲೂ ಹೇಗೆ ಇರಬೇಕೆಂದರೆ, ಅದರ ಮೂಲಕ ಹಝ್ರತ್ ಪೈಗಂಬರರ(ಸ) ಉಪದೇಶ ಮತ್ತು ನಡೆವಳಿಕೆ ಜನರಿಗೆ ಸ್ಪಷ್ಟವಾಗಿ ತಿಳಿಯಬೇಕು. ಅದರೊಂದಿಗೆ ಪವಿತ್ರ ಖುರ್‌ಆನಿನ

ಉಪದೇಶ ಸಹ ಸ್ಪಷ್ಟವಾಗಿ ಜನರ ಮುಂದೆ ಬರಬೇಕು. ಹಝ್ರತ್ ಪೈಗಂಬರರ(ಸ) ವಿರುದ್ಧ ಕೊಳಕು ದೋಷಾರೋಪಗಳನ್ನು ನೋಡುವಾಗ ನಾವು ಹಿಂಸಾಚಾರ ಮತ್ತು ಧ್ವಂಸ ಕಾರ್ಯಗಳಿಗೆ ಮುಂದಾಗದೆ ಅಲ್ಲಾಹನ ಮುಂದೆ ಸಾಷ್ಟಾಂಗ ಪ್ರಣಾಮ ಮಾಡಿ ಅವನ ಸಹಾಯವನ್ನು ಬೇಡಿಕೊಳ್ಳುತ್ತೇವೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸತ್ಯಸಂಧನಾದ ಪ್ರೇಮಿ ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಪೈಗಂಬರರ(ಸ) ಬಗ್ಗೆ ಹೊಂದಿದ್ದ ಪ್ರೇಮಾಭಿಮಾನದ ಬಗ್ಗೆ ಎರಡು ಉದಾಹರಣೆಗಳನ್ನು ನೀಡುತ್ತೇನೆ.

ಪ್ರಥಮ ಉದಾಹರಣೆ ಅಬ್ದುಲ್ಲಾ ಆಥಮ್‌ನದಾಗಿದೆ. ಆತನು ಕ್ರೈಸ್ತನಾಗಿದ್ದನು. ಆತನು ತನ್ನ ಗ್ರಂಥದಲ್ಲಿ ತನ್ನ ಅತ್ಯಂತ ಕೊಳಕು ಬುದ್ಧಿಯನ್ನು ಪ್ರಕಟಿಸುತ್ತಾ ಹಝ್ರತ್ ಪೈಗಂಬರರನ್ನು(ಸ) "ದಜ್ಜಾಲ್" (ಮಹಾ ಸುಳ್ಳುಗಾರ) ಎಂದು ಕರೆದಿದ್ದನು. ಆತನು ಕ್ರೈಸ್ತರ ಪರವಾಗಿ ಹಝ್ರತ್ ಮಸೀಹ್ ಮೌಊದ್‌ರ(ಅ) ವಿರುದ್ಧ ಹದಿನೈದು ದಿವಸಗಳ ಕಾಲ ಒಂದು ವಾದ ಪ್ರತಿವಾದದಲ್ಲಿ ನಿರತನಾಗಿದ್ದನು. ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ: ಆಥಮ್ ಹಝ್ರತ್ ಪೈಗಂಬರರ(ಸ) ವಿರುದ್ಧ ಬಳಸಿದ ಪದದ ಬಗ್ಗೆ ಶಿಕ್ಷಿಸಲ್ಪಡಲು ನಾನು ವಾದ ಪ್ರತಿವಾದ ಕಾಲದಲ್ಲಿ ಪ್ರಾರ್ಥಿಸುತ್ತಾ ಇದ್ದೆ. ವಾದ ಪ್ರತಿವಾದ ಮುಗಿದ ನಂತರ ನಾನು ಆಥಮ್‌ನೊಂದಿಗೆ ಹೇಳಿದೆ: "ಒಂದು ಚರ್ಚೆ ಮುಗಿಯಿತು. ಆದರೆ ಇನ್ನೊಂದು ರೀತಿಯ ಸ್ಪರ್ಧೆ ಬಾಕಿಯಿದೆ. ನೀವು ನಿಮ್ಮ ಪುಸ್ತಕ "ಅಂದರೂನಯೆ ಬೈಬಲ್"ನಲ್ಲಿ ನಮ್ಮ ಹಝ್ರತ್ ಪೈಗಂಬರರನ್ನು(ಸ) ದಜ್ಜಾಲ್ ಎಂದು ಕರೆದಿರುವಿರಿ. ನಾನು ಹಝ್ರತ್ ಪೈಗಂಬರರನ್ನು(ಸ) ಸತ್ಯವಂತನೆಂದು ನಂಬುತ್ತೇನೆ. ಇಸ್ಲಾಮ್ ಧರ್ಮ ಅಲ್ಲಾಹನ ಕಡೆಯಿಂದ ಬಂದುದೆಂದು ದೃಢವಾಗಿ ನಂಬುತ್ತೇನೆ. ಆದ್ದರಿಂದ ಇದು ಆಕಾಶದಿಂದ ನಿರ್ಧಾರವಾಗಬೇಕಾದ ಸ್ಪರ್ಧೆಯಾಗಿದೆ. ನಮ್ಮ ಪೈಕಿ ಯಾರು ಸುಳ್ಳುಗಾರನಾಗಿದ್ದಾನೋ ಹಝ್ರತ್ ಪೈಗಂಬರರನ್ನು(ಸ) ಅನ್ಯಾಯದಿಂದ ಕಾಧ್ಹಿಬ್ (ಸುಳ್ಳುಗಾರ) ಮತ್ತು ದಜ್ಜಾಲ್ (ಮಹಾ ಸುಳ್ಳುಗಾರ) ಎಂದು ಕರೆಯುತ್ತಾನೋ ಮತ್ತು ಸತ್ಯದ ಶತ್ರುವಾಗಿದ್ದಾನೋ ಅವನು ಸತ್ಯವಂತನಾದವನ ಜೀವಿತದಲ್ಲಿ ಇಂದಿನಿಂದ ಹದಿನೈದು ತಿಂಗಳೊಳಗೆ ನರಕವಾಸಿಯಾಗುವನು – ಅವನು ಸತ್ಯದ ಕಡೆಗೆ ಮರಳಿ ಬಂದರೆ ಹೊರತು. ಎಂದರೆ ಸತ್ಯವಂತನಾದ ಪೈಗಂಬರರನ್ನು(ಸ) ದಜ್ಜಾಲ್ ಎಂದು ಕರೆಯುವುದನ್ನು ಬಿಟ್ಟು ಬಿಡದಿದ್ದರೆ, ನಿರ್ಭಯವಾಗಿ ಬೈಯ್ಯುವುದನ್ನು ಬಿಟ್ಟು ಬಿಡದಿದ್ದರೆ ಅವನು ಶಿಕ್ಷೆಗೆ ಗುರಿಯಾಗುವನು.

ಹೀಗೆ ಹೇಳಲು ಕಾರಣವೇನೆಂದರೆ, ಯಾವುದಾದರೂ ಧರ್ಮವನ್ನು ಅಂಗೀಕರಿಸದೆ ನಿರಾಕರಿಸುವುದರಿಂದ ಇಹಲೋಕದಲ್ಲಿ ಶಿಕ್ಷೆಗೆ ಯಾರೂ ಗುರಿಯಾಗುವುದಿಲ್ಲ. ಆದರೆ ನಿರ್ಭಯದಿಂದ ಮತ್ತು ಅಹಂಕಾರದಿಂದ ಧರ್ಮವನ್ನು ನಿಂದಿಸುವುದು ಮತ್ತು ಬೈಯ್ಯುವುದು ಶಿಕ್ಷಾರ್ಹವಾಗುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ಆತನೊಂದಿಗೆ ಹಾಗೆ ಹೇಳಿದಾಗ ಆತನ ಮುಖ ಕಳೆಗುಂದಿತು. ಆತನ ಮುಖ ಹಳದಿ ವರ್ಣ ಪಡೆಯಿತು. ಕೈಗಳು ಕಂಪಿಸಲು ತೊಡಗಿದವು. ಆತನು ತಡಮಾಡದೆ ನಾಲಗೆ ಹೊರ ಚಾಚಿದನು. ಎರಡು ಕೈಗಳನ್ನು ಕಿವಿಗಳಿಗೆ ಒತ್ತಿ ಹಿಡಿದನು. ಕೈಗಳನ್ನೂ ತಲೆಯೊಂದಿಗೆ ಅಲ್ಲಾಡಿಸಿದನು.

ಅಪರಾಧಿಯಾದವನು ತನ್ನ ಅಪರಾಧವನ್ನು ತೀವ್ರವಾಗಿ ನಿರಾಕರಿಸಿ ಪಶ್ಚಾತ್ತಾಪಗೊಂಡು ಪ್ರಾರ್ಥಿಸುವ ಹಾಗೆ ತನ್ನನ್ನು ತೋರಿಸುತ್ತಿದ್ದನು. ಆತನು ಪದೇ ಪದೇ "ತೋಬಾ ತೋಬಾ", ನಾನು ಗೌರವ ಹೀನತೆ ಪ್ರಕಟಿಸಿಲ್ಲ ಎಂದು ಹೇಳುತ್ತಿದ್ದನು. ಅನಂತರ ಸಹ ಆತನು ಇಸ್ಲಾಮಿನ ವಿರುದ್ಧ ಎಂದೂ ಮಾತನಾಡಲಿಲ್ಲ. ಇದಾಗಿದೆ ಹಝ್ರತ್ ಪೈಗಂಬರರ(ಸ) ಬಗ್ಗೆ ಪ್ರೇಮಾಭಿಮಾನ ಹೊಂದಿದ್ದ ಅಲ್ಲಾಹನ ಸಿಂಹವಾಗಿದ್ದ ಹಝ್ರತ್ ಮಸೀಹ್ ಮೌಊದ್‌ರ(ಅ) ಪ್ರತಿಕ್ರಿಯೆ. ಅವರು ಹಝ್ರತ್ ಪೈಗಂಬರರನ್ನು(ಸ) ನಿಂದಿಸುವವರ ವಿರುದ್ಧ ಪಂಥಾಹ್ವಾನ ನೀಡುತ್ತಿದ್ದರು.

ಇನ್ನೊಂದು ಘಟನೆ ಲೇಖ್‌ರಾಮ್‌ಗೆ ಸಂಬಂಧಿಸಿದೆ. ಆತನು ಹಝ್ರತ್ ಪೈಗಂಬರರನ್ನು(ಸ) ನಿಂದಿಸುತ್ತಾ, ಬೈಯುತ್ತಾ ಲೇಖನಗಳನ್ನು ಪ್ರಕಟಿಸುತ್ತಿದ್ದನು. ಆತನ ಈ ಕೆಟ್ಟ ವರ್ತನೆ ಬಿಟ್ಟು ಬಿಡಬೇಕೆಂದು ಆತನೊಂದಿಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರೂ ಆತನು ಅದಕ್ಕೆ ಕಿವಿಗೊಡಲಿಲ್ಲ. ಕೊನೆಯದಾಗಿ ಆತನ ವಿರುದ್ಧ ಹಝ್ರತ್ ಮಸೀಹ್ ಮೌಊದ್(ಅ) ಪ್ರಾರ್ಥಿಸಿದಾಗ ಅಲ್ಲಾಹನು ಲೇಖ್‌ರಾಮನ ದಾರುಣ ಅಂತ್ಯದ ಬಗ್ಗೆ ತಿಳಿಸಿದನು.

ಹಝ್ರತ್ ಮಸೀಹ್ ಮೌಊದ್(ಅ) ಈ ಘಟನೆ ಬಗ್ಗೆ ಹೀಗೆ ಹೇಳುತ್ತಾರೆ: "ಅಲ್ಲಾಹ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಒಬ್ಬ ಶತ್ರು ಹಝ್ರತ್ ಪೈಗಂಬರರನ್ನು(ಸ) ಬೈಯುತ್ತಾ ಇದ್ದನು. ಆತನು ಕೊಳಕು ಮಾತುಗಳನ್ನು ಬಳಸುತ್ತಿದ್ದನು. ಆತನ ಹೆಸರು ಲೇಖ್‌ರಾಮ್ ಎಂದಾಗಿತ್ತು. ಅಲ್ಲಾಹನು ನನಗೆ ವಾಗ್ದಾನ ನೀಡಿದನು. ನನ್ನ ಪ್ರಾರ್ಥನೆಯನ್ನು ಅಂಗೀಕರಿಸಿದನು. ನಾನು ಲೇಖ್‌ರಾಮನ ವಿರುದ್ಧ ಪ್ರಾರ್ಥಿಸಿದಾಗ ಅಲ್ಲಾಹನು ನನಗೆ ಹೀಗೆ ತಿಳಿಸಿದನು: "ಲೇಖರಾಮ್ ಆರು ವರ್ಷದೊಳಗೆ ನಾಶವಾಗುವನು. ಸತ್ಯ ಧರ್ಮವನ್ನು ಅನ್ವೇಷಿಸುವವರಿಗೆ ಇದು ದೃಷ್ಟಾಂತವಾಗುವುದು." ಹೀಗೆಯೇ ಸಂಭವಿಸಿತು. ಆತನು ಬಹಳ ದಾರುಣವಾಗಿ ಮರಣ ಹೊಂದಿದನು."

## ಹಝ್ರತ್ ಪೈಗಂಬರರ(ಸ) ಉತ್ತಮ ಜೀವಿತ ಶೈಲಿಯನ್ನು ಲೋಕದ ಮುಂದೆ ಇರಿಸಿರಿ

ನಮಗೆ ಹಝ್ರತ್ ಮಸೀಹ್ ಮೌಊದ್(ಅ) ಇದೇ ಕಾರ್ಯ ರೀತಿಯನ್ನು ಕಲಿಸಿದರು. ನೀಚವಾಗಿ ವರ್ತಿಸುವವರಿಗೆ ಹಝ್ರತ್ ಪೈಗಂಬರರ(ಸ) ಉನ್ನತ ನೈತಿಕ ಗುಣಗಳ ಬಗ್ಗೆ ಮನವರಿಕೆ ಮಾಡಿಕೊಡಿರಿ. ಲೋಕದ ದೃಷ್ಟಿಯಿಂದ ಮರೆಯಾಗಿರುವ ಹಝ್ರತ್ ಪೈಗಂಬರರ(ಸ) ಸುಂದರ ಮತ್ತು ಪ್ರಕಾಶಮಾನವಾದ ಸ್ವಭಾವ ಗುಣಗಳನ್ನು ವಿವರಿಸಿಕೊಡಿರಿ. ಅಲ್ಲಾಹನು ಅವರನ್ನು ಅವರ ನೀಚ ಕೃತ್ಯಗಳಿಂದ ತಡೆಯಲಿ ಅಥವಾ ಅವರನ್ನು ಸ್ವತಃ ಹಿಡಿಗೂಡಲಿ ಎಂದು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ಅಲ್ಲಾಹನು ಹಿಡಿಗೂಡುವ ಸ್ವಂತ ವಿಧಾನಗಳು ಇರುತ್ತವೆ. ಯಾರನ್ನು ಯಾವ ರೀತಿ ಹಿಡಿಗೂಡಬೇಕೆಂದು ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ.

ದ್ವಿತೀಯ ಖಿಲಾಫತ್ ಕಾಲಘಟ್ಟದಲ್ಲಿ ಅತ್ಯಂತ ನೀಚ ಪುಸ್ತಕ "ರಂಗೀಲಾ ರಸೂಲ್" ಎಂಬ ಹೆಸರಲ್ಲಿ ಶತ್ರುಗಳು ಪ್ರಕಟಿಸಿದರು. ಅನಂತರ "ವರ್ತಮಾನ್" ಎಂಬ ಪತ್ರಿಕೆ ಒಂದು ಕೊಳಕು ಲೇಖನ ಪ್ರಕಟಿಸಿದಾಗ ಹಿಂದೂಸ್ಥಾನದ ಮುಸ್ಲಿಮರು ರೊಚ್ಚಿಗೆದ್ದರು.

ಮುಸ್ಲಿಮರು ಎಲ್ಲ ಕಡೆಗಳಲ್ಲೂ ತೀವ್ರವಾಗಿ ಪ್ರತಿಭಟಿಸಿದರು.

ಆಗ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು (ದ್ವಿತೀಯ ಖಲೀಫ) ಮುಸ್ಲಿಮರನ್ನು ಸಂಬೋಧಿಸಿ ಹೇಳಿದರು: ಸಹೋದರರೇ, ನಾನು ನೊಂದ ಹೃದಯದಿಂದ ನಿಮ್ಮೊಂದಿಗೆ ಹೇಳಲು ಬಯಸುತ್ತೇನೆ. ಜಗಳ ಮಾಡುವವನು ಶೂರನಲ್ಲ. ಅವನು ತನ್ನ ಸ್ವಾರ್ಥಭಿಲಾಷೆಯಿಂದ ದಬಾಯಿಸಲ್ಪಟ್ಟ ಹೇಡಿಯಾಗಿದ್ದಾನೆ. (ಇದು ಹದೀಸು ಪ್ರಕಾರ ಹೇಳಿದುದಾಗಿದೆ – ಕೋಪವನ್ನು ದಬಾಯಿಸುವವನು ಶೂರನಾಗಿದ್ದಾನೆಂಬ ಹದೀಸು.) ಶೂರನಾದವನು ಒಂದು ದೃಢ ನಿರ್ಧಾರ ಮಾಡುತ್ತಾನೆ. ತನ್ನ ನಿರ್ಧಾರವು ಈಡೇರುವ ತನಕ ಅದರಿಂದ ಅವನು ಹಿಂದೆ ಸರಿಯುವುದಿಲ್ಲ. ಇಸ್ಲಾಮಿನ ಅಭಿವೃದ್ಧಿಗೋಸ್ಕರ ಮೂರು ವಿಷಯಗಳ ಬಗ್ಗೆ ಪ್ರತಿಜ್ಞೆ ಮಾಡಿರಿ. ಪ್ರಥಮವಾಗಿ – ಅಲ್ಲಾಹನಿಗೆ ಭಯಪಟ್ಟುಕೊಂಡು ಕೆಲಸಮಾಡುವುದಾಗಿ ಮತ್ತು ಧರ್ಮವನ್ನು ಕಡೆಗಣಿಸಲಾರೆವೆಂದು ಪ್ರತಿಜ್ಞೆ ಮಾಡಿರಿ. ಮೊದಲನೆಯದಾಗಿ ನಿಮ್ಮ ಸ್ವಂತ ನಡೆವಳಿಕೆಗಳನ್ನು ಸರಿಪಡಿಸಿರಿ. ಎರಡನೆಯದಾಗಿ – ಇಸ್ಲಾಮ್ ಧರ್ಮದ ಪ್ರಚಾರಕ್ಕೋಸ್ಕರ ಸಂಪೂರ್ಣವಾದ ಆಸಕ್ತಿ ಹೊಂದುವಿರೆಂದು ಪ್ರತಿಜ್ಞೆ ಮಾಡಿರಿ. ಇಸ್ಲಾಮ್ ಧರ್ಮ ತತ್ವಗಳೇನೆಂದು ಲೋಕದ ಪ್ರತಿಯೊಬ್ಬನಿಗೆ ತಿಳಿಸಿಕೊಡಿರಿ. ಹಝ್ರತ್ ಪೈಗಂಬರರ(ಸ) ಶ್ರೇಷ್ಠತೆಗಳು, ಅವರ ಕೊಡುಗೆಗಳು, ಅವರ ಸುಂದರ ಜೀವಿತ ಶೈಲಿ ಜನರಿಗೆ ತಿಳಿಯುವಂತಾಗಲಿ. ಮೂರನೆಯದಾಗಿ – ಮುಸ್ಲಿಮರನ್ನು ಸಂಸ್ಕೃತಿ ಸಂಬಂಧವಾದ ಮತ್ತು ಆರ್ಥಿಕ ಸಂಬಂಧವಾದ ದಾಸ್ಯದಿಂದ ಬಿಡುಗಡೆಗೊಳಿಸಲು ಪೂರ್ಣವಾದ ಪ್ರಯತ್ನ ಮಾಡುವುದಾಗಿ ಪ್ರತಿಜ್ಞೆ ಮಾಡಿರಿ. **(ಅನ್‌ವಾರುಲ್ ಉಲೂಮ್ – ಸಂಪುಟ: 9 ಪುಟ: 555–556)**

ಮುಸ್ಲಿಮರಲ್ಲಿ ಸಾಮಾನ್ಯರೂ ಗಣ್ಯರೂ ನಾಯಕರೂ ಮಾಡಬೇಕಾದ ಪ್ರತಿಜ್ಞೆ ಇವುಗಳಾಗಿವೆ. ನೀವು ನೋಡಿರಿ, ಮುಸ್ಲಿಮ್ ದೇಶಗಳು ಸ್ವತಂತ್ರ ದೇಶಗಳೆಂದು ಕರೆಯಲ್ಪಡುತ್ತಿದ್ದರೂ ಅವು ಸಾಂಸ್ಕೃತಿಕ ಮತ್ತು ಆರ್ಥಿಕ ದಾಸ್ಯವನ್ನು ಅನುಭವಿಸುತ್ತಿವೆ. ಅವು ಪಾಶ್ಚಿಮಾತ್ಯ ದೇಶಗಳ ಔದಾರ್ಯದ ಆಕಾಂಕ್ಷೆ ಹೊಂದಿರುತ್ತವೆ. ಅವರನ್ನು ಅನುಕರಿಸಲು ಆಸಕ್ತರಾಗಿರುತ್ತಾರೆ. ಸ್ವತಃ ಕೆಲಸ ಮಾಡುವುದಿಲ್ಲ. ಹೆಚ್ಚಿನ ಮಟ್ಟಿಗೆ ನಾವು ಅವರನ್ನು ಅವಲಂಬಿಸಿಕೊಂಡಿರುತ್ತೇವೆ. ಇದೇ ಕಾರಣದಿಂದ ಪಾಶ್ಚಿಮಾತ್ಯರು ಮುಸ್ಲಿಮರ ಭಾವನೆಗಳ ವಿರುದ್ಧ ಆಗಾಗ ಆಟವಾಡುತ್ತಾ ಇರುತ್ತಾರೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನೀ (ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು) "ಸೀರುತುನ್ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್" ಎಂಬ ಹೆಸರಲ್ಲಿ ಸಮ್ಮೇಳನಗಳನ್ನು ನಡೆಸಲು ಪ್ರಾರಂಭಿಸಿದರು. ಇದಾಗಿದೆ ಪ್ರತಿಭಟನೆ ಮಾಡುವ ನಮ್ಮ ವಿಧಾನ. ಸ್ವತ್ತು ನಾಶಮಾಡುವುದು, ಕಲಹ ಪ್ರಾರಂಭಿಸುವುದು ನಮ್ಮ ರೀತಿ ಅಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಮುಸ್ಲಿಮರನ್ನು ಸಂಬೋಧಿಸಿ ಹೇಳಿದ ಮಾತುಗಳನ್ನು ಅಹ್ಮದಿಯರಾದ ನಾವು ಪೂರ್ಣವಾಗಿ ಕಾರ್ಯರೂಪಕ್ಕೆ ತರಬೇಕು.

ಪಾಶ್ಚಿಮಾತ್ಯ ದೇಶಗಳ ಕೆಲವು ಕೆಟ್ಟ ಆಚಾರಗಳು ನಮ್ಮ ಕೆಲವು ಕುಟುಂಬಗಳಲ್ಲಿ ಸದ್ದಿಲ್ಲದೆ ಪ್ರವೇಶಿಸುತ್ತಿವೆ. ನಾನು ಅಹ್ಮದಿಯರೊಂದಿಗೆ ಹೇಳಲು ಬಯಸುತ್ತೇನೆ: ನೀವು ಸಹ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರಿಂದ ಸಂಬೋಧಿಸಲ್ಪಟ್ಟವರಾಗಿರುವಿರಿ.

ಪಾಶ್ಚಿಮಾತ್ಯ ಸಂಸ್ಕೃತಿಯ ಉತ್ತಮ ವಿಚಾರಗಳನ್ನು ನೀವು ಸ್ವಂತಕ್ಕೆ ತೆಗೆದುಕೊಳ್ಳಿರಿ. ಆದರೆ ಅವರ ತಪ್ಪು ಆಚಾರಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು. ನಾವು ಪ್ರತಿಕ್ರಿಯೆ ನೀಡುವುದು ಹೊಡೆದು ಬಡಿದು ನಾಶಮಾಡಿ ಅಲ್ಲ. ಬದಲಾಗಿ, ನಾವು ನಮ್ಮ ನಡೆವಳಿಕೆಗಳನ್ನು ಪರಿಶೀಲಿಸಬೇಕು. ನಮ್ಮ ನಡತೆ ಹೇಗಿದೆ, ನಮ್ಮಲ್ಲಿ ದೇವಭಯ ಎಷ್ಟಿದೆ, ಅಲ್ಲಾಹನ ಆರಾಧನೆಯ ಕಡೆಗೆ ಎಷ್ಟು ಕಾಳಜಿ ಇದೆ, ಧಾರ್ಮಿಕ ಆಜ್ಞೆಗಳನ್ನು ಪಾಲಿಸುವ ಬಗ್ಗೆ ಎಷ್ಟು ನಿಷ್ಠೆ ಇದೆ, ಅಲ್ಲಾಹನ ಸಂದೇಶ ಅನ್ಯರಿಗೆ ತಲಪಿಸುವ ಬಗ್ಗೆ ಎಷ್ಟು ಆಸಕ್ತಿ ಇದೆ ಎಂಬುದನ್ನು ಪರಿಶೀಲಿಸಬೇಕು.

ಚತುರ್ಥ ಖಿಲಾಫತ್ ಕಾಲದಲ್ಲಿ ರುಶ್ದಿ ಅತ್ಯಂತ ಅಪಮಾನಕರ ಪುಸ್ತಕ ರಚಿಸಿದ್ದನು. ಆಗ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹು ತಆಲಾ) ಕೆಲವು ಖುತ್‌ಬಗಳನ್ನು ನೀಡಿದ್ದರು ಮತ್ತು ಆ ಕೃತಿಯನ್ನು ಖಂಡಿಸುವ ಒಂದು ಪುಸ್ತಕವನ್ನು ಬರೆಯಿಸಿದ್ದರು.

ನಾನು ಇದರ ಮೊದಲು ಹೇಳಿದ ಹಾಗೆ ಅಪಮಾನಿಸುವ ಕೆಲಸಗಳು ಆಗಾಗ ನಡೆಯುತ್ತಾ ಇರುತ್ತವೆ. ಕಳೆದ ವರ್ಷದ ಪ್ರಾರಂಭದಲ್ಲಿ ಹಝ್ರತ್ ಪೈಗಂಬರರನ್ನು[ಸ] ನಿಂದಿಸುವ ಒಂದು ಲೇಖನ ಪ್ರಕಟಗೊಂಡಿತ್ತು. ಆಗ ನಾನು ಜಮಾಅತ್‌ನೊಂದಿಗೆ ಮತ್ತು ಖುದ್ದಾಮ್, ಅನ್ಸಾರ್ ಘಟಕಗಳೊಂದಿಗೆ, ಆ ಲೇಖನವನ್ನು ಖಂಡಿಸಿ ಬರೆಯಲು, ಪತ್ರಗಳನ್ನು ರವಾನಿಸಲು ಮತ್ತು ಸಂಪರ್ಕವನ್ನು ವಿಶಾಲಗೊಳಿಸಲು ಹೇಳಿದ್ದೆ. ಹಝ್ರತ್ ಪೈಗಂಬರರ[ಸ] ಜೀವಿತದ ಸೌಂದರ್ಯಗಳನ್ನು ವಿವರಿಸಲು ಆದೇಶಿಸಿದ್ದೆ. ಹಝ್ರತ್ ಪೈಗಂಬರರ[ಸ] ಜೀವಿತದ ಸುಂದರ ಮಾದರಿಯನ್ನು ಲೋಕಕ್ಕೆ ತೋರಿಸಿ ಕೊಡುವುದು ವಿಧ್ವಂಸಕ ಕೃತ್ಯಗಳಿಂದ ಸಾಧ್ಯವಾಗದು. ಆದುದರಿಂದ ಪ್ರತಿಯೊಂದು ಶ್ರೇಣಿಯ ಅಹ್ಮದಿ ಪ್ರತಿಯೊಂದು ದೇಶದಲ್ಲಿ ಇತರ ವಿದ್ಯಾವಂತ ಬುದ್ಧಿವಂತ ಮುಸ್ಲಿಮರನ್ನು ಜೊತೆ ಸೇರಿಸಿ ಅವರೂ ಹೀಗೆ ಶಾಂತಿಯಿಂದ ತಮ್ಮ ಪ್ರತಿಕ್ರಿಯೆ ಸೂಚಿಸಲು, ಸಮಾಜದ ಜನರೊಂದಿಗೆ ಸಂಬಂಧಗಳನ್ನು ವರ್ಧಿಸಲು, ಲೇಖನಗಳನ್ನು ಬರೆಯಲು ಹೇಳಬೇಕು. ಹೀಗೆ ಮಾಡಿದರೆ ಪ್ರತಿಯೊಂದು ದೇಶದಲ್ಲಿ, ಪ್ರತಿಯೊಂದು ವರ್ಗದಲ್ಲಿ ಹಝ್ರತ್ ಪೈಗಂಬರರ[ಸ] ಬಗ್ಗೆ ಸರಿಯಾದ ಮಾಹಿತಿ ತಲಪುವುದು. ಅನಂತರವೂ ಯಾರಾದರೂ ದುರ್ವರ್ತನೆ ಗೈದರೆ ಅವನೊಂದಿಗೆ ಅಲ್ಲಾಹನು ಪ್ರತಿಕ್ರಿಯಿಸುವನು.

ಅಲ್ಲಾಹನು ಹಝ್ರತ್ ಪೈಗಂಬರರನ್ನು[ಸ] ರಹ್ಮತುಲ್ಲಿಲ್‌ಆಲಮೀನ್ – ಸಕಲ ಲೋಕಗಳಿಗೂ ಅನುಗ್ರಹವಾಗಿ ಕಳುಹಿಸಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ.

وَمَا أَرْسَلْنَاكَ إِلَّا رَحْمَةً لِّلْعَالَمِينَ

"ಲೋಕದ ಎಲ್ಲ ಜನರಿಗೆ ಒಂದು ಅನುಗ್ರಹವಾಗಿಯೇ ನಾವು ನಿನ್ನನ್ನು ಕಳುಹಿಸಿದ್ದೇವೆ." (21: 108)

ಹಝ್ರತ್ ಪೈಗಂಬರರಿಗಿಂತ[ಸ] ಶ್ರೇಷ್ಠ ವ್ಯಕ್ತಿ, ಅನುಗ್ರಹವನ್ನು ಅವರಿಗಿಂತ ಮಿಗಿಲಾಗಿ ಹಂಚುವ ವ್ಯಕ್ತಿ ಅವರಿಗಿಂತ ಹಿಂದೆ ಜನಿಸಲಿಲ್ಲ; ಮುಂದೆಯೂ ಜನಿಸಲಿಕ್ಕಿಲ್ಲ.

ಅವರ ಅನುಪಮೇಯ ಜೀವಿತ ಮಾದರಿ ಸದಾ ನೆಲೆ ನಿಂತಿದೆ. ಅದನ್ನು ಅನುಸರಿಸಿ ಜೀವಿಸಲು ಪ್ರತಿಯೊಬ್ಬ ಮುಸ್ಲಿಮನು ಪ್ರಯತ್ನಿಸಬೇಕಾಗಿದೆ. ಅದರ ಬಗ್ಗೆಯೂ ಎಲ್ಲರಿಗಿಂತ ಹೆಚ್ಚು ಹೊಣೆಗಾರಿಕೆ ಅಹ್ಮದಿಯರಿಗಿದೆ. ನಮ್ಮ ಮೇಲೆಯೇ ಆ ಹೊಣೆಗಾರಿಕೆ ಇದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸಕಲ ಲೋಕಗಳಿಗೆ ಅನುಗ್ರಹವಾಗಿದ್ದಾರೆ. ಆದರೆ ಅಹ್ಮದಿಯೇತರರು ಹಝ್ರತ್ ಪೈಗಂಬರರ(ಸ) ಬಗ್ಗೆ ತೋರಿಸುವಂತಹ ಚಿತ್ರದಿಂದ ಅತ್ಯಂತ ಭಯಾನಕ ಕಲ್ಪನೆಗಳು ಉದ್ಭವಿಸುತ್ತವೆ. ನಾವು ಹಝ್ರತ್ ಪೈಗಂಬರರ(ಸ) ಪ್ರೀತಿ, ವಾತ್ಸಲ್ಯ ಮತ್ತು ಕರುಣೆಯ ಮಾದರಿ ಜೀವಿತ ಲೋಕಕ್ಕೆ ತೋರಿಸಿಕೊಡಬೇಕು. ಆದರೆ ಇದಕ್ಕೋಸ್ಕರ ಮುಸ್ಲಿಮರು ತಮ್ಮ ವರ್ತನೆಗಳನ್ನು ಬದಲಾಯಿಸಬೇಕೆಂಬುದು ಸ್ಪಷ್ಟ. ಭೀಕರವಾದದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಝ್ರತ್ ಪೈಗಂಬರರು(ಸ) ಯಾವಾಗಲೂ ಯುದ್ಧ ಮಾಡುವುದರಿಂದ ದೂರವಿರಲು ಪ್ರಯತ್ನ ಮಾಡುತ್ತಿದ್ದರು – ಮದೀನದಲ್ಲಿ ಅವರ ಮೇಲೆ ಯುದ್ಧವನ್ನು ಶತ್ರುಗಳು ಹೇರುವ ತನಕ. ಅಲ್ಲಾಹನ ಅನುಮತಿ ದೊರೆತ ನಂತರ ಆತ್ಮರಕ್ಷಣೆಗೋಸ್ಕರ ಯುದ್ಧ ಮಾಡಬೇಕಾಯಿತು. ಆಗ ಸಹ ಅವರಿಗೆ ದೊರೆತ ಆಜ್ಞೆ ಹೀಗಿತ್ತು:

وَقَاتِلُوا فِي سَبِيلِ اللَّهِ الَّذِينَ يُقَاتِلُونَكُمْ وَلَا تَعْتَدُوا إِنَّ اللَّهَ لَا يُحِبُّ الْمُعْتَدِينَ

"(ಓ ಮುಸ್ಲಿಮರೇ,) ನಿಮ್ಮ ವಿರುದ್ಧ ಯುದ್ಧಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ." **(ಪವಿತ್ರ ಖುರ್‌ಆನ್ 2:191)**

ಹಝ್ರತ್ ಪೈಗಂಬರರು(ಸ) ಅಲ್ಲಾಹನಿಂದ ತಮಗೆ ಅವತೀರ್ಣ ವಾದ ಆಜ್ಞೆಗಳನ್ನು ಅತ್ಯಂತ ನಿಷ್ಠೆಯಿಂದ ಪಾಲಿಸುವವರಾಗಿದ್ದರು. ಅವರ ಬಗ್ಗೆ ಇಂತಹ ಅನುಚಿತವಾದ ವಿಚಾರಗಳನ್ನು ಪ್ರಕಟಿಸುವುದು ಅತ್ಯಂತ ಅಕ್ರಮ ಕೃತ್ಯವಾಗಿದೆ.

ವ್ಯಂಗ್ಯ ಚಿತ್ರ ಪ್ರಕಟಿಸಿದವರು ಕ್ಷಮೆ ಕೇಳಿದರು. ಅವರಲ್ಲೊಬ್ಬರು ಕ್ಷಮೆ ಯಾಚಿಸಿದ್ದಾರೆಂದು ನಮ್ಮ ಮುಬಲ್ಲಿಗರೂ ವರದಿ ಮಾಡಿದ್ದಾರೆ.

## ವ್ಯಂಗ್ಯ ಚಿತ್ರ ಪ್ರಕಟವಾದ ತಕ್ಷಣ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪ್ರತಿಭಟಿಸಿದ ವಿಧಾನ

ಅಹ್ಮದಿಯೇತರ ಮುಸ್ಲಿಮರು ಹರತಾಳ ಆಚರಿಸಿ ನಾಶ ನಷ್ಟಗಳನ್ನುಂಟುಮಾಡುವುದರಲ್ಲಿ ಉತ್ಸಾಹ ತೋರಿಸುತ್ತಾರೆ. ಅವರು ಪ್ರತಿಭಟಿಸುವ ರೀತಿಯೇ ಹಾಗೆ. ಆದರೆ ಅಹ್ಮದಿಯಾ ಜಮಾಅತ್ ವ್ಯಂಗ್ಯ ಚಿತ್ರ ಪ್ರಕಟವಾದ ಕೂಡಲೆ ತನ್ನ ಕೆಲಸ ಪ್ರಾರಂಭಿಸಿತು. ನಮ್ಮ ಜಮಾಅತ್‌ನವರು ಪತ್ರಿಕೆಗಳನ್ನು ಸಂಪರ್ಕಿಸಿದರು. ಇದು ಇಂದಿನ ಮಾತಲ್ಲ. ಈಗ 2006 ಫೆಬ್ರವರಿಯಿಂದ ಅಹ್ಮದಿಯೇತರ ಮುಸ್ಲಿಮರು ಹರತಾಳ ಆಚರಿಸುತ್ತಿದ್ದಾರೆ. ಆದರೆ ವ್ಯಂಗ್ಯ ಚಿತ್ರಗಳು ಕಳೆದ ವರ್ಷ ಸೆಪ್ಟಂಬರ್‌ನಲ್ಲಿ ಪ್ರಕಟವಾದ ಕೂಡಲೆ, ಎಂದರೆ ಸೆಪ್ಟಂಬರ್ ತಿಂಗಳ ಕೊನೆಗೆ ಅಥವಾ ಅಕ್ಟೋಬರ್ ತಿಂಗಳ ಆರಂಭದಲ್ಲಿ ನಮ್ಮ ಮುಬಲ್ಲಿಗರು ಒಂದು ವಿಶದವಾದ ಲೇಖನ ಸಿದ್ಧಪಡಿಸಿದರು. ವ್ಯಂಗ್ಯ ಚಿತ್ರ ಪ್ರಕಟಿಸಿದ ಪತ್ರಿಕೆಗೆ ಇದನ್ನು ಕಳುಹಿಸಿ ಕೊಟ್ಟರು ಮತ್ತು ವ್ಯಂಗ್ಯ ಚಿತ್ರಗಳ ಬಗ್ಗೆ ತಮ್ಮ ವಿರೋಧವನ್ನು ಸೂಚಿಸಿದರು. ಹಝ್ರತ್ ಮಸೀಹ್ ಮೌಊದ್‌ರವರ(ಅ)

ಅಧ್ಯಾಪನೆ ಬಗ್ಗೆ ಹೇಳಿದರು. ಅಂದರೆ, "ನಮ್ಮ ಪ್ರತಿಭಟನೆ ಈ ರೀತಿಯಾಗಿದೆ. ನಾವು ಮೆರವಣಿಗೆ ಹೊರಟು ಪ್ರತಿಭಟಿಸಲಾರೆವು. ಆದರೆ ನಿಮ್ಮೊಂದಿಗೆ ಲೇಖನಿ ಮೂಲಕ ಜಿಹಾದ್ ಮಾಡುವೆವು. ನೀವು ವ್ಯಂಗ್ಯ ಚಿತ್ರ ಪ್ರಕಟಿಸಿದ ಬಗ್ಗೆ ನಮ್ಮ ವಿಷಾದವನ್ನು ಪ್ರಕಟಿಸುತ್ತೇವೆ. ಮನಸ್ಸಾಕ್ಷಿಯ ಸ್ವಾತಂತ್ರ್ಯ, ಅಭಿಪ್ರಾಯದ ಸ್ವಾತಂತ್ರ್ಯ ಇರಬಹುದು. ಆದರೆ ಅದರ ಅರ್ಥ ಅನ್ಯರ ಹೃದಯವನ್ನು ನೋಯಿಸುವುದಲ್ಲ." ಇದಕ್ಕೆ ಉತ್ತಮ ಪ್ರತಿಕ್ರಿಯೆ ದೊರಕಿತು. ಒಂದು ಲೇಖನವನ್ನು ಪತ್ರಿಕೆ ಪ್ರಕಟಿಸಿತು. ಡೇನಿಷ್ ಜನರು ಉತ್ತಮವಾಗಿ ಪ್ರತಿಕ್ರಿಯೆ ನೀಡಿದರು. ಅವರು ಫೋನ್ ಮೂಲಕ ಮತ್ತು ಪತ್ರಗಳ ಮೂಲಕ ನಮ್ಮ ಲೇಖನದ ಬಗ್ಗೆ ಮೆಚ್ಚಿಗೆ ಸೂಚಿಸಿದರು. ಅನೇಕ ಸಂದೇಶಗಳು ಲಭಿಸಿದುವು. ಜರ್ನಲಿಸ್ಟ್ ಯೂನಿಯನ್ ಪ್ರಸಿಡೆಂಟರು ಒಂದು ಸಭೆಗೆ ಆಮಂತ್ರಿಸಿದರು. ಅಲ್ಲಿಗೆ ನಮ್ಮ ಮುಬಲ್ಲಿಗ್ ಹೋಗಿ ಹೇಳಿದರು: ನಿಮ್ಮ ನಿಯಮಗಳು ಅಭಿಪ್ರಾಯ ಸ್ವಾತಂತ್ರ್ಯದ ಹಕ್ಕು ನೀಡುತ್ತದೆ. ಆದರೆ ಅದರ ಅರ್ಥ ವಾಸ್ತವಿಕವಾಗಿ ಅನ್ಯ ಧರ್ಮದವರ ನಾಯಕರನ್ನೂ ಆದರಣೀಯ ಮಹಾಪುರುಷರನ್ನೂ ಅವಮಾನಿಸಬಹುದೆಂಬುದಲ್ಲ. ಇಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರು ಸಮಾಜದಲ್ಲಿ ಒಟ್ಟಿಗೆ ಜೀವಿಸುತ್ತಿದ್ದಾರೆ. ಆದುದರಿಂದ ಅವರ ಭಾವನೆಗಳ ಬಗ್ಗೆ ಗಮನಿಸಬೇಕಾದುದು ಆವಶ್ಯಕವಾಗಿದೆ. ಹೀಗೆ ಮಾಡದಿದ್ದರೆ ಸಮಾಜದಲ್ಲಿ ಶಾಂತಿ ಸ್ಥಾಪಿತವಾಗಿರಲಾರದು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶ ಎಷ್ಟು ಸುಂದರವಾಗಿತ್ತು, ಅವರು ಎಷ್ಟು ಉತ್ತಮವಾಗಿ ವರ್ತಿಸಿದ್ದಾರೆ, ಅವರ ಸ್ವಭಾವ ಗುಣಗಳು ಎಷ್ಟು ಶ್ರೇಷ್ಠವಾಗಿದ್ದುವು, ಅವರು ಎಷ್ಟು ಸಹಾನುಭೂತಿ ಮತ್ತು ಕರುಣಾಳು ಆಗಿದ್ದರು, ಅವರು ಎಷ್ಟು ಜನರಿಗೆ ದಯೆದೋರಿದರು, ಅವರು ಸೃಷ್ಟಿಗಳೆಲ್ಲವುಗಳ ಬಗ್ಗೆ ಎಷ್ಟು ಕರುಣೆಯಿಂದ ವರ್ತಿಸಿದರು, ಅವರು ಎಷ್ಟು ವಾತ್ಸಲ್ಯದಿಂದ ಜನರೊಂದಿಗೆ ವರ್ತಿಸಿದರು ಎಂದೆಲ್ಲ ವಿವರಿಸಿ ಕೊಡಲಾಯಿತು. ಕೆಲವು ಘಟನೆಗಳನ್ನು ಅವರಿಗೆ ವಿವರಿಸಿಕೊಟ್ಟು, ಅವರೊಂದಿಗೆ ಕೇಳಲಾಯಿತು: ಇಂತಹ ಉಪದೇಶ ನೀಡುವ ಮಹಾನುಭಾವರ ಬಗ್ಗೆ, ಈ ರೀತಿ ಜನರೊಂದಿಗೆ ವರ್ತಿಸುವವರ ಬಗ್ಗೆ ಇಂತಹ ವ್ಯಂಗ್ಯ ಚಿತ್ರ ಪ್ರಕಟಿಸುವುದು ನ್ಯಾಯಬದ್ಧವಾಗುವುದೇ? ನಮ್ಮ ಮಿಶನರಿಯ ಈ ಮಾತುಗಳನ್ನು ಅವರು ಇಷ್ಟಪಟ್ಟರು ಮತ್ತು ಶ್ಲಾಘಿಸಿದರು. ಒಬ್ಬ ಕಾರ್ಟೂನಿಸ್ಟ್ ಹೇಳಿದರು: ಇಂತಹ ಚರ್ಚೆ ಇದರ ಮೊದಲೇ ನಡೆದಿದ್ದರೆ ನಾವು ಇಂತಹ ಚಿತ್ರಗಳನ್ನು ರಚಿಸುತ್ತಿರಲಿಲ್ಲ. ಈಗ ತಮಗೆ ಇಸ್ಲಾಮಿನ ಉಪದೇಶ ಏನೆಂದು ತಿಳಿಯಿತೆಂದು ಅವರು ಹೇಳಿದರು. ಚರ್ಚೆಗಳು ಇನ್ನು ಮುಂದೆಯೂ ನಡೆಯಬೇಕೆಂದು ಎಲ್ಲರೂ ಹೇಳಿದರು.

ಜರ್ನಲಿಸ್ಟ್ ಯೂನಿಯನ್ ಅಧ್ಯಕ್ಷ ಹೇಳಿಕೆ ಪ್ರಕಟಿಸಿದರು. ಅದರ ಕರಡು ಪ್ರತಿಯನ್ನು ಎಲ್ಲರಿಗೂ ಓದಿ ಹೇಳಲಾಗಿತ್ತು. ಟಿ.ವಿ.ಯಲ್ಲಿ ಇಂಟರ್‌ವ್ಯೂ ನಡೆಸಿದುದು ಚೆನ್ನಾಗಿತ್ತು. ಮುಬಲ್ಲಿಗರು ಸಚಿವರನ್ನೂ ಭೇಟಿಯಾದರು. ಒಟ್ಟಿನಲ್ಲಿ ಜಮಾಅತ್ ಪ್ರಯತ್ನ ಮಾಡುತ್ತಿದೆ. ಬೇರೆ ದೇಶಗಳಲ್ಲೂ ಹೀಗೆಯೇ ನಡೆಯಿತು. ಈ ವ್ಯಂಗ್ಯ ಚಿತ್ರ ಪ್ರಕಟವಾದ ಮೂಲಸ್ಥಳದಲ್ಲಿ ಜಮಾಅತ್ ಸಾಕಷ್ಟು ಕೆಲಸ ಮಾಡಿತು.

ವ್ಯಂಗ್ಯ ಚಿತ್ರ ಪ್ರಕಟವಾಗಲು ಕಾರಣವೇನೆಂದರೆ, ಡೆನ್ಮಾರ್ಕ್‌ನ ಒಬ್ಬ ಡೇನಿಷ್ ಲೇಖಕ ಒಂದು ಪುಸ್ತಕ "ಪೈಗಂಬರರ ಜೀವಿತ ಮತ್ತು ಖುರ್‌ಆನ್" ಎಂಬ ಶೀರ್ಷಿಕೆಯಲ್ಲಿ

ಬರೆದಿರುವನು. ಈ ಪುಸ್ತಕಕ್ಕೋಸ್ಕರ ಪೈಗಂಬರರ ಚಿತ್ರಗಳನ್ನು ಬರೆಯಲು ಕೋರಿದ ಪ್ರಕಾರ ಕೆಲವರು ಬರೆದು ಕಳುಹಿಸಿದರು. ಈ ಚಿತ್ರಗಳು ಆ ಪುಸ್ತಕದಲ್ಲಿ ಪ್ರಕಟಗೊಂಡವು. ಆದರೆ ಲೇಖಕರ ಹೆಸರನ್ನು ಮುಸ್ಲಿಮರ ಪ್ರತಿಭಟನೆಗೆ ಭಯಪಟ್ಟು ಪ್ರಕಟಿಸಿರಲಿಲ್ಲ. ಇದೇ ರೀತಿಯ ವ್ಯಂಗ್ಯ ಚಿತ್ರಗಳು ಪತ್ರಿಕೆಗಳಲ್ಲೂ ಪ್ರಕಟವಾದುವು.

ಇಂತಹ ವರ್ತನೆಗಳ ವಿರುದ್ಧ ಸ್ಥಿರವಾಗಿ ಕಾರ್ಯನಿರತರಾಗಬೇಕು. ಪುಸ್ತಕವನ್ನೂ ಪತ್ರಿಕೆಯನ್ನೂ ಓದಿ ಲೋಕದಲ್ಲಿ ಎಲ್ಲೆಲ್ಲಿ ಆಕ್ಷೇಪ ಮಾಡಲಾಗುತ್ತಿದೆಯೋ ಅಲ್ಲೆಲ್ಲ ಅವುಗಳಿಗೆ ಉತ್ತರ  ನೀಡುವ ವ್ಯವಸ್ಥೆ ಆಗಬೇಕು.

ಡೆನ್ಮಾರ್ಕ್‌ನಲ್ಲಿ ಕೆಲವರು ಹೀಗೆ ಸಹ ಹೇಳುತ್ತಾರೆ: "ನಾವು ಪ್ರಕಟಿಸದೆ ಇರುವ ವ್ಯಂಗ್ಯ ಚಿತ್ರಗಳನ್ನು ತೋರಿಸಿ ನಾವು ಪ್ರಕಟಿಸಿದವುಗಳೆಂದು ಸುಳ್ಳು ಹೇಳಿ ಮುಸ್ಲಿಮರು ಲೋಕದಲ್ಲಿ ಅಶಾಂತಿ ಹರಡಲು ಪ್ರಯತ್ನಿಸುತ್ತಾರೆ." ಇದು ಸತ್ಯವೋ ಸುಳ್ಳೋ ನಮಗೆ ತಿಳಿಯದು. ಆದರೆ ನಾವು ಕೂಡಲೇ ಕಾರ್ಯನಿರತರಾದ ಕಾರಣ ಅವರಿಗೆ ಬೋಧೋದಯವಾಗಿದೆ. ಇದೆಲ್ಲ ಆಗಲೇ ಶುರುವಾಗಿತ್ತು. ಆದರೆ ಅಹ್ಮದಿಯೇತರರಿಗೆ ಮೂರು ತಿಂಗಳ ಹಿಂದೆ ನಡೆದುದರ ಬಗ್ಗೆ ಈಗ ತಿಳಿದು ಬಂದಿದೆ.

ನಾನು ಹಿಂದೆ ಹೇಳಿದ ಹಾಗೆ ಪ್ರತಿಯೊಂದು ದೇಶದಲ್ಲಿ ಹಝ್ರತ್ ಪೈಗಂಬರರ(ಸ) ಜೀವಿತ ಮಾದರಿಯನ್ನು ಪ್ರಕಟಿಸುವುದು ಆವಶ್ಯಕವಾಗಿದೆ. ಇಸ್ಲಾಮ್ ಬಗ್ಗೆ ಯುದ್ಧಭ್ರಾಂತಿ ಹೊಂದಿದ ಧರ್ಮವೆಂಬ ಭಾವನೆಯನ್ನು ಸಾಕ್ಷ್ಯಾಧಾರಗಳ ಮೂಲಕ ಖಂಡಿಸಬೇಕಾದುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ಪತ್ರಿಕೆಗಳಿಗೆ ಬರೆಯಬೇಕೆಂದು ನಾನು ಇದರ ಮೊದಲು ಸಹ ಹೇಳಿದ್ದೆ. ಪತ್ರಿಕೆಗಳಿಗೆ ಮತ್ತು ಲೇಖನ ಬರೆಯುವವರಿಗೆ ಹಝ್ರತ್ ಪೈಗಂಬರರ(ಸ) ಜೀವಿತದ ಬಗ್ಗೆ ಪುಸ್ತಕಗಳನ್ನು ಕಳುಹಿಸುತ್ತಿರಬೇಕು.

## ಅಹ್ಮದೀ ಯುವಕರು ಪತ್ರಿಕಾರಂಗವನ್ನು ಪ್ರವೇಶಿಸಬೇಕು

ಒಂದು ಸಲಹೆ ಏನೆಂದರೆ, ಇನ್ನು ಮುಂದೆ ಒಂದು ಯೋಜನೆ ರೂಪಿಸಬೇಕು. ಪತ್ರಿಕಾ ರಂಗದಲ್ಲಿ ಆಸಕ್ತಿಯಿರುವ ಯುವಕರು ಹೆಚ್ಚು ಹೆಚ್ಚಾಗಿ ಪತ್ರಿಕಾ ರಂಗವನ್ನು ಪ್ರವೇಶಿಸಲು ಪ್ರಯತ್ನಿಸಬೇಕು. ತತ್ಫಲವಾಗಿ ಪತ್ರಿಕಾ ರಂಗದಲ್ಲಿ ನಮ್ಮ ಪ್ರಾತಿನಿಧ್ಯ ಇರುವಂತಾಗಲಿ. ಏಕೆಂದರೆ ಮೇಲೆ ವಿವರಿಸಿದಂತಹ ಆಕ್ಷೇಪಕರ ಸನ್ನಿವೇಶಗಳು ಆಗಾಗ ಉದ್ಭವಿಸುತ್ತವೆ. ಸಂಪರ್ಕ ಮಾಧ್ಯಮಗಳ ಜೊತೆ ವಿಶಾಲ ಸಂಬಂಧ ಸ್ಥಾಪಿತವಾದರೆ ಇಂತಹ ಸನ್ನಿವೇಶಗಳನ್ನು ತಡೆಗಟ್ಟಬಹುದಾಗಿದೆ. ತದನಂತರವೂ ಯಾರಾದರೂ ಹಟಮಾರಿತನದಿಂದ ವರ್ತಿಸುವುದಾದರೆ ಅಂತಹ ಜನರು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಅಲ್ಲಾಹನು ಶಪಿಸಿದ ವರ್ಗಕ್ಕೆ ಸೇರಿದವರಾಗುತ್ತಾರೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

إن الذين يؤذون الله ورسوله لعنهم الله في الدنيا والآخرة وأعد لهم عذابا مهينا

"ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ಯಾರು ತೊಂದರೆಕೊಡುತ್ತಾರೋ, ನಿಶ್ಚಯವಾಗಿಯೂ ಅವರನ್ನು ಅಲ್ಲಾಹನು ಇಹದಲ್ಲೂ ಪರದಲ್ಲೂ ಶಪಿಸಿದ್ದಾನೆ. ಅವರಿಗೆ ಅಪಮಾನಕರವಾದ ಶಿಕ್ಷೆಯನ್ನು ಅವನು ಸಿದ್ಧಪಡಿಸಿಟ್ಟಿದ್ದಾನೆ." (33:58)

ಅಲ್ಲಾಹನ ಈ ವಿಧಿ ಸ್ಥಗಿತಗೊಂಡಿಲ್ಲ. ನಮ್ಮ ಹಝ್ರತ್ ಪೈಗಂಬರರು[ಸ] ಜೀವಂತ ಪ್ರವಾದಿಯಾಗಿದ್ದಾರೆ. ಅವರ ಉಪದೇಶ ಯಾವಾಗಲೂ ಜೀವ ನೀಡುವ ಉಪದೇಶವಾಗಿದೆ. ಅವರು ತಂದ ನಿಯಮ ಸಂಹಿತೆ (ಶರೀಅತ್) ಎಲ್ಲ ಕಾಲಘಟ್ಟಗಳ ಸಮಸ್ಯೆಗಳನ್ನೂ ಪರಿಹರಿಸುವಂತಹದು ಆಗಿದೆ. ಅವರನ್ನು ಅನುಸರಿಸುವುದರಿಂದ ಅಲ್ಲಾಹನ ಸಾಮೀಪ್ಯ ಲಭಿಸುತ್ತದೆ. ಆದ್ದರಿಂದ ಹಝ್ರತ್ ಪೈಗಂಬರರನ್ನು[ಸ] ನಂಬುವವರಿಗೆ ನೀಡಲಾಗುವ ಕಷ್ಟಗಳಿಗೆ ಅವು ಯಾವ ರೀತಿಯಲ್ಲಾದರೂ ಸರಿ, ಅವುಗಳ ಮೇಲೆಲ್ಲ ಮೇಲೆ ನೀಡಿದ ದೈವಿಕ ವಿಧಿ ಜಾರಿಗೊಳ್ಳುತ್ತದೆ. ಅಲ್ಲಾಹನು ಜೀವಂತನಾಗಿದ್ದಾನೆ. ಜನರು ಏನೆಲ್ಲ ಮಾಡುತ್ತಿದ್ದಾರೆಂದು ಅವನು ನೋಡುತ್ತಾ ಇದ್ದಾನೆ.

ಲೋಕವನ್ನು ಎಚ್ಚರಿಸುವುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ನಮಗೆ ನೀಡುವ ಕಷ್ಟಗಳಿಗೆ ಶಿಕ್ಷೆ ನೀಡುವ ಶಕ್ತಿ ಅಲ್ಲಾಹನಿಗೆ ಈಗ ಸಹ ಇದೆ. ಆದುದರಿಂದ ಅಲ್ಲಾಹನನ್ನೂ ಅವನ ಪೈಗಂಬರರನ್ನೂ[ಸ] ನೋಯಿಸುವ ಕೆಲಸದಿಂದ ಹಿಂದೆ ಸರಿಯಿರಿ ಎಂದು ನಾವು ಲೋಕಕ್ಕೆ ಹೇಳಬೇಕು.

ಆದರೆ, ಇಸ್ಲಾಮ್ ಧರ್ಮದ ಉಪದೇಶಗಳನ್ನು ಮತ್ತು ಹಝ್ರತ್ ಪೈಗಂಬರರ[ಸ] ಶ್ರೇಷ್ಠ ಜೀವಿತ ಮಾದರಿಯನ್ನು ಲೋಕಕ್ಕೆ ತಿಳಿಸಿಕೊಡುವಾಗ ನಾವು ನಮ್ಮ ನಡೆವಳಿಕೆಗಳನ್ನು ಸರಿಪಡಿಸಬೇಕಾದುದು ಆವಶ್ಯಕವಾಗಿದೆ. ಏಕೆಂದರೆ ನಮ್ಮ ನಡವಳಿಕೆಗಳೇ ಲೋಕದ ಬಾಯಿಯನ್ನು ಮುಚ್ಚಿಸುವುವು. ಇವುಗಳೇ ಲೋಕದ ಬಾಯಿ ಮುಚ್ಚಿಸುವ ನಿಟ್ಟಿನಲ್ಲಿ ಮಹತ್ವಪೂರ್ಣ ಕೆಲಸ ಮಾಡುತ್ತವೆ. ಒಬ್ಬ ಅಹ್ಮದಿಯೇತರ ಮೌಲವಿಯ ಕಾಪಟ್ಯದ ಬಗ್ಗೆ ಹೀಗೆ ವರದಿಯಾಗಿದೆ: ಅವರು ನಮ್ಮೊಂದಿಗೆ ಒಂದು ರೀತಿ ಹೇಳುತ್ತಾರೆ ಮತ್ತು ಬೇರೆ ಕಡೆ ಹೋಗಿ ಜನರನ್ನು ಉತ್ತೇಜಿಸುತ್ತಾರೆ. ಪ್ರಾಯಶಃ ನಾನು ಈ ವರದಿ ಓದಿಲ್ಲ. ನಮ್ಮ ಬಾಹ್ಯ ಮತ್ತು ಆಂತರಿಕ, ನಮ್ಮ ಮಾತು ಮತ್ತು ಕೃತಿ ಒಂದೇ ರೀತಿ ಇರಬೇಕು. ನಮ್ಮ ನಡೆವಳಿಕೆಯಿಂದ ಅದನ್ನು ತೋರಿಸಬೇಕು.

## ಪತಾಕೆಗಳನ್ನು ಸುಡುವುದರಿಂದ ಅಥವಾ ವಿಧ್ವಂಸಕ ಕೃತ್ಯಗಳಿಂದ ಹಝ್ರತ್ ಪೈಗಂಬರರ(ಸ) ಗೌರವ ನೆಲೆನಿಲ್ಲದು

ನಾನು ಮುಸ್ಲಿಮರೆಲ್ಲರೊಂದಿಗೆ, ಅವರು ಅಹ್ಮದಿಯರಾಗಿರಲಿ, ಅಹ್ಮದಿಯೇತರರಾಗಿರಲಿ, ಸುನ್ನಿಯಾಗಿರಲಿ, ಶಿಯಾ ಆಗಿರಲಿ ಅಥವಾ ಬೇರೆ ಯಾವುದೇ ಮುಸ್ಲಿಮ್ ಪಂಗಡಕ್ಕೆ ಸೇರಿದವರಾಗಿರಲಿ, ಎಲ್ಲರೊಂದಿಗೆ ಹೇಳುತ್ತೇನೆ: ಹಝ್ರತ್ ಪೈಗಂಬರರ[ಸ] ವ್ಯಕ್ತಿತ್ವದ ಮೇಲೆ ಆಕ್ರಮಣ ನಡೆದಾಗ ತಾತ್ಕಾಲಿಕವಾಗಿ ರೊಚ್ಚಿಗೇಳದೆ, ಪತಾಕೆ ಸುಡದೆ, ವಿಧ್ವಂಸಕ ಕೃತ್ಯ ಮಾಡದೆ, ರಾಯಭಾರಿ ಕಚೇರಿಗಳ ಮೇಲೆ ಆಕ್ರಮಣ ಮಾಡದೆ, ನಿಮ್ಮ ಸ್ವಭಾವ ಗುಣಗಳನ್ನು ಸುಧಾರಿಸಿರಿ. ಅನ್ಯರು ನಿಮ್ಮ ವಿರುದ್ಧ ಬೊಟ್ಟುಮಾಡುವಂತಾಗದಿರಲಿ. ಹಝ್ರತ್ ಪೈಗಂಬರರ[ಸ] ಗೌರವಕ್ಕೆ ಕುಂದುಂಟಾಗುವಾಗ ಪತಾಕೆ ಸುಡುವ ಮೂಲಕ ಅಥವಾ ರಾಯಭಾರಿ ಕಚೇರಿ ಸುಡುವ ಮೂಲಕ ಪ್ರತೀಕಾರ ಮಾಡಲು ಸಾಧ್ಯವೇ? ನಾವು ಎಂತಹ ಪೈಗಂಬರರ[ಸ] ಅನುಯಾಯಿಗಳೆಂದರೆ, ಅವರು ಬೆಂಕಿಯನ್ನು ನಂದಿಸಲು ಆಗಮಿಸಿದವರಾಗಿದ್ದರು. ಅವರು ಪ್ರೀತಿಯ ರಾಯಭಾರಿ

ಆಗಿದ್ದರು. ಅವರು ಶಾಂತಿಯ ರಾಜಕುಮಾರರಾಗಿ ಆಗಮಿಸಿದ್ದರು. ನೀವು ಯಾವುದೇ ಕ್ರೂರ ಕೃತ್ಯ ಮಾಡದೆ ಲೋಕಕ್ಕೆ ಆ ಮಹಾನುಭಾವರ ಸುಂದರ ಉಪದೇಶಗಳ ಬಗ್ಗೆ ತಿಳಿಸಿರಿ.

ಅಲ್ಲಾಹನು ಮುಸ್ಲಿಮರಿಗೆ ಬುದ್ಧಿಯನ್ನೂ ವಿವೇಕವನ್ನೂ ದಯಪಾಲಿಸಲಿ. ನಾನು ಎಲ್ಲ ಅಹ್ಮದಿಯರೊಂದಿಗೆ ಹೇಳಲು ಬಯಸುತ್ತೇನೆ: ನಿಮ್ಮಲ್ಲಿ ಪ್ರತಿಯೊಬ್ಬ ಮಗು, ಪ್ರತಿಯೊಬ್ಬ ವೃದ್ಧ, ಪ್ರತಿಯೊಬ್ಬ ಯುವಕ, ಪ್ರತಿಯೊಬ್ಬ ಪುರುಷ, ಪ್ರತಿಯೊಬ್ಬ ಮಹಿಳೆ ಎಂದೂ ನಂದಿ ಹೋಗದಂತಹ ಬೆಂಕಿಯನ್ನು ಹಚ್ಚಬೇಕು. ಅದು ಯಾವುದೇ ದೇಶದ ಪತಾಕೆ ಅಥವಾ ಸ್ವತ್ತಿಗೆ ಬೆಂಕಿ ಹಚ್ಚುವ ಮೂಲಕವಲ್ಲ. ಕೆಲವು ನಿಮಿಷಗಳಲ್ಲಿ ಅಥವಾ ಗಂಟೆಗಳಲ್ಲಿ ನಂದಿ ಹೋಗುವ ಬೆಂಕಿ ಅದಾಗದಿರಲಿ. ಪಾಕಿಸ್ತಾನದ ಒಂದು ಚಿತ್ರದಲ್ಲಿ ಜನರು ಬೆಂಕಿ ಹಚ್ಚುತ್ತಿರುವುದನ್ನು ತೋರಿಸಲಾಗಿದೆ. ಒಂದು ಮಹತ್ಕಾರ್ಯ ಮಾಡುವ ಹಾಗೆ ಅವರು ವರ್ತಿಸುತ್ತಿದ್ದಾರೆ. ಅವರು ಹಚ್ಚುವ ಬೆಂಕಿ ಕೆಲವು ನಿಮಿಷಗಳಲ್ಲಿ ನಂದಿ ಹೋಗುವುದು. ಆದರೆ ನಮ್ಮ ಬೆಂಕಿ ಹೇಗಿರಬೇಕೆಂದರೆ, ಅದು ಯಾವಾಗಲೂ ಉರಿಯುತ್ತಿರಬೇಕು. ಅದು ಹಝ್ರತ್ ಪೈಗಂಬರರ(ಸ) ಬಗ್ಗೆ ನಾವು ಹೊಂದಿರುವ ಪ್ರೇಮದ ಬೆಂಕಿಯಾಗಿದೆ. ಅದು ಹಝ್ರತ್ ಪೈಗಂಬರರ(ಸ) ಪ್ರತಿಯೊಂದು ನಡವಳಿಕೆಯನ್ನು ಸ್ವಯಂ ಅನುಸರಿಸಿ ಲೋಕಕ್ಕೆ ತೋರಿಸಿಕೊಡುವ ಬೆಂಕಿಯಾಗಿರಬೇಕು. ಅದು ನಿಮ್ಮ ಹೃದಯಗಳಲ್ಲೂ ಎದೆಗಳಲ್ಲೂ ಹಚ್ಚಲ್ಪಟ್ಟಿದ್ದರೆ ಅದು ಯಾವಾಗಲೂ ಉರಿಯುತ್ತಾ ಇರಲಿ. ಈ ಬೆಂಕಿ ಪ್ರಾರ್ಥನೆಯಲ್ಲಿಯೂ ಉರಿಯುತ್ತಿರಲಿ. ಅದರ ಜ್ವಾಲೆಗಳು ಪ್ರತಿಕ್ಷಣ ಆಕಾಶಕ್ಕೆ ತಲುಪುತ್ತಾ ಇರುವಂತಾಗಲಿ.

## ನಿಮ್ಮ ನೋವುಗಳನ್ನು ಪ್ರಾರ್ಥನೆಗಳಲ್ಲಿ ಹಾಕಿರಿ. ಹಝ್ರತ್ ಪೈಗಂಬರರಿಗೋಸ್ಕರ(ಸ) ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡಿರಿ

ಪ್ರತಿಯೊಬ್ಬ ಅಹ್ಮದಿ ತನ್ನ ಹೃದಯಕ್ಕೆ ಈ ಬೆಂಕಿಯನ್ನು ಹಚ್ಚಬೇಕು ಮತ್ತು ತನ್ನ ನೋವನ್ನು ಪ್ರಾರ್ಥನೆಗೆ ಹಾಕಬೇಕು. ಆದರೆ ಇದಕ್ಕೋಸ್ಕರ ಮಾಧ್ಯಮವಾಗಬೇಕಾದುದು ಹಝ್ರತ್ ಪೈಗಂಬರರೇ(ಸ) ಆಗಿದ್ದಾರೆ. ನಿಮ್ಮ ಪ್ರಾರ್ಥನೆಗಳು ಅಂಗೀಕರಿಸಲ್ಪಡಲು, ಅಲ್ಲಾಹನ ಪ್ರೀತಿಯನ್ನು ಆಕರ್ಷಿಸಲು, ಲೌಕಿಕ ನಿರರ್ಥಕವಾದವುಗಳಿಂದ ರಕ್ಷಣೆ ಪಡೆಯಲು, ಇಂತಹ ಗಲಭೆಗೊಂದಲಗಳಿಂದ ತಮ್ಮನ್ನು ಸಂರಕ್ಷಿಸಲು, ಹಝ್ರತ್ ಪೈಗಂಬರರ(ಸ) ಬಗ್ಗೆ ಪ್ರೀತಿಯನ್ನು ಹೃದಯಗಳಲ್ಲಿ ಉರಿಯುತ್ತಾ ಇರುವಂತೆ ಮಾಡಲು, ನಿಮ್ಮ ಇಹಲೋಕ ಮತ್ತು ಪರಲೋಕದ ಸ್ಥಿತಿ ಉತ್ತಮಗೊಳ್ಳಲು ಹಝ್ರತ್ ಪೈಗಂಬರರಿಗೋಸ್ಕರ(ಸ) ಅಸಂಖ್ಯಾತ ಸಾರಿ ದುರೂದ್ ಪ್ರಾರ್ಥನೆ ಮಾಡುತ್ತಾ ಇರಬೇಕು. ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡುತ್ತಾ ಇರಬೇಕು. ಈ ಕಲಹಭರಿತ ಕಾಲಘಟ್ಟದಲ್ಲಿ ನಿಮ್ಮನ್ನು ಹಝ್ರತ್ ಪೈಗಂಬರರ(ಸ) ಪ್ರೀತಿಯಲ್ಲಿ ಮುಳುಗಿಸಿಡಲು ನಿಮ್ಮ ಸಂತಾನಗಳನ್ನು ಅಹ್ಮದಿಯ್ಯತ್ ಮತ್ತು ಇಸ್ಲಾಮ್‌ನಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡಲು ಪ್ರತಿಯೊಬ್ಬ ಅಹ್ಮದಿ ಅಲ್ಲಾಹನ ಈ ಆಜ್ಞೆಯನ್ನು ನಿಷ್ಠೆಯಿಂದ ಪಾಲಿಸಬೇಕು. ಅಲ್ಲಾಹನು ಹೀಗೆ ಹೇ(

إن الله وملائكته يصلون على النبي يا أيها الذين آمنوا صلوا عليه وسلموا تسليما

"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ

> ಅನುಗ್ರಹಗಳನ್ನು ಬಯಸುತ್ತಾರೆ. ಎಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ." **(ಪವಿತ್ರ ಖುರ್‌ಆನ್ 33:57)**

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿದುದಾಗಿ ವರದಿಯಾಗಿದೆ: ಅಲ್ಲಾಹ್ ಮತ್ತು ಅವನ ದೂತರು ನನಗೋಸ್ಕರ ಬಯಸುವ ಅನುಗ್ರಹ ನನಗೆ ಸಾಕು. ಆದರೆ ನಿಮಗೆ ಅಲ್ಲಾಹನು ನೀಡಿರುವ ಆಜ್ಞೆ ನಿಮ್ಮನ್ನು ಸಂರಕ್ಷಿಸಲಿಕ್ಕೋಸ್ಕರವಾಗಿದೆ. **(ತಫ್ಸೀರ್ ದುರ್ರು ಮನ್‌ಸೂರ್)**

ಒಟ್ಟಿನಲ್ಲಿ, ನಮ್ಮ ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕಾರ ಪಡೆಯಲು ದುರೂದ್ ಆವಶ್ಯಕವಾಗಿದೆ. ನಾನು ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನ ಮತ್ತು ನಾನು ಉಲ್ಲೇಖಿಸಿದ ಹದೀಸಿನ ಪ್ರಾರಂಭದ ಭಾಗ ಹೀಗೆ ಖಾತರಿ ನೀಡುತ್ತದೆ: ಹಝ್ರತ್ ಪೈಗಂಬರರ(ಸ) ಮಹತ್ತರ ಸ್ಥಾನವನ್ನು ತಗ್ಗಿಸಲು ಮತ್ತು ಅಪಹಾಸ್ಯ ಮಾಡಲು ಈ ಜನರು ಎಷ್ಟು ಪ್ರಯತ್ನ ಮಾಡಿದರೂ ಅಲ್ಲಾಹನು ಮತ್ತು ಅವನ ದೂತರು ಹಝ್ರತ್ ಪೈಗಂಬರರಿಗೆ(ಸ) ಅನುಗ್ರಹ ಬಯಸುತ್ತಾ ಇರುವುದರಿಂದ ಶತ್ರುಗಳು ಎಂದೂ ಜಯಶಾಲಿಗಳಾಗಲಾರರು. ಹಝ್ರತ್ ಪೈಗಂಬರರ(ಸ) ವ್ಯಕ್ತಿತ್ವವನ್ನು ದೂಷಿಸುವುದರಿಂದ ಅವರಿಗೆ ಯಾವ ಯಶಸ್ಸೂ ಸಿಗಲಾರದು. ಇಸ್ಲಾಮ್ ಅಭಿವೃದ್ಧಿ ಗಳಿಸುವುದು ಮತ್ತು ಲೋಕದ ಮೇಲೆ ಜ[illegible]ದು. ಲೋಕದಾದ್ಯಂತ ಹಝ್ರತ್ ಪೈಗಂಬರರ(ಸ) ಪತಾಕೆ ಹಾರುವುದು.

ನಾನು ಹೇಳಿದ ಹಾಗೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸತ್ಯಸಂಧ ಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್(ಅ) ಮೂಲಕ ಇದು ನೆರವೇರುವುದನ್ನು ಅಲ್ಲಾಹನು ವಿಧಿಸಿರುವನು.

ಹಝ್ರತ್ ಮೌಲಾನ ಅಬ್ದುಲ್ ಕರೀಮ್ ಸಿಯಾಲ್‌ಕೋಟಿ ಹೀಗೆ ವರದಿ ಮಾಡುತ್ತಾರೆ: "ಹಝ್ರತ್ ಇಮಾಮ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ದುರೂದ್ ಶರೀಫ್ ಪ್ರಾರ್ಥನೆ ಬಹಳ ಹೆಚ್ಚು ಮಾಡುತ್ತಾ ಇದ್ದುದರಿಂದ ನನಗೆ ಈ ಸ್ಥಾನವನ್ನು ಅಲ್ಲಾಹನು ದಯಪಾಲಿಸಿದನು. ಅಲ್ಲಾಹನ ಅನುಗ್ರಹ ಅದ್ಭುತ ಪ್ರಕಾಶದ ರೂಪದಲ್ಲಿ ಹಝ್ರತ್ ಪೈಗಂಬರರ(ಸ) ಕಡೆಗೆ ಹೋಗುತ್ತದೆ. ಅದು ಹಝ್ರತ್ ಪೈಗಂಬರರ(ಸ) ಹೃದಯದಲ್ಲಿ ಹೀರಲ್ಪಡುತ್ತದೆ. ಅಲ್ಲಿಂದ ಆ ಪ್ರಕಾಶದ ಅಸಂಖ್ಯಾತ ಕಿರಣಗಳು ಹೊರಟು ಪ್ರತಿಯೊಬ್ಬ ಅರ್ಹನಾದವನಿಗೆ ಅವನ ಪಾಲಿಗನುಸಾರವಾಗಿ ತಲಪುತ್ತದೆ. ಖಂಡಿತವಾಗಿಯೂ ಯಾವುದೇ ಅನುಗ್ರಹ ಹಝ್ರತ್ ಪೈಗಂಬರರ(ಸ) ಮೂಲಕ ಹೊರತು ಅನ್ಯರಿಗೆ ತಲಪಲು ಸಾಧ್ಯವಿಲ್ಲ. ದುರೂದ್ ಪ್ರಾರ್ಥನೆ ಎಂದರೇನು? ಅದು ಹಝ್ರತ್ ಪೈಗಂಬರರ(ಸ) ಈ ಸಿಂಹಾಸನವನ್ನು ಅಲುಗಾಡಿಸುವುದಾಗಿದೆ. ಅದರಿಂದ ಪ್ರಕಾಶದ ಕಿರಣಗಳು ಹೊರಹೊಮ್ಮುತ್ತವೆ. ಅಲ್ಲಾಹನ ಅನುಗ್ರಹವನ್ನು ಬಯಸುವವರು ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡುವುದು ಕಡ್ಡಾಯವಾಗಿದೆ. ಆ ಮೂಲಕ ಅನುಗ್ರಹದ ಕಿರಣಗಳು ಹೊರಹೊಮ್ಮುವುವು".

("ಅಲ್ ಹಕಮ್" ಪತ್ರಿಕೆ–ಸಂಪುಟ 7 ಸಂಚಿಕೆ 8 ಪುಟ 7. 28–2–1903)

ಈ ಕಾಲದ ಕೆಡುಕುಗಳಿಂದ ರಕ್ಷಣೆ ಪಡೆಯಲು, ಹಝ್ರತ್ ಪೈಗಂಬರರ[ಸ] ಬಗ್ಗೆ ಪ್ರೀತಿಯನ್ನು ಹೃದಯಗಳಲ್ಲಿ ಸ್ಥಾಪಿಸಲು, ಅವರ ಉಪದೇಶಗಳನ್ನು ಲೋಕದಲ್ಲಿ ಹರಡಲು ಅವರಿಗೆ ದುರೂದ್ ಪ್ರಾರ್ಥನೆ ಅರ್ಪಿಸುತ್ತಾ ಅಲ್ಲಾಹನ ಕಡೆಗೆ ಬಾಗುತ್ತಾ ಅವನ ಸಹಾಯ ಬೇಡುತ್ತಾ ಅವನ ಅನುಗ್ರಹಗಳ ವಾರಿಸುದಾರರಾಗುತ್ತಾ ಸಾಗಲು ಅಲ್ಲಾಹನು ಅನುಗ್ರಹ ನೀಡಲಿ. ಅಲ್ಲಾಹನು ನಮಗೆ ಸಹಾಯವನ್ನು ನೀಡಲಿ.

❖❖❖❖❖❖❖

# ಹಝ್ರತ್ ಪೈಗಂಬರರನ್ನು[ಸ] ಅಪಮಾನಿಸುವ ಕೃತ್ಯಗಳು ಅಲ್ಲಾಹನ ಕೋಪವನ್ನು ವರ್ಧಿಸುತ್ತವೆ

## ಜುಮುಅ ಖುತ್‌ಬ 17–2–2006

ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ
ಹುಝೂರ್ ಹೀಗೆ ಹೇಳಿದರು:

ಕಳೆದ ವಾರದ ಜುಮುಅ ಖುತ್‌ಬದಲ್ಲಿ ಮತ್ತು ಅದರ ಹಿಂದಿನ ಎರಡು ಖುತ್‌ಬಗಳಲ್ಲಿ ಪ್ರತಿಪಾದಿಸಿದ ವಿಷಯಗಳನ್ನೇ ಮುಂದುವರಿಸಲು ನಾನು ಬಯಸಿದ್ದೆ. ಆದರೆ ಪಶ್ಚಿಮದ ಕೆಲವು ಪತ್ರಿಕೆಗಳ ಅನುಚಿತ ವರ್ತನೆ ಮತ್ತು ಅದಕ್ಕೆ ವಿರುದ್ಧವಾಗಿ ಮುಸ್ಲಿಮ್ ಲೋಕದಲ್ಲಿ ದುಃಖ ಮತ್ತು ಕೋಪದ ಅಲೆ ಎದ್ದು ಪ್ರತಿಭಟನೆಗಳು ತೊಡಗಿದುದರಿಂದ ಅದರ ಬಗ್ಗೆ ಏನಾದರೂ ಹೇಳುವುದು ಆವಶ್ಯಕ ಎಂದು ನಾನು ಭಾವಿಸಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಪ್ರತಿಕ್ರಿಯೆ ಹೇಗಿರಬೇಕೆಂದು ಅಹ್ಮದಿಯರಿಗೆ ತಿಳಿಯಬೇಕಾಗಿದೆ. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯರಿಗೆ ಅದರ ಬಗ್ಗೆ ತಿಳಿದಿದ್ದರೂ ಅವರಿಗೆ ನೆನಪಿಸುವ ಆವಶ್ಯಕತೆ ಇರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಮುಸ್ಲಿಮನು ನೀಡುವ ಸರಿಯಾದ ಪ್ರತಿಕ್ರಿಯೆ ಹೇಗಿರುತ್ತದೆ ಎಂದು ಲೋಕದ ಜನರು ತಿಳಿಯಲಿ.

### ಅನ್ಯರ ಭಾವನೆಯೊಂದಿಗೆ ಆಟವಾಡುವುದು ಪ್ರಜಾಪ್ರಭುತ್ವವೂ ಅಲ್ಲ; ಮನಸ್ಸಾಕ್ಷಿಯ ಸ್ವಾತಂತ್ರ್ಯವೂ ಅಲ್ಲ

ಯಾವುದಾದರೂ ಧರ್ಮದ ಆದರಣೀಯ ಮಹಾನುಭಾವರ ಬಗ್ಗೆ ಅನುಚಿತ ಅಭಿಪ್ರಾಯ ಪ್ರಕಟಣೆ ಯಾವುದೇ ರೀತಿಯ ಸ್ವಾತಂತ್ರ್ಯಕ್ಕೆ ಸೇರಿದುದಾಗಿರುವುದಿಲ್ಲ. ನೀವು ಪ್ರಜಾಪ್ರಭುತ್ವ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯದ ಪ್ರತಿಪಾದಕರಾಗಿ ಅನ್ಯರ ಭಾವನೆಗಳೊಂದಿಗೆ ಆಟವಾಡುತ್ತಿರುವಿರಿ. ಇದು ಪ್ರಜಾಪ್ರಭುತ್ವವೂ ಅಲ್ಲ; ಮನಸ್ಸಾಕ್ಷಿಯ ಸ್ವಾತಂತ್ರ್ಯವೂ ಅಲ್ಲ. ಪ್ರತಿಯೊಂದಕ್ಕೆ ಒಂದು ಪರಿಮಿತಿ ಇರುತ್ತದೆ. ನೈತಿಕ ನಡೆವಳಿಕೆಯ ನೀತಿ ಸಂಹಿತೆಯೂ ಇರುತ್ತದೆ. ಪ್ರತಿಯೊಂದು ಉದ್ಯೋಗಕ್ಕೆ ಸಂಬಂಧಿಸಿ ನೀತಿ ಸಂಹಿತೆ ಇರುವ ಹಾಗೆ ಪತ್ರಿಕಾ ವೃತ್ತಿಗೂ ನೀತಿ ಸಂಹಿತೆ ಇರುತ್ತದೆ. ಯಾವ ರೀತಿಯ ಸರಕಾರವಿದ್ದರೂ ಅದಕ್ಕೆ ಅದರದೇ ಆದ ಕಾನೂನು ಕಾಯಿದೆಗಳು ಇರುತ್ತವೆ. ಅಭಿಪ್ರಾಯ ಸ್ವಾತಂತ್ರ್ಯದ ಅರ್ಥ ಅನ್ಯರ ಭಾವನೆಗಳೊಂದಿಗೆ ಆಟವಾಡಬಹುದೆಂದಲ್ಲ; ಅನ್ಯರಿಗೆ ಕಷ್ಟ ನೀಡಬಹುದೆಂದಲ್ಲ. ಪಶ್ಚಿಮ ದೇಶಗಳು ಅಭಿಮಾನಗೊಳ್ಳುವ ಸ್ವಾತಂತ್ರ್ಯ ಇದೇ ಆಗಿದ್ದರೆ ಇದು ಪ್ರಗತಿ ಕಡೆಗೆ ಒಯ್ಯುವ ಸ್ವಾತಂತ್ರ್ಯವಲ್ಲ. ಇದು ಅಧಃಪತನಕ್ಕೆ ಒಯ್ಯುವ ಸ್ವಾತಂತ್ರ್ಯವಾಗಿದೆ.

## ಹಝ್ರತ್ ಪೈಗಂಬರರನ್ನು[ಸ] ಅಪಮಾನಿಸುವ ಕೃತ್ಯಗಳ ಬಗ್ಗೆ ಹಟಮಾರಿತನ ಅಲ್ಲಾಹನ ಕೋಪವನ್ನು ವರ್ಧಿಸುವಂತಹದ್ದಾಗಿದೆ

ಪಶ್ಚಿಮದ ದೇಶಗಳು ಸ್ವಾತಂತ್ರ್ಯದ ಹೆಸರಿನಲ್ಲಿ ಬಹಳ ವೇಗವಾಗಿ ಧರ್ಮವನ್ನು ಬಿಟ್ಟು ನೈತಿಕ ಮೌಲ್ಯಗಳನ್ನು ಹಾಳುಗೆಡವುತ್ತಾ ಇವೆ. ಈ ಜನರು ತಮ್ಮ ನಾಶವನ್ನು ಹೇಗೆ ಆಮಂತ್ರಿಸುತ್ತಿದ್ದಾರೆಂದು ಅವರಿಗೆ ತಿಳಿದಿಲ್ಲ. ಈಗ ಇಟಲಿ ದೇಶದ ಒಬ್ಬ ಸಚಿವ ಕೊಳಕು ವ್ಯಂಗ್ಯ ಚಿತ್ರಗಳನ್ನು ಟಿ–ಶರ್ಟ್‌ಗಳಲ್ಲಿ ಮುದ್ರಿಸಿ ಧರಿಸಲು ತೊಡಗಿರುವನಲ್ಲದೆ ಅನ್ಯರೊಂದಿಗೆ ತನ್ನಿಂದ ಈ ಟಿ–ಶರ್ಟ್‌ಗಳನ್ನು ಪಡೆದುಕೊಳ್ಳಲು ಹೇಳುತ್ತಿದ್ದಾನೆ. ಅಲ್ಲಿ ಇಂತಹ ಟಿ–ಶರ್ಟ್ ಮಾರಾಟವಾಗುತ್ತದೆ ಎಂದು ಸಹ ವರದಿಯಾಗಿದೆ. ಮುಸ್ಲಿಮರಿಗೆ ನಡೆಸಬೇಕಾದ ಚಿಕಿತ್ಸೆ ಇದೇ ಎಂದು ಅವರು ಹೇಳುತ್ತಾರೆ. ಇದು ಮುಸ್ಲಿಮರಿಗೆ ಚಿಕಿತ್ಸೆಯಾಗುವುದೋ ಇಲ್ಲವೋ ಎಂದು ನಮಗೆ ತಿಳಿಯದು. ಆದರೆ ಇಸ್ಲಾಮಿನ ಈ ಶತ್ರುಗಳು ತಿಳಿದುಕೊಳ್ಳಬೇಕಾದುದೇನೆಂದರೆ, ಅವರು ಅಲ್ಲಾಹನ ಕೋಪ ಪ್ರಜ್ವಲಿಸುವ ಕೆಲಸ ಮಾಡುತ್ತಿದ್ದಾರೆ. ಹಿಂದೆ ಅವಿವೇಕದಿಂದ ಮಾಡಿದುದು ಮಾಡಿ ಆಯಿತು. ಆದರೆ ಅದನ್ನು ಮುಂದುವರಿಸುವುದು, ಹಟಮಾರಿತನ ತೋರಿಸುವುದು ಮತ್ತು ನಾವು ಮಾಡಿದುದೇ ಸರಿಯೆಂದು ಹೇಳುವುದು ದೇವನ ಕೋಪಕ್ಕೆ ಕಾರಣವಾಗುವುದು.

## ಇಂತಹ ಪರಿಸ್ಥಿತಿಯಲ್ಲಿ ಅಹ್ಮದಿ ಹೇಗೆ ಪ್ರತಿಕ್ರಿಯೆ ನೀಡಬೇಕು?

ಈ ಜನರ ಕೃತ್ಯಗಳು ಅಲ್ಲಾಹನ ಕೋಪವನ್ನು ಖಂಡಿತ ವರ್ಧಿಸುವಂತೆ ಮಾಡುವುವು. ಅಹ್ಮದಿಯೇತರ ಮುಸ್ಲಿಮರ ಪ್ರತಿಕ್ರಿಯೆ ಹೇಗಿದ್ದರೂ ಅಹ್ಮದೀ ಮುಸ್ಲಿಮರ ಪ್ರತಿಕ್ರಿಯೆ ಹೀಗಿರಬೇಕು: ಅಹ್ಮದಿಯರು ನೀಚ ಕೃತ್ಯ ಮಾಡುವವರಿಗೆ ಬೋಧಿಸಬೇಕು. ಅಲ್ಲಾಹನ ಕೋಪದ ಬಗ್ಗೆ ಹೆದರಿಸಬೇಕು. ನಾನು ಹಿಂದೆ ಹೇಳಿದ ಹಾಗೆ ಹಝ್ರತ್ ಪೈಗಂಬರರ[ಸ] ಸುಂದರ ಚಿತ್ರವನ್ನು ಲೋಕದ ಮುಂದೆ ಇರಿಸಬೇಕು. ಸರ್ವಶಕ್ತನಾದ ಅಲ್ಲಾಹನ ಮುಂದೆ ಬಾಗುತ್ತಾ ಇರಬೇಕು. ಅವನಿಂದ ಸಹಾಯ ಯಾಚಿಸಬೇಕು. ಆ ಜನರು ಶಿಕ್ಷೆಯ ಕಡೆಗೆ ಸಾಗುತ್ತಾ ಇದ್ದರೆ ತನ್ನ ಮತ್ತು ತನಗೆ ಪ್ರಿಯರಾದವರ ಬಗ್ಗೆ ಅಭಿಮಾನ ಹೊಂದಿದ ಅಲ್ಲಾಹನು ತನ್ನ ಕೋಪದ ವೈಭವದೊಂದಿಗೆ ಆಗಮಿಸುವ ಶಕ್ತಿ ಹೊಂದಿದ್ದಾನೆ. ಅವನು ಎಲ್ಲ ಶಕ್ತಿಗಳ ಒಡೆಯನಾಗಿದ್ದಾನೆ. ಮನುಷ್ಯರು ನಿರ್ಮಿಸಿದ ನಿಯಮಗಳಿಗೆ ಅವನು ಅಧೀನನಾಗಿಲ್ಲ. ಅವನು ಉದ್ದೇಶಿಸುವುದನ್ನೆಲ್ಲ ಮಾಡಲು ಸಮರ್ಥನಾಗಿದ್ದಾನೆ. ಅವನ ಬೀಸುಗಲ್ಲು ಅರೆಯಲು ಪ್ರಾರಂಭಿಸಿದರೆ ಮನುಷ್ಯನ ಯೋಚನೆ ಅದನ್ನು ಗ್ರಹಿಸಲು ಶಕ್ತವಾಗಲಾರದು. ಯಾರಿಗೂ ಅದರಿಂದ ಪಾರಾಗಲು ಸಾಧ್ಯವಾಗದು.

ಪಶ್ಚಿಮದ ಕೆಲವು ಜನರ ಅಥವಾ ಕೆಲವು ದೇಶಗಳ ಈ ವರ್ತನೆಗಳನ್ನು ಕಂಡು ಅಹ್ಮದಿಯರು ಅಲ್ಲಾಹನ ಮುಂದೆ ಇನ್ನಷ್ಟು ಬಾಗುತ್ತಾ ಇರಬೇಕಾಗಿದೆ. ಅಲ್ಲಾಹನ ಮಸೀಹರು ಯುರೋಪಿಗೂ ಎಚ್ಚರಿಕೆ ನೀಡಿದ್ದಾರೆ. ಅಮೇರಿಕಕ್ಕೂ ಎಚ್ಚರಿಕೆ ನೀಡಿದ್ದಾರೆ. ಈ ಭೂಕಂಪಗಳು, ಈ ಚಂಡಮಾರುತಗಳು, ಈ ವಿಪತ್ತುಗಳು ಲೋಕದಲ್ಲಿ ಬರುತ್ತಿರುವುದು ಕೇವಲ ಏಶಿಯಾ ದೇಶಗಳಿಗೆ ಸೀಮಿತವಾಗಿರಲಾರದು. ಅಮೇರಿಕ ಅದರ ಒಂದು ದೃಶ್ಯ ಕಂಡಿದೆ. "ಓ ಯುರೋಪು, ನೀನು ಸಹ ಸುರಕ್ಷಿತವಲ್ಲ. ದೇವನಿಗೆ ಭಯಪಡು. ಅವನ ಅಭಿಮಾನವನ್ನು ಕೆಣಕದಿರು."

ಇದರೊಂದಿಗೆ ನಾನು ಮುಸ್ಲಿಮರೊಂದಿಗೆ ಮತ್ತು ಮುಸ್ಲಿಮರೆಂದು ಹೇಳಿಕೊಳ್ಳುವವರೊಂದಿಗೆ ಹೇಳಲು ಬಯಸುತ್ತೇನೆ: ನಿಮ್ಮ ವರ್ತನೆಗಳನ್ನು ಸರಿಪಡಿಸಿರಿ. ನೀವು ಹೇಗೆ ವರ್ತಿಸಬೇಕು ಮತ್ತು ಹೇಗೆ ಪ್ರತಿಕ್ರಿಯೆ ನೀಡಬೇಕೆಂದರೆ, ಹಝ್ರತ್ ಪೈಗಂಬರರ(ಸ) ಮಹತ್ತರ ಸ್ಥಾನವನ್ನು ಮತ್ತು ಅವರ ಸೌಂದರ್ಯವನ್ನು ಲೋಕದ ಮುಂದಿರಿಸಬೇಕು. ಅವರಿಗೆ ತೋರಿಸಬೇಕು. ಒಬ್ಬ ಸತ್ಯ ವಿಶ್ವಾಸಿಯ ಪ್ರತಿಕ್ರಿಯೆ ಹೀಗೆಯೇ ಆಗಿರಬೇಕು.

## ಇಸ್ಲಾಮಿನ ವೈಭವವನ್ನು ಮತ್ತು ಹಝ್ರತ್ ಪೈಗಂಬರರ(ಸ) ಪಾವಿತ್ರ್ಯವನ್ನು ಮಹ್‌ದೀ ಮಸೀಹರ ಜಮಾಅತ್ ಮಾತ್ರ ಸ್ಥಾಪಿಸುವುದು

ಇಂದಿನ ಕಾಲದಲ್ಲಿ ಮುಸ್ಲಿಮ್ ದೇಶಗಳಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡಿರಿ. ಅವರು ತಮ್ಮದೇ ದೇಶದ ಜನರನ್ನು ಕೊಲ್ಲುತ್ತಾರೆ, ತಮ್ಮ ದೇಶದ ಸ್ವತ್ತುಗಳಿಗೇ ಬೆಂಕಿ ಹಚ್ಚುತ್ತಾರೆ. ಅನ್ಯ ಸಮುದಾಯಗಳು ಶತ್ರುಗಳಾಗಿದ್ದರೂ ಅವರೊಂದಿಗೆ ಅನ್ಯಾಯದಿಂದ ವರ್ತಿಸಲು, ನ್ಯಾಯವನ್ನು ಕೈಬಿಡಲು ಇಸ್ಲಾಮ್ ಅನುಮತಿಸುವುದಿಲ್ಲ. ಬುದ್ಧಿಪೂರ್ವಕವಾಗಿ ವರ್ತಿಸಲು ಇಸ್ಲಾಮ್ ಆಜ್ಞಾಪಿಸುತ್ತದೆ.

ಇತ್ತೀಚೆಗೆ ಪಾಕಿಸ್ಥಾನದಲ್ಲೂ ಇತರ ಮುಸ್ಲಿಮ್ ದೇಶಗಳಲ್ಲೂ ನಡೆದುದನ್ನು ನೋಡಿರಿ. ಆ ಮುಸ್ಲಿಮ್ ದೇಶಗಳಲ್ಲಿ ವಿದೇಶಿಯರ ವಾಣಿಜ್ಯ ಸಂಸ್ಥೆಗಳನ್ನು ಅಥವಾ ರಾಯಭಾರಿ ಕಚೇರಿಗಳನ್ನು ಹಾನಿಗೊಳಪಡಿಸುವ ಕೆಲಸವಾಗಲಿ ಅಥವಾ ತಮ್ಮದೇ ದೇಶದ ಜನರಿಗೆ ಹಾನಿ ಉಂಟುಮಾಡುವ ಕೆಲಸವಾಗಲಿ ಇಸ್ಲಾಮನ್ನು ಅಪಕೀರ್ತಿಗೆ ಗುರಿಪಡಿಸುತ್ತವೆಯೇ ಹೊರತು ಬೇರೆ ಯಾವ ಪ್ರಯೋಜನವನ್ನೂ ನೀಡಲಾರದು.

ಆದುದರಿಂದ ಮುಸ್ಲಿಮರು ಮಾಡಬೇಕಾದುದೇನೆಂದರೆ, ತಪ್ಪು ಮಾಡುತ್ತಿರುವ ಮತಪಂಡಿತರನ್ನು ಮತ್ತು ನಾಯಕರನ್ನು ಹಿಂಬಾಲಿಸಿ ತಮ್ಮ ಇಹಲೋಕ ಜೀವಿತವನ್ನೂ ಪರಲೋಕ ಜೀವಿತವನ್ನೂ ಕೆಡಿಸುವುದಕ್ಕೆ ಬದಲಾಗಿ, ಬುದ್ಧಿಯನ್ನು ಬಳಸಿ ವರ್ತಿಸಬೇಕು. ಮುಸ್ಲಿಮರಿಗೆ ಮಾತ್ರವಲ್ಲ, ಲೋಕದ ಎಲ್ಲರಿಗೂ ಸರಿಯಾದ ದಾರಿತೋರಿಸಲು ಅಲ್ಲಾಹನು ತನ್ನ ಪ್ರಿಯ ಪೈಗಂಬರರ(ಸ) ಸತ್ಯಸಂಧನಾದ ಪ್ರೇಮಿಯನ್ನು ಕಳುಹಿಸಿದ್ದಾನೆ. ಅವರನ್ನು ಗುರುತಿಸಿರಿ. ಅವರನ್ನು ಹಿಂಬಾಲಿಸಿರಿ.

ಲೋಕದ ಸುಧಾರಣೆಗೋಸ್ಕರ ಮತ್ತು ಹಝ್ರತ್ ಪೈಗಂಬರರ(ಸ) ಪತಾಕೆಯನ್ನು ಲೋಕದಲ್ಲಿ ಸ್ಥಾಪಿಸಲು ಮಹ್‌ದೀ ಮಸೀಹರ ಜಮಾಅತ್‌ನಲ್ಲಿ ಸೇರಿರಿ. ಬೇರೆ ಯಾವ ಮಾರ್ಗದರ್ಶಕನೂ ಹಝ್ರತ್ ಪೈಗಂಬರರ(ಸ) ನಡೆವಳಿಕೆ ಪ್ರಕಾರ ಚಲಿಸುವವನನ್ನಾಗಿಯೂ ಚಲಾಯಿಸುವವನನ್ನಾಗಿಯೂ ಮಾಡಲಾರ. ಇಸ್ಲಾಮಿನ ವೈಭವ ಮತ್ತು ಹಝ್ರತ್ ಪೈಗಂಬರರ(ಸ) ಪಾವಿತ್ರ್ಯವನ್ನು ಲೋಕದಲ್ಲಿ ಮಹ್‌ದೀ ಮಸೀಹರ ಜಮಾಅತ್ ಮಾತ್ರ ಸ್ಥಾಪಿಸಲಿರುವುದು ಮತ್ತು ಸ್ಥಾಪಿಸುವುದು.

## ಮಸೀಹರ ನುಝೂಲ್ ಎಂಬುದರ ನಿಜವಾದ ಅರ್ಥ ಮತ್ತು ಮಹ್‌ದೀ ಮಸೀಹರ ಕೆಲವು ಕೆಲಸಗಳು ಹಾಗೂ ಅವರ ಸತ್ಯತೆಗೆ ಸಾಕ್ಷ್ಯಗಳು

ಪ್ರತಿಯೊಬ್ಬನು, ಮುಸ್ಲಿಮನೆಂದು ಹೇಳಿಕೊಳ್ಳುವವರು ಸಹ ಇದರ ಬಗ್ಗೆ

ಚಿಂತಿಸಬೇಕು. ನಾವು ಸಹ ಅವರಿಗೆ ಮನವರಿಕೆ ಮಾಡಿಕೊಡಬೇಕು. ವಿದ್ವಾಂಸರೆಂದು ಹೇಳಿಕೊಳ್ಳುವವರೊಂದಿಗೆ ವಾಗ್ವಾದದಲ್ಲಿ ಸಮಯ ಕಳೆಯಬೇಡಿರಿ. ಆಗಮಿಸಬೇಕಾದ ಮಸೀಹ್ ಆಗಮಿಸಿಲ್ಲ ಅಥವಾ ಮಹ್‌ದೀ ಮಸೀಹ್ ಒಂದು ನಿರ್ದಿಷ್ಟ ಸ್ಥಳದಲ್ಲಿ ಇಳಿಯಬೇಕು ಎಂಬ ವಿಷಯದ ಬಗ್ಗೆ ಚರ್ಚೆಗಳಿಗೆ ಕಾರಣ, ಒಂದು ಹದೀಸನ್ನು ಸರಿಯಾಗಿ ಅರ್ಥ ಮಾಡದುದರಿಂದಾಗಿದೆ. ಈ ಹದೀಸನ್ನು ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ವಿಶದೀಕರಿಸಿದ್ದಾರೆ:

"ಮಸೀಹಿಬ್ನು ಮರ್‌ಯಮ್ ಆಕಾಶದಿಂದ ಇಳಿದು ಬರುವರೆಂದು ಸ್ಪಷ್ಟವಾಗಿ ಹದೀಸಿನಲ್ಲಿದೆ; ಡಮಾಸ್ಕಸ್ ನಗರದ ಪೂರ್ವ ದಿಕ್ಕಿನ ಮಿನಾರದ ಸಮೀಪ ಅವರು ಇಳಿಯುವರು; ಇಬ್ಬರು ದೇವದೂತರ ಹೆಗಲುಗಳಲ್ಲಿ ಅವರ ಕೈಗಳಿರುವುವು – ಇಷ್ಟು ಸ್ಪಷ್ಟವಾದ ಹದೀಸನ್ನು ನಿರಾಕರಿಸುವುದಾದರೂ ಹೇಗೆ? ಎಂದು ಪ್ರಶ್ನಿಸುವುದಾದರೆ, ಅದರ ಉತ್ತರ ಹೀಗಿದೆ:

"ಆಕಾಶದಿಂದ ಇಳಿದು ಬರುವುದರ ಅರ್ಥ ಭೌತಿಕ ದೇಹ ಆಕಾಶದಿಂದ ಇಳಿದು ಬರುವುದು ಎಂದಲ್ಲ. ಸಹೀಹ್ ಹದೀಸುಗಳಲ್ಲಿ ಆಕಾಶ ಎಂಬ ಪದ ಕೂಡ ಬಳಸಿಲ್ಲ. ನುಝೂಲ್ (ಇಳಿದು ಬರುವಿಕೆ) ಎಂಬ ಪದ ಸಾಮಾನ್ಯವಾಗಿ ಬಳಸಲ್ಪಡುತ್ತದೆ. ಒಬ್ಬನು ಒಂದು ಸ್ಥಳದಿಂದ ಹೋಗಿ ಇನ್ನೊಂದು ಸ್ಥಳದಲ್ಲಿ ತಂಗುವುದಾದರೆ ಅವನು ಆ ಸ್ಥಳದಲ್ಲಿ ಇಳಿದ ಎಂದು ಹೇಳುತ್ತಾರೆ. ಇಂತಹ ಸ್ಥಳದಲ್ಲಿ ಸೈನ್ಯ ಇಳಿದಿದೆ ಅಥವಾ ಸೇನಾ ತುಕಡಿ ಇಳಿದಿದೆ ಎಂದರೆ ಅದು ಆಕಾಶದಿಂದ ಇಳಿದು ಬಂತು ಎಂದು ಯಾರೂ ಮನವರಿಕೆ ಮಾಡುವುದಿಲ್ಲ. ಇದಲ್ಲದೆ, ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಪೈಗಂಬರರ[ಸ] ಬಗ್ಗೆಯೂ ಅವರು ಆಕಾಶದಿಂದ ಇಳಿದು ಬಂದರೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಆಕಾಶದಿಂದಲೇ ಕಬ್ಬಿಣವನ್ನು ಸಹ ನಾವು ಇಳಿಸಿದೆವು ಎಂದು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಬೇರೆ ಒಂದು ಸ್ಥಳದಲ್ಲಿ ಹೇಳಿದ್ದಾನೆ. ಆದುದರಿಂದ ಆಕಾಶದಿಂದ ಇಳಿದು ಬರುವರು ಎಂದು ಹೇಳಿದುದರ ಅರ್ಥ ಜನರು ಯೋಚಿಸುವ ರೀತಿಯಲ್ಲಿ ಅಲ್ಲವೆಂದು ಸ್ಪಷ್ಟವಾಗುತ್ತದೆ."

**(ಇಝಾಲಃ ಔಹಾಮ್, ರೂಹಾನೀ ಖಝಾಇನ್–ಸಂಪುಟ 3, ಪುಟ 131–132)**

ಹದೀಸುಗಳು ಇದರ ಬಗ್ಗೆ ವಿಶದೀಕರಿಸಿವೆ ಎಂದು ಹಝ್ರತ್ ಮಸೀಹ್ ಮೌಊದ್[ಅ] ಹೇಳಿದ್ದಾರೆ. ಜನರಿಗೆ ಹೆಚ್ಚು ಜ್ಞಾನವಿಲ್ಲ ಹಾಗೂ ಮತ ಪಂಡಿತರು ತಪ್ಪು ಮಾರ್ಗದರ್ಶನ ನೀಡುತ್ತಾರೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು: "ಆದುದರಿಂದ ಯಹೂದಿಯರಿಗೆ ಸಹ ತಪ್ಪು ಗ್ರಹಿಕೆಯಾಯಿತು. ಹಾಗೆ ಅವರು ಹಝ್ರತ್ ಈಸಾ ಮಸೀಹರನ್ನು ನಂಬಲಿಲ್ಲ."

ಈ ದೀರ್ಘ ವಿಷಯಗಳನ್ನೆಲ್ಲ ಖುತ್‌ಬಗಳಲ್ಲಿ ವಿವರಿಸಲು ಸಾಧ್ಯವಾಗದು. ಅಹ್ಮದಿಯರು ತಮ್ಮ ಸುತ್ತು ಮುತ್ತಲೂ ಇವುಗಳ ಬಗ್ಗೆ ಸ್ಪಷ್ಟವಾಗಿ ವಿವರಿಸಿಕೊಡಬೇಕು. ಸಾತ್ವಿಕರಾದವರು ಸಾಧ್ಯವಿರುವಷ್ಟು ರಕ್ಷಿಸಲ್ಪಡಲಿ. ಪ್ರತಿಯೊಂದು ಧರ್ಮ ಉಪದೇಶಿಸುವ ಹಾಗೆ, ಆಗಮಿಸಬೇಕಾದ ಮಹಾನುಭಾವರು ಆಗಮಿಸಿರುವರೆಂದು ಅಹ್ಮದಿಯರು ಸ್ಪಷ್ಟವಾಗಿ ಪ್ರತಿಯೊಂದು ಧರ್ಮದವರೊಂದಿಗೆ ಹೇಳಬೇಕು.

ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳುತ್ತಾರೆ: "ಅಬೂ ದಾಊದ್ ಹದೀಸ್ ಗ್ರಂಥದಲ್ಲಿರುವ ಒಂದು ಹದೀಸಿನ ಬಗ್ಗೆ ವಾಚಕರ ಗಮನ ಸೆಳೆಯಲು ಬಯಸುತ್ತೇನೆ. ಹಾರಿಸ್ ಎಂಬ ವ್ಯಕ್ತಿ ಸಮರ್‌ಖಂಡದಿಂದ ಹೊರಟು ಹಝ್ರತ್ ಪೈಗಂಬರರ[ಸ] ಅನುಯಾಯಿಗಳಿಗೆ ಬಲವನ್ನು ನೀಡುವನು ಎಂದು ಆ ಹದೀಸಿನಲ್ಲಿದೆ. ಆ ವ್ಯಕ್ತಿಗೆ ಪ್ರತಿಯೊಬ್ಬ ಸತ್ಯವಿಶ್ವಾಸಿ ಸಹಾಯ ಮಾಡುವುದು ಕಡ್ಡಾಯವಾಗಿರುವುದು. ನನಗೆ ಅಲ್ಲಾಹನು ಇಲ್‌ಹಾಮ್ ಮೂಲಕ ತಿಳಿಸಿರುವನು. ಈ ವ್ಯಕ್ತಿಯ ಬಗ್ಗೆ ಭವಿಷ್ಯವಾಣಿ ಮತ್ತು ಮಸೀಹ್ ಆಗಮಿಸುವ ಬಗ್ಗೆ ಭವಿಷ್ಯವಾಣಿ, ಎಂದರೆ ಮುಸ್ಲಿಮರ ಇಮಾಮರಾಗಿ ಮುಸ್ಲಿಮರಿಂದ ಆಗಮಿಸುವ ಮಸೀಹರ ಬಗ್ಗೆಯ ಭವಿಷ್ಯವಾಣಿ – ಇವುಗಳೆರಡರ ವಿಷಯ ಒಂದೇ ಆಗಿದೆ ಮತ್ತು ಈ ಎರಡು ಭವಿಷ್ಯವಾಣಿಗಳು ಈ ವಿನೀತನ ಬಗ್ಗೆಯೇ ಆಗಿವೆ. ಮಸೀಹ್ ಬಗ್ಗೆ ಇರುವ ಭವಿಷ್ಯವಾಣಿಯ ವಿಶಿಷ್ಟ ಚಿಹ್ನೆಗಳು ಎರಡು ಮಾತ್ರವಾಗಿವೆ. ಒಂದು, ಮಸೀಹ್ ಬರುವಾಗ ಮುಸ್ಲಿಮರ ಅತ್ಯಂತ ಕೆಟ್ಟು ಹೋದ ಸ್ಥಿತಿಯನ್ನು ತನ್ನ ಸರಿಯಾದ ಉಪದೇಶ ನೀಡಿ ಅವರು ಸರಿಪಡಿಸುವರು."

ಈ ವಿಷಯದ ಬಗ್ಗೆ ನಾನು ಹಿಂದಿನ ಖುತ್‌ಬಗಳಲ್ಲಿ ವಿವರಿಸಿದ್ದೇನೆ. ಅವರ ಸ್ಥಿತಿ ಬಿಗಡಾಯಿಸಿದೆ ಎಂದೂ ಒಬ್ಬ ಸುಧಾರಕನ ಆವಶ್ಯಕತೆ ಇದೆ ಎಂದೂ ಮುಸ್ಲಿಮರೇ ಸ್ವತಃ ಒಪ್ಪಿಕೊಳ್ಳುತ್ತಾರೆ.

## ಮಸೀಹ್ ಮೌಊದ್ ಖಜಾನೆಗಳನ್ನು ಹಂಚುವುದರ ಅರ್ಥ

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಮಸೀಹ್ ತನ್ನ ಸರಿಯಾದ ಉಪದೇಶಗಳಿಂದ ಅವರ ಸ್ಥಿತಿಯನ್ನು ಸರಿಪಡಿಸುವರು. ಅವರ ಆಧ್ಯಾತ್ಮಿಕ ದಾರಿದ್ರ್ಯವನ್ನೂ ಆಂತರಿಕ ಕೊರತೆಗಳನ್ನೂ ಸಂಪೂರ್ಣವಾಗಿ ನೀಗಿಸುವರು. ಜ್ಞಾನದ ವಜ್ರಗಳನ್ನು ಅವರ ಮುಂದಿರಿಸುವರು. ಜನರು ಈ ಸಂಪತ್ತನ್ನು ತೆಗೆದುಕೊಳ್ಳುತ್ತಾ ಬಳಲುವರು. ಅವರಲ್ಲಿ ಯಾರೂ ಆಧ್ಯಾತ್ಮಿಕವಾಗಿ ದರಿದ್ರರಾಗಿರಲಾರರು. ಸತ್ಯವನ್ನು ಅರಿತುಕೊಳ್ಳಲು ಹಸಿದಿರುವವರಿಗೆ ಸತ್ಯದ ಪರಿಶುದ್ಧ ಆಹಾರ ನೀಡಲ್ಪಡುವುದು ಮತ್ತು ಜ್ಞಾನದ ಪಾನೀಯ ಕುಡಿಸಲ್ಪಡುವುದು." ಎಂದರೆ, ಮಸೀಹ್ ಮೌಊದ್‌ರ[ಅ] ಮೂಲಕವೇ ಅವರಿಗೆ ಸತ್ಯದ ಪರಿಶುದ್ಧ ಆಹಾರ ಸಿಗುವುದು, ಇಸ್ಲಾಮಿನ ಸರಿಯಾದ ಅಧ್ಯಾಪನೆ ಅವರಿಗೆ ಸಿಗುವುದು ಮತ್ತು ಜ್ಞಾನದ ಸಿಹಿ ಪಾನೀಯ ಅವರಿಗೆ ಕುಡಿಸಲಾಗುವುದು. ಜನರು ಜ್ಞಾನದ ಪಾನೀಯ ಕುಡಿಯುವವರಾಗಿದ್ದರೆ ಇಂತಹ ವಿನಾಶಕರ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ಬದಲಾಗಿ, ಅವರು ಗುಣಕರವಾದ ಪ್ರತಿಕ್ರಿಯೆ ನೀಡುತ್ತಿದ್ದರು ಮತ್ತು ದೇವನ ಮುಂದೆ ಬಾಗುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಸತ್ಯವಾದ ಜ್ಞಾನದ ಮುತ್ತುಗಳಿಂದ ಅವರ ಜೋಳಿಗೆಗಳು ತುಂಬಿಸಲ್ಪಡುವುವು. ಪವಿತ್ರ ಖುರ್‌ಆನಿನ ತಿರುಳು ಮತ್ತು ಅದರ ಸತ್ವದಿಂದ ತುಂಬಿದ ಸುವಾಸನಾ ದ್ರವ್ಯದ ಶೀಷೆಗಳು ಅವರಿಗೆ ನೀಡಲ್ಪಡುವುವು."

## ಶಿಲುಬೆಯನ್ನು ಮುರಿಯುವುದು ಮತ್ತು ಹಂದಿಯನ್ನು ಕೊಲ್ಲುವುದರ ವ್ಯಾಖ್ಯಾನ

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಮಸೀಹರ ಎರಡನೆಯ

ವಿಶಿಷ್ಟ ಚಿಹ್ನೆ ಹೀಗಿದೆ – ಮಸೀಹ್ ಮೌಊದ್ ಆಗಮಿಸಿ ಶಿಲುಬೆಯನ್ನು ಮುರಿಯುವರು ಮತ್ತು ಹಂದಿಗಳನ್ನು ಕೊಲ್ಲುವರು. ಒಕ್ಕಣ್ಣನಾದ ದಜ್ಜಾಲನನ್ನೂ ಕೊಲ್ಲುವರು. ಅವರು ಊದಿದ ಉಸಿರು ಯಾವ ಅವಿಶ್ವಾಸಿಗೆ ತಲಪುವುದೋ ಅವನು ತಕ್ಷಣ ಸತ್ತು ಹೋಗುವನು. ಈ ಚಿಹ್ನೆಯ ನಿಜ ಅರ್ಥ ಆಧ್ಯಾತ್ಮಿಕವಾದುದಾಗಿದೆ. ಮಸೀಹ್ ಲೋಕಕ್ಕೆ ಆಗಮಿಸಿ ಶಿಲುಬೆಯ ಧರ್ಮದ ವೈಭವವನ್ನು ಕುಂದಿಸುವರು. ಹಂದಿಗಳ ಲಜ್ಜಾಹೀನತೆ ಮತ್ತು ಕೊಳಕು ಪದಾರ್ಥಗಳನ್ನು ತಿನ್ನುವ ಗುಣ ಯಾವ ಜನರಿಗಿದೆಯೋ ಅವರ ವಿರುದ್ಧ ಸಾಕ್ಷ್ಯಾಧಾರಗಳ ಆಯುಧ ಬಳಸಿ ಅವರನ್ನು ನಿರ್ನಾಮ ಮಾಡುವರು. ಯಾವ ಜನರು ಕೇವಲ ಲೌಕಿಕ ದೃಷ್ಟಿ ಹೊಂದಿರುವರೋ, ಧರ್ಮದ ದೃಷ್ಟಿ ಯಾರಿಗೆ ಇಲ್ಲವೋ ಮತ್ತು ಅವರ ಕಣ್ಣಿನ ಮೇಲೆ ಒಂದು ಕುರುವಿನಂತೆ ಇದೆಯೋ ಅವರನ್ನು ಹರಿತ ಖಡ್ಗದಂತಹ ಸಾಕ್ಷ್ಯಾಧಾರಗಳ ಮೂಲಕ ಅವರ ವಾದಗಳನ್ನೂ ಅವರ ಅಸ್ತಿತ್ವವನ್ನೂ ಕೊನೆಗೊಳಿಸುವರು. ಇಂತಹ ಒಕ್ಕಣ್ಣನನ್ನು ಮಾತ್ರವಲ್ಲ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಧರ್ಮವನ್ನು ತಾತ್ಸಾರ ದೃಷ್ಟಿಯಿಂದ ಕಾಣುವ ಅವಿಶ್ವಾಸಿಗಳನ್ನು ತನ್ನ ಸಾಕ್ಷ್ಯಾಧಾರಗಳ ಬಲವತ್ತಾದ ಉಸಿರಿನಿಂದ ಊದಿ ಆಧ್ಯಾತ್ಮಿಕವಾಗಿ ಕೊಲ್ಲುವರು.

"ಈ ಎಲ್ಲ ವಿವರಣೆಗಳು ಕೇವಲ ಆಲಂಕಾರಿಕವಾಗಿ ಬಳಸಲ್ಪಟ್ಟಿವೆ. ಇದರ ಬಗ್ಗೆ ನನಗೆ ಅರಿವು ನೀಡಲಾಗಿದೆ. ಇದನ್ನು ಯಾರಾದರೂ ಮನವರಿಕೆ ಮಾಡಿಕೊಂಡರೂ ಇಲ್ಲವಾದರೂ ಸ್ವಲ್ಪ ಕಾಲದ ನಂತರ ತಮ್ಮ ನಿರಾಧಾರ ಪ್ರತೀಕ್ಷೆಗಳ ಬಗ್ಗೆ ಸಂಪೂರ್ಣ ನಿರಾಶರಾಗಿ ಮುಂದೊಂದು ದಿನ ಎಲ್ಲ ಜನರು ಸತ್ಯದ ಕಡೆಗೆ ಮರಳುವರು."

**(ಇಝಾಲಃ ಔಹಾಮ್ – ರೂಹಾನೀ ಖಝಾಇನ್ ಭಾಗ 3, ಪುಟ 141–143 – ಅಡಿ ಟಿಪ್ಪಣಿ)**

ಇಂದಿನ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಕ್ರೈಸ್ತ ಧರ್ಮಕ್ಕೆ ಪಂಥಾಹ್ವಾನ ನೀಡಿದರು. ಕ್ರೈಸ್ತ ಧರ್ಮ ವೇಗವಾಗಿ ಹರಡುತ್ತಾ ಇದ್ದಾಗ ಅದನ್ನು ತಡೆಗಟ್ಟಿದುದು ಅವರೇ ಆಗಿದ್ದಾರೆ. ಹಿಂದೂಸ್ತಾನದಲ್ಲಿ ಹಝ್ರತ್ ಮಸೀಹ್ ಮೌಊದ್‌ರ(ಅ) ಕಾಲದಲ್ಲಿ ಸಾವಿರಾರು ಅಲ್ಲ, ಲಕ್ಷಾಂತರ ಮುಸ್ಲಿಮರು ಕ್ರೈಸ್ತರಾಗುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಕ್ರೈಸ್ತ ಧರ್ಮದ ಆಕ್ರಮಣವನ್ನು ತಡೆಗಟ್ಟಿದರಲ್ಲದೆ ಇಸ್ಲಾಮ್ ಧರ್ಮದ ಘನತೆಯನ್ನು ಪುನಃ ಸ್ಥಾಪಿಸಿದರು. ಆಫ್ರಿಕದಲ್ಲಿ ಅಹ್ಮದಿಯಾ ಜಮಾಅತ್ ಕ್ರೈಸ್ತ ಧರ್ಮದ ಆಕ್ರಮಣವನ್ನು ತಡೆಗಟ್ಟಿತು. ಇಸ್ಲಾಮಿನ ಸುಂದರ ಚಿತ್ರವನ್ನು ಜನರಿಗೆ ತೋರಿಸಿ ಸಾವಿರಾರು ಅಲ್ಲ, ಲಕ್ಷಾಂತರ ಕ್ರೈಸ್ತರನ್ನು ಮುಸ್ಲಿಮರನ್ನಾಗಿ ಮಾಡಿತು. ಇವೆಲ್ಲವೂ ಹಝ್ರತ್ ಮಸೀಹ್ ಮೌಊದ್‌ರ(ಅ) ಕಾರ್ಯಗಳಾಗಿದ್ದುವು. ಅಲ್ಲಾಹನ ಅನುಗ್ರಹದಿಂದ ಈಗಲೂ ಅವರು ನೀಡಿದ ಉಪದೇಶಗಳನ್ನು ಮತ್ತು ಸಾಕ್ಷ್ಯಾಧಾರಗಳನ್ನು ಬಳಸಿಕೊಂಡು ಅಹ್ಮದಿಯಾ ಜಮಾಅತ್ ಜನರ ಹೃದಯಗಳನ್ನು ಜಯಿಸುತ್ತಾ ಸಾಗುತ್ತಿದೆ. ಅದು ಹೀಗೆಯೇ ಮುಂದೆ ಹೋಗುವುದು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ ಹಾಗೆ ಜನರು ನಿರಾಶರಾಗಿ ಮರಳಿ ಬರುವರು.

ಜನರ ಸುಳ್ಳು ಮತ್ತು ಮೋಸವನ್ನು ಕೊನೆಗೊಳಿಸುವ ಬಗ್ಗೆ ವಿಶದೀಕರಣ ಮೇಲಿನಂತಿದೆ. ಹಂದಿಯನ್ನು ಕೊಲ್ಲುವುದರ ಮತ್ತು ಶಿಲುಬೆ ಮುರಿಯುವುದರ ಅರ್ಥ ಮೇಲೆ ವಿವರಿಸಿದಂತೆ ಆಗಿದೆ. ದಜ್ಜಾಲನನ್ನು ಕೊಲ್ಲುವುದರ ಅರ್ಥ ಸಹ ವಿವರಿಸಲಾಗಿದೆ. ಇವೆಲ್ಲವೂ ಹಝ್ರತ್ ಮಸೀಹ್ ಮೌಊದ್(ಅ) ವಿವರಿಸಿದವುಗಳಾಗಿವೆ. ನಾನು ಹೇಳಿದಂತೆ

ಇಂದು ಸಹ ಕ್ರೈಸ್ತರ ಆಕ್ರಮಣವನ್ನು ಅಹ್ಮದಿಯಾ ಜಮಾಅತ್ ತಡೆಗಟ್ಟುತ್ತಿದೆ.

ಇತ್ತೀಚೆಗೆ ಟಿ.ವಿ.ಯಲ್ಲಿ, ಪ್ರಾಯಶಃ ಜಿಯೋ ಅಥವಾ ARYಯಲ್ಲಿ ಅಥವಾ ಬೇರೆ ಯಾವುದೋ ಏಶಿಯಾದಿಂದ ಬಿತ್ತರಿಸಲಾಗುವ ಕಾರ್ಯಕ್ರಮದಲ್ಲಿ ಅಲ್ಲಾಮ ಡಾಕ್ಟರ್ ಇಸ್ರಾರ್ ಹೀಗೆ ಹೇಳಿದರು: ಮುಸ್ಲಿಮ್ ಮತಪಂಡಿತರು ಅಜ್ಞಾನಿಗಳಾಗಿದ್ದರು. ಅವರಿಗೆ ಧಾರ್ಮಿಕ ಜ್ಞಾನ ಇರಲಿಲ್ಲ. ಪವಿತ್ರ ಖುರ್‌ಆನ್ ಬಗ್ಗೆಯಾಗಲೀ ಬೈಬಲ್ ಬಗ್ಗೆಯಾಗಲೀ ಜ್ಞಾನವಿರಲಿಲ್ಲ. ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಒಬ್ಬ ಜ್ಞಾನ ಸಂಪನ್ನ ವ್ಯಕ್ತಿಯಾಗಿದ್ದರು. ಬೈಬಲ್ ಬಗ್ಗೆಯೂ ಅನ್ಯ ಧರ್ಮಗಳ ಬಗ್ಗೆಯೂ ಜ್ಞಾನ ಗಳಿಸಿದವರಾಗಿದ್ದರು. ಆದುದರಿಂದ ಅವರು ಕ್ರೈಸ್ತ ಧರ್ಮದವರನ್ನು ಎದುರಿಸಿದರು ಮತ್ತು ಅವರ ಬಾಯಿ ಮುಚ್ಚಿಸಿದರು.

ಅಲ್ಲಾಮ ಡಾಕ್ಟರ್ ಇಸ್ರಾರ್ ಹೇಳಿದ ಮಾತುಗಳ ಸಾರಾಂಶ ಮೇಲಿನಂತೆ ಇತ್ತು. ಹಝ್ರತ್ ಮಸೀಹ್ ಮೌಊದ್[ಅ] ಬಲಿಷ್ಠವಾದ ಸಾಕ್ಷ್ಯಾಧಾರಗಳ ಮೂಲಕ ಕ್ರೈಸ್ತ ಧರ್ಮದವರನ್ನು ಖಂಡಿಸಿದರು ಎಂದು ಅವರು ಒಪ್ಪಿದರು. ಕ್ರೈಸ್ತರ ಆಕ್ರಮಣಗಳನ್ನು ತಡೆದು ಮುಸ್ಲಿಮರನ್ನು ಕ್ರೈಸ್ತರಾಗುವುದರಿಂದ ರಕ್ಷಿಸಿದರೆಂದು ಅವರು ಸಮ್ಮತಿಸುತ್ತಾರೆ.

ಅನಂತರ ಅಲ್ಲಾಮ ಡಾಕ್ಟರ್ ಇಸ್ರಾರ್ ಹಝ್ರತ್ ಮಸೀಹ್ ಮೌಊದ್‌ರ[ಅ] ವಿರುದ್ಧ ಸಹ ಮಾತಾಡಿದ್ದರು. ಅವರು ಮಸೀಹರಾಗಲು ಸಾಧ್ಯವಿಲ್ಲ ಎಂದು ಸಹ ಹೇಳಿದರು.

ಆದರೆ ಇಂದಿನ ತನಕ ಹೀಗೆ ಅಹ್ಮದಿಯೇತರರು ಸಮ್ಮತಿಸುತ್ತಾರೆ: ಕ್ರೈಸ್ತ ಧರ್ಮದ ವಿರುದ್ಧ ನಿಂತು ಅದರ ಉಪದೇಶಗಳನ್ನು ಸಾಕ್ಷ್ಯಾಧಾರಗಳ ಮೂಲಕ ಖಂಡಿಸಿದ ಏಕಮಾತ್ರ ಪಹಿಲ್ವಾನ್ ಹೆಸರು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಎಂದಾಗಿದೆ.

ಈ ಜನರು ಈಗ ಒಪ್ಪಲಿ ಅಥವಾ ಒಪ್ಪದಿರಲಿ. ಹಝ್ರತ್ ಮಸೀಹ್ ಮೌಊದ್[ಅ] ಹೇಳಿದ ಹಾಗೆ ಒಂದು ದಿನ ಈ ಜನರು ಹೀಗೆ ಒಪ್ಪಬೇಕಾದೀತು: ಹಝ್ರತ್ ಮಸೀಹ್ ಮೌಊದ್[ಅ] ನೀಡಿದ ಮಸೀಹೀ ಸಾಕ್ಷ್ಯಾಧಾರಗಳ ಮೂಲಕವೇ ದಜ್ಜಾಲನು ಹತನಾದನು. ಅವರೇ ವಾಗ್ದತ್ತ ಮಸೀಹ್ ಮೌಊದ್ ಆಗಿದ್ದಾರೆ.

## ವಾಗ್ದತ್ತ ಮಸೀಹ್ ಮುಸ್ಲಿಮ್ ಸಮುದಾಯದಿಂದಲೇ ಬರಬೇಕಾಗಿತ್ತು

ಮಸೀಹಿಬ್ನು ಮರ್‌ಯಮ್ ಆಕಾಶದಿಂದ ದೇವದೂತರ ಹೆಗಲುಗಳಿಗೆ ಕೈ ಹಾಕಿಕೊಂಡು ಇಳಿದು ಬರುವರು ಎಂಬ ಹದೀಸಿನ ಬಾಹ್ಯ ಮತ್ತು ತಪ್ಪು ವ್ಯಾಖ್ಯಾನದ ಕಾರಣದಿಂದ ಮುಸ್ಲಿಮರು ಇಂದಿನ ತನಕ ಮಸೀಹರನ್ನು ಪ್ರತೀಕ್ಷಿಸುತ್ತಾ ಇದ್ದಾರೆ ಎಂದು ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು. ಅವರು ಜನರ ಈ ತಪ್ಪು ಗ್ರಹಿಕೆಯನ್ನು ಹದೀಸಿನ ಮೂಲಕವೇ ವಿಶದೀಕರಿಸಿದರು. ಅವರು ಹೀಗೆ ಹೇಳಿದರು:

"ವಾಗ್ದತ್ತ ಮಸೀಹರು ಮುಸ್ಲಿಮ್ ಸಮುದಾಯ ದಿಂದಲೇ ಬರುವರು ಎಂಬುದಕ್ಕೆ ಈ ಎಲ್ಲ ಸಾಕ್ಷ್ಯಾಧಾರ ಗಳೊಂದಿಗೆ ಬುಖಾರಿ ಮತ್ತು ಮುಸ್ಲಿಮ್ ಹದೀಸು ಗ್ರಂಥಗಳ ಸಾಕ್ಷ್ಯಾಧಾರಗಳೂ ಇವೆ. ಈ ಹದೀಸು ಗ್ರಂಥಗಳಲ್ಲಿ "**ಇಮಾಮುಕುಮ್ ಮಿನ್‌ಕುಮ್**" ಮತ್ತು "**ಅಮ್ಮಕುಮ್ ಮಿನ್‌ಕುಮ್**" ಎಂದು ಬರೆಯಲಾಗಿದೆ. ಅದರ ಅರ್ಥ, ವಾಗ್ದತ್ತ

ಮಸೀಹ್ ನಿಮ್ಮಿಂದಲೇ ಬರುವರು. ನಿಮ್ಮ ಇಮಾಮ್ ಆಗಿರುವರು ಎಂದಾಗಿದೆ. ಈ ಹದೀಸು ಆಗಮಿಸಲಿರುವ ಈಸಾ ಮಸೀಹರ ಬಗ್ಗೆಯಾಗಿರುವುದರಿಂದ ಅವರ ಗುಣವಾಗಿ **ಹಕಮ್** ಮತ್ತು **ಅದಲ್** ಎಂಬ ಪದಗಳಿವೆ. ಅದು ಈ ವಾಕ್ಯದ ಮೊದಲಿದೆ. ಆದುದರಿಂದ **ಇಮಾಮ್** ಪದ ಬಳಸಿದುದು ಅವರ ಬಗ್ಗೆಯೇ ಆಗಿದೆ. ಈ ಹದೀಸಿನಲ್ಲಿ **ಮಿನ್‌ಕುಮ್**(ನಿಮ್ಮಿಂದ) ಎಂದು ಹೇಳಿ ಸಹಾಬಿಗಳನ್ನು ಸಂಬೋಧಿಸಲಾಗಿದೆ ಎಂಬುದರ ಬಗ್ಗೆ ಸಂಶಯವಿಲ್ಲ. ಅವರೇ ಸಂಬೋಧಿಸಲ್ಪಟ್ಟಿದ್ದಾರೆ. ಆದರೆ ಅವರಲ್ಲಿ ಯಾರೂ ತಾನು ವಾಗ್ದತ್ತ ಮಸೀಹ್ ಎಂದು ವಾದಿಸಿರಲಿಲ್ಲ. ಆದುದರಿಂದ **ಮಿನ್‌ಕುಮ್** ಎಂದು ಬಳಸಿದ ಪದ ಅಲ್ಲಾಹನ ದೃಷ್ಟಿಯಲ್ಲಿ ಸಹಾಬರ ಸ್ಥಾನವನ್ನು ಪಡೆದ ವ್ಯಕ್ತಿಯ ಬಗ್ಗೆಯಾಗಿದೆ ಎಂದು ಮನವರಿಕೆಯಾಗುತ್ತದೆ. ಪವಿತ್ರ ಖುರ್‌ಆನಿನ "**ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂಬಿಹಿಮ್**" (ಅವರೊಂದಿಗೆ ಇಷ್ಟರವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ) ಎಂಬ ವಚನ ಇದನ್ನೇ ಸೂಚಿಸುತ್ತದೆ. ಆಗಮಿಸುವ ವಾಗ್ದತ್ತ ಮಸೀಹ್, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಂದ ಆಧ್ಯಾತ್ಮಿಕವಾಗಿ ತರಬೇತಿ ಪಡೆದವರಾಗುವರು. ಈ ಅರ್ಥ ಪ್ರಕಾರ ಅವರು ಸಹಾಬರೊಂದಿಗೆ ಸೇರಿದವರಾಗುವರು. ಈ ವಚನದ ವ್ಯಾಖ್ಯಾನ ಈ ಕೆಳಗಿನ ಹದೀಸು ಮಾಡುತ್ತದೆ:

**"ಲೌ ಕಾನಲ್ ಈಮಾನು ಮುಅಲ್ಲಖನ್ ಬಿಸುರಯ್ಯಾ ಲನಾಲಹೂ ರಜುಲುಮ್ಮಿನ್ ಫಾರಿಸ್"**

(ಸತ್ಯ ವಿಶ್ವಾಸ ಸುರಯ್ಯಾ ನಕ್ಷತ್ರವನ್ನು ತಲಪಿದರೂ ಅದನ್ನು ಫಾರಸೀ ವಂಶಜನಾದ ಒಬ್ಬನು ಭೂಮಿಗೆ ಮರಳಿ ತರುವನು.)

"ಸತ್ಯ ವಿಶ್ವಾಸ ಮತ್ತು ಏಕದೇವ ವಿಶ್ವಾಸದಿಂದ ಭೂಮಿ ಬರಿದಾಗಿ ದೌರ್ಜನ್ಯ ಭರಿತವಾಗುವಾಗ ಅದನ್ನು ನ್ಯಾಯದಿಂದ ತುಂಬಬೇಕಾದ ಮಹನೀಯ ಫಾರಸೀ ವಂಶಜನಾಗುವನೆಂದು ಹೇಳಲಾಗಿದೆ. ಆ ವ್ಯಕ್ತಿಯೇ ಮಹ್‌ದೀ ಮಸೀಹ್. ಆ ವಾಗ್ದತ್ತ ಮಹ್‌ದೀ ಮಸೀಹ್ ನಾನಾಗಿರುವೆನು."

**(ತುಹ್‌ಫಃ ಗೋಲ್ಡವಿಯಃ – ರೂಹಾನೀ ಖಝಾಇನ್ – ಭಾಗ 17. ಪುಟ 114–115)**

## ಮಸೀಹ್ ಮತ್ತು ಮಹ್‌ದೀ ಒಬ್ಬ ವ್ಯಕ್ತಿಯ ಎರಡು ನಾಮಗಳಾಗಿವೆ. ವಾಗ್ದತ್ತ ಮಸೀಹ್ ಯುದ್ಧಗಳನ್ನು ಸ್ಥಗಿತಗೊಳಿಸುವರು

ಹಝ್ರತ್ ಮಸೀಹ್ ಮೌಊದ್(ಅ) ಇನ್ನೂ ಹೆಚ್ಚು ವಿಶದೀಕರಿಸಿದರು. ಅವರು ಹೇಳಿದರು: "**ಲಾ ಮಹ್‌ದೀ ಇಲ್ಲಾ ಈಸಾ**" ಎಂಬ ಹದೀಸು ಇಬ್ನುಮಾಜ ಎಂಬ ಹದೀಸು ಗ್ರಂಥದಲ್ಲಿದೆ. ಹಾಕಿಮ್ ಬರೆದ **ಮುಸ್ತದ್ರಕ್** ಎಂಬ ಹದೀಸು ಗ್ರಂಥದಲ್ಲಿ ಅನಸ್ ಬಿನ್ ಮಾಲಿಕ್‌ರಿಂದ ಸಹ ಈ ಹದೀಸು ವರದಿಯಾಗಿದೆ. ಈ ವರದಿಯನ್ನು ಮುಹಮ್ಮದ್ ಬಿನ್ ಖಾಲಿದುಲ್ ಜನದಿ ಎಂಬವರು ಅಬ್ಬಾನಿಬ್ನು ಸಾಲಿಹ್‌ರಿಂದ ಮತ್ತು ಅಬ್ಬಾನಿಬ್ನು ಸಾಲಿಹ್ ಹಸನ್ ಬಸರಿಯಿಂದ ಮತ್ತು ಹಸನ್ ಬಸರಿ ಅನಸ್ ಬಿನ್ ಮಾಲಿಕ್‌ರಿಂದ ಮತ್ತು ಅನಸ್ ಬಿನ್ ಮಾಲಿಕ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಂದ ವರದಿ ಮಾಡಿದ್ದಾರೆ. ಈ ಹದೀಸಿನ ಅರ್ಥ ಹೀಗೆ: ಹಝ್ರತ್ ಈಸಾ ಮಸೀಹರ ಸ್ವಭಾವಪ್ರಕೃತಿ ಮತ್ತು ಉಪದೇಶಗಳ

ರೀತಿಯಲ್ಲಿ ಆಗಮಿಸುವ ವ್ಯಕ್ತಿಯ ಹೊರತು ಬೇರೆ ಯಾರೂ ಮಹ್‌ದೀ ಆಗಲಾರ. ಹಝ್ರತ್ ಈಸಾ ಮಸೀಹರ ಸ್ವಭಾವ ಪ್ರಕೃತಿ ಹೊಂದಿ ಅವರ ಉಪದೇಶಗಳ ರೀತಿಯನ್ನು ಹೊಂದಿರುವವನೇ ವಾಗ್ದತ್ತ ಮಹ್‌ದೀ ಮಸೀಹ್ ಆಗಿ ಆಗಮಿಸುವನು. ಎಂದರೆ ಕೆಡುಕನ್ನು ಎದುರಿಸಿ ಯುದ್ಧ ಮಾಡಲಾರನು. ಪರಿಶುದ್ಧ ಮಾದರಿ ಮತ್ತು ದೃಷ್ಟಾಂತಗಳ ಮೂಲಕ ಸನ್ಮಾರ್ಗವನ್ನು ಹರಡುವನು. ಈ ಹದೀಸಿಗೆ ಬೆಂಬಲವಾಗಿ ಇಮಾಮ್ ಬುಖಾರಿಯ ಹದೀಸು ಗ್ರಂಥದಲ್ಲಿ ಇನ್ನೊಂದು ಹದೀಸು ಇದೆ. ಅದರಲ್ಲಿ **ಯಝಉಲ್ ಹರ್‌ಬ** ಎಂದರೆ ಆಗಮಿಸಲಿರುವ ಮಹ್‌ದಿ (ಅವರ ಇನ್ನೊಂದು ಹೆಸರು ಮಸೀಹ್ ಮೌಊದ್ ಎಂದಾಗಿದೆ) ಧಾರ್ಮಿಕ ಯುದ್ಧಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವರು. ಧರ್ಮಕ್ಕೋಸ್ಕರ ಯುದ್ಧಮಾಡಬಾರದೆಂದು ಅವರು ಉಪದೇಶ ನೀಡುವರು. ಸತ್ಯದ ಪ್ರಕಾಶದಿಂದಲೂ ನೈತಿಕ ಗುಣಗಳ ಅದ್ಭುತ ಪ್ರಕಟಣೆ ಮೂಲಕ ಮತ್ತು ಅಲ್ಲಾಹನ ಸಾಮೀಪ್ಯಗಳಿಸಿದ ಚಿಹ್ನೆಗಳಿಂದಲೂ ಧರ್ಮವನ್ನು ಹರಡಬೇಕೆಂದು ಅವರು ಉಪದೇಶಿಸುವರು. ನಾನು ಸತ್ಯವಾಗಿ ಹೇಳುತ್ತೇನೆ: ಯಾರು ಧರ್ಮಕ್ಕೋಸ್ಕರ ಯುದ್ಧ ಮಾಡುತ್ತಾನೋ ಮತ್ತು ಯುದ್ಧ ಮಾಡುವವನಿಗೆ ಬೆಂಬಲ ನೀಡುತ್ತಾನೋ ಅಥವಾ ರಹಸ್ಯವಾಗಿ ಹಾಗೆ ಸಲಹೆ ನೀಡುತ್ತಾನೋ ಅಥವಾ ಹೃದಯದಲ್ಲಿ ಅಂತಹ ಆಶೆ ಹೊಂದಿರುವನೋ ಅವನು ಅಲ್ಲಾಹನ ಮತ್ತು ಅವನ ಸಂದೇಶ ವಾಹಕರ ಆಜ್ಞೆಗಳನ್ನು ಪಾಲಿಸದವನಾಗಿದ್ದಾನೆ. ಅವನು ಅವರ ಆದೇಶಗಳ ಮಿತಿಯಿಂದ ಹೊರಗೆ ಹೋದವನಾಗಿದ್ದಾನೆ."

**(ಹಖೀಖತುಲ್ ಮಹ್‌ದೀ– ರೂಹಾನೀ ಖಝಾಇನ್ – ಭಾಗ 14 ಪುಟ 431–432)**

ನೀವು ನೋಡಿರಿ, ಮುಸ್ಲಿಮರ ಇಂದಿನ ಸ್ಥಿತಿಗಳು ಮೇಲಿನ ಹೇಳಿಕೆಯನ್ನು ಬೆಂಬಲಿಸುತ್ತದೆ. ಮುಸ್ಲಿಮರು ನಡೆಸುವ ಈ ಯುದ್ಧಗಳು ಅಲ್ಲಾಹನ ಆಜ್ಞೆಗಳಿಗೆ ಅನುಸಾರವಾಗಿದ್ದರೆ ಅಲ್ಲಾಹನು ಹೀಗೆ ಹೇಳಿದ್ದಾನೆ: وَكَانَ حَقًّا عَلَيْنَا نَصْرُ الْمُؤْمِنِينَ

**"ವ ಕಾನ ಹಖ್ಖನ್ ಅಲೈನಾ ನಸ್‌ರುಲ್ ಮೂಮಿನೀನ್"** ಅರ್ಥ: "ವಿಶ್ವಾಸಿಗಳಿಗೆ ನೆರವು ನೀಡುವುದು ನಮಗೆ ಕಡ್ಡಾಯವಾಗಿದೆ." **(ಪವಿತ್ರ ಖುರ್‌ಆನ್ 30: 48)**

ಆದ್ದರಿಂದ ಅಲ್ಲಾಹನ ಸಹಾಯ ದೊರಕದೆ ಇರುವಾಗ ಅದರ ಬಗ್ಗೆ ಯೋಚಿಸಬೇಕಾಗಿದೆ. ಯುದ್ಧ ಮಾಡಬೇಕೆಂಬ ಅತಿಯಾದ ಉತ್ಸಾಹವಿದ್ದರೆ ಇಸ್ಲಾಮಿನ ಹೆಸರಿನಲ್ಲಿ ಯುದ್ಧ ಮಾಡಬೇಡಿರಿ.

ಈ ಕಾಲದಲ್ಲಿ ಮುಸ್ಲಿಮರು ಅನ್ಯ ಸಮುದಾಯದಿಂದ ಸೋಲನ್ನು ಅನುಭವಿಸುತ್ತಿರುವುದರಿಂದ ಅದು ಆಗಮಿಸಲಿದ್ದ ವಾಗ್ದತ್ತ ಮಸೀಹ್ ಆಗಮಿಸಿ ಆಗಿದೆ ಎಂಬುದಕ್ಕೆ ಅಲ್ಲಾಹನ ಕೃತಿರೂಪದ ಸಾಕ್ಷ್ಯವಾಗಿದೆ. ಧಾರ್ಮಿಕ ಯುದ್ಧಗಳು ಹದೀಸಿನಲ್ಲಿ ಹೇಳಿದ ಪ್ರಕಾರ ಸ್ಥಗಿತಗೊಂಡಿವೆ. ಜಿಹಾದ್ ಮಾಡಲು ಬಯಸುವುದಾದರೆ ಸಾಕ್ಷ್ಯಾಧಾರಗಳ ಮೂಲಕ ಜಿಹಾದ್ ಮಾಡಬೇಕು. ಈ ಮುಸ್ಲಿಮರು ಇಸ್ಲಾಮಿನ ಹೆಸರಲ್ಲಿ ಮಾಡುವ ಯುದ್ಧಗಳ ಪರಿಣಾಮಗಳು ಅಲ್ಲಾಹನ ಕೃತಿರೂಪದ ಸಾಕ್ಷ್ಯ ಪ್ರಕಾರ ಮುಸ್ಲಿಮರಿಗೆ ವಿರುದ್ಧವಾಗಿವೆ ಮತ್ತು ಕಣ್ಣಿರುವ ಪ್ರತಿಯೊಬ್ಬ ಕಾಣಬಹುದಾಗಿದೆ. "ನಾನು ಸತ್ಯವಿಶ್ವಾಸಿಗೆ ಸಹಾಯ ಮಾಡುವೆನು, ಸತ್ಯವಿಶ್ವಾಸಿಯಾಗಿದ್ದರೆ" ಎಂದು ಅಲ್ಲಾಹನು ವಾಗ್ದಾನ ಮಾಡಿರುವನು. ಇದರಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಈ ಮುಸ್ಲಿಮರು

ಸತ್ಯವಿಶ್ವಾಸಿಗಳಲ್ಲ ಅಥವಾ ಇದು ಯುದ್ಧದ ಕಾಲವಲ್ಲ. ಧಾರ್ಮಿಕ ಯುದ್ಧ ಮಾಡುವ ಕಾಲ ಕೊನೆಗೊಂಡಿದೆ. ಆದರೆ ನೆನಪಿಡಿರಿ, ಈ ಮುಸ್ಲಿಮರಲ್ಲಿ ಈ ಎರಡು ವಿಷಯಗಳೇ ಇವೆ: ಹಝ್ರತ್ ಪೈಗಂಬರರ(ಸ) ಆಜ್ಞೆಯನ್ನು ಅನುಸರಿಸದೆ ಅವರು ಸತ್ಯವಿಶ್ವಾಸಿಗಳಾಗಲಾರರು. ಮಹ್‌ದೀ ಮಸೀಹ್ ಆಗಮಿಸಿ ವಾದಿಸಿದ ನಂತರ ಅವರ ವಾದವನ್ನು ಅಂಗೀಕರಿಸದ ಕಾರಣ ಈ ಜನರು ಅಲ್ಲಾಹನ ಸಹಾಯಕ್ಕೆ ಹಕ್ಕುದಾರರಾಗಲಾರರು. ಒಟ್ಟಿನಲ್ಲಿ, ಈ ಕಾಲಘಟ್ಟದಲ್ಲಿ ಮಹ್‌ದೀ ಮಸೀಹರ ವಾದ ಮಾಡಿದವರು ನಿಶ್ಚಯವಾಗಿಯೂ ಸತ್ಯವಾದಿ ಆಗಿದ್ದಾರೆ.

## ತಾನು ಅಲ್ಲಾಹನಿಂದ ಕಳುಹಿಸಲ್ಪಟ್ಟವನೆಂದು ಹಝ್ರತ್ ಮಸೀಹ್ ಮೌಊದ್(ಅ) ಪ್ರಮಾಣ ಮಾಡಿ ನೀಡಿದ ಹೇಳಿಕೆ

ಹಝ್ರತ್ ಮಸೀಹ್ ಮೌಊದ್(ಅ) ತನ್ನ ಸತ್ಯತೆಯ ಬಗ್ಗೆ ಬಹಳ ದೊಡ್ಡ ವಾದ ಮಾಡಿದರು. ಯಾವುದೇ ಸುಳ್ಳು ವಾದಿಗೆ ಹಾಗೆ ವಾದಿಸಲು ಸಾಧ್ಯವಿಲ್ಲ. ಅವರು ಹೀಗೆ ಹೇಳಿದರು:

"ನನ್ನ ಜೀವ ಯಾರ ಕೈಯಲ್ಲಿ ಇದೆಯೋ ಆ ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ: ಅವನೇ ನನ್ನನ್ನು ಕಳುಹಿಸಿದನು. ಅವನೇ ನನ್ನ ಹೆಸರು ನಬಿ ಎಂದು ಇರಿಸಿದನು. ಅವನೇ ನನ್ನನ್ನು ಮಸೀಹ್ ಮೌಊದ್ ಎಂಬ ಹೆಸರಿನಿಂದ ಕರೆದನು. ಅವನೇ ನನ್ನ ಸತ್ಯತೆಯನ್ನು ಸ್ಥಾಪಿಸಲು ದೊಡ್ಡ ದೊಡ್ಡ ದೃಷ್ಟಾಂತಗಳನ್ನು ಪ್ರಕಟಿಸಿದನು. ಅವುಗಳ ಸಂಖ್ಯೆ ಮೂರು ಲಕ್ಷಕ್ಕೆ ತಲಪಿದೆ. ಅವುಗಳಲ್ಲಿ ಕೆಲವನ್ನು ಉದಾಹರಣೆ ರೂಪದಲ್ಲಿ ಈ ಪುಸ್ತಕದಲ್ಲಿ ಸಹ ಬರೆಯಲಾಗಿದೆ. ಅಲ್ಲಾಹನ ಅದ್ಭುತ ಕೃತ್ಯಗಳು ಮತ್ತು ಬಹಿರಂಗಗೊಂಡ ದೃಷ್ಟಾಂತಗಳು ಸಾವಿರಾರು ಸಂಖ್ಯೆಯಲ್ಲಿ ನನ್ನ ಸತ್ಯತೆಗೆ ಸಾಕ್ಷ್ಯ ನೀಡದೆ ಇರುತ್ತಿದ್ದರೆ ನಾನು ನನ್ನೊಂದಿಗೆ ಅಲ್ಲಾಹನು ಸಂಭಾಷಣೆ ಮಾಡಿದ ಬಗ್ಗೆ ಯಾರೊಂದಿಗೂ ಹೇಳುತ್ತಿರಲಿಲ್ಲ ಮತ್ತು ನನಗೆ ದೊರೆತ ಸಂದೇಶವಾಣಿಗಳು ಅಲ್ಲಾಹನದ್ದೇ ಎಂದು ಖಂಡಿತವಾಗಿಯೂ ನನಗೆ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲಾಹನು ತನ್ನ ಸಂದೇಶವಾಣಿಗಳಿಗೆ ಬೆಂಬಲವಾಗಿ ತೋರಿಸಿದಂತಹ ಕೃತ್ಯಗಳು ಅವನ ವದನವನ್ನು ತೋರಿಸಲು ಸ್ವಚ್ಛವೂ ಪ್ರಕಾಶಮಾನವೂ ಆಗಿರುವ ಕನ್ನಡಿಯ ಹಾಗೆ ಇತ್ತು."

**(ತತಿಮ್ಮ ಹಖೀಖತುಲ್ ವಹೀ "ರೂಹಾನೀ ಖಝಾಇನ್ – ಭಾಗ 22 ಪುಟ 503)**

ಯಾರು ಅಲ್ಲಾಹನ ಹೆಸರಿನಲ್ಲಿ ವಾದಿಸುತ್ತಾನೋ ಅವನ ವಾದ ಸತ್ಯವಾದುದಾಗಿಲ್ಲವಾದರೆ ಅಂತಹ ವ್ಯಕ್ತಿಯೊಂದಿಗೆ ಅಲ್ಲಾಹನು ಹೇಗೆ ವರ್ತಿಸುತ್ತಾನೆ? ಸುಳ್ಳು ಪ್ರವಾದಿಯ ಬಗ್ಗೆ ಅಲ್ಲಾಹನು ಏನು ಹೇಳುತ್ತಾನೆಂದು ನೋಡಿರಿ:

وَلَوْ تَقَوَّلَ عَلَيْنَا بَعْضَ الْأَقَاوِيلِ ۝ لَأَخَذْنَا مِنْهُ بِالْيَمِينِ

"ಆತನು (ನಾವು ಅವತೀರ್ಣಗೊಳಿಸದ) ಕೆಲವು ಸುಳ್ಳು ಮಾತುಗಳನ್ನು ನಮ್ಮದೆಂದು ಹೇಳಿರುತ್ತಿದ್ದರೆ, ನಾವು ಆತನನ್ನು ಬಲಗೈಯಿಂದ ಹಿಡಿಯುತ್ತಿದ್ದೆವು." (ಪವಿತ್ರ ಖುರ್‌ಆನ್ 69: 45, 46)

ಅನಂತರ ಅಲ್ಲಾಹನು ಹೀಗೆ ಹೇಳು: ثُمَّ لَقَطَعْنَا مِنْهُ الْوَتِينَ

"ಅನಂತರ ನಾವು ಆತನ ಜೀವನಾಡಿಯನ್ನೇ ಕೊಯ್ದು ಬಿಡುತ್ತಿದ್ದೆವು." **(ಪವಿತ್ರ ಖುರ್ಆನ್ 69: 47)**

ಈಗ ಯಾರಾದರೂ ಹೇಳಲಿ – ಹಝ್ರತ್ ಮಸೀಹ್ ಮೌಊದ್(ಅ) ತಾನು ನಬಿಯೆಂದೂ ತನಗೆ ಅಲ್ಲಾಹನ ಎಲ್ಲ ಸಹಾಯಗಳು ಲಭಿಸುತ್ತವೆಯೆಂದೂ ವಾದಿಸಿದಾಗ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರ(ಅ) ಜೀವನಾಡಿಯನ್ನು ಕತ್ತರಿಸಿದನೇ? ಅಥವಾ ಅಲ್ಲಾಹನು, وَكَانَ حَقًّا عَلَيْنَا نَصْرُ الْمُؤْمِنِينَ –"ವಿಶ್ವಾಸಿಗಳಿಗೆ ನೆರವು ನೀಡುವುದು ನಮ್ಮ ಹೊಣೆಗಾರಿಕೆಯಾಗಿದೆ." (ಪವಿತ್ರಖುರ್ಆನ್ 30: 48) ಎಂಬ ತನ್ನ ವಾಗ್ದಾನ ಪ್ರಕಾರ ಸಹಾಯ ನೀಡಿದನೇ ಮತ್ತು ಸಹಾಯ ನೀಡುತ್ತಾ ಇರುವನೇ? ಒಂದು ಧ್ವನಿ ಒಂದು ಚಿಕ್ಕ ಊರಿನಿಂದ ಹೊರಟಿತ್ತು. ಅದು ಇಂದು ಪೂರ್ಣ ವೈಭವದೊಂದಿಗೆ ಲೋಕದ ಮೂಲೆ ಮೂಲೆಗಳಲ್ಲೂ ಹರಡಿದೆ. ಈಗ 181 ದೇಶಗಳಲ್ಲಿ ಜಮಾಅತ್ ಸ್ಥಾಪಿತವಾಗಿದೆ.* ಈಗ ಹಝ್ರತ್ ಮಸೀಹ್ ಮೌಊದ್‌ರನ್ನು(ಅ) ನಂಬುವವರು ಯುರೋಪಿನಲ್ಲೂ ಅಮೇರಿಕದಲ್ಲೂ ಆಫ್ರಿಕದ ದೂರ ದೂರ ಪ್ರದೇಶದ ಕಾಡುಗಳಲ್ಲೂ ಬಿಸಿಲಿನಿಂದ ಬೆಂದ ಮರುಭೂಮಿಗಳಲ್ಲೂ ದ್ವೀಪಗಳಲ್ಲೂ ಇದ್ದಾರೆ. ಏನು, ಈ ಎಲ್ಲ ದೇವ ಸಹಾಯಗಳು ಹಝ್ರತ್ ಮಸೀಹ್ ಮೌಊದ್(ಅ) ಸತ್ಯವಾದಿ ಎಂದು ದೃಢವಾಗಿ ನಂಬಲು ಸಾಕಾಗುವುದಿಲ್ಲವೇ? ಅವರು ಸುಳ್ಳು ವಾದಿಯಾಗಿದ್ದರೆ ಅಲ್ಲಾಹನು ತನ್ನ ನಿಯಮದ ಪ್ರಕಾರ ಅವರನ್ನು ಏಕೆ ಹಿಡಿಗೂಡಲಿಲ್ಲ. ತನಗೆ ದೇವವಾಣಿ ಲಭಿಸಿರುವುದಾಗಿ ಹೇಳಿದುದು ಸುಳ್ಳಾಗಿದ್ದರೆ ಅವರನ್ನು ಏಕೆ ನಾಶಮಾಡಲಿಲ್ಲ? ಆದುದರಿಂದ ಯೋಚಿಸಿರಿ ಮತ್ತು ಗ್ರಹಿಸಿರಿ. ನಾನು ಮುಸ್ಲಿಮರೊಂದಿಗೆ ಕೇಳಲು ಬಯಸುತ್ತೇನೆ– ನೀವು ನಿಮ್ಮ ಇಹಲೋಕವನ್ನೂ ಪರಲೋಕವನ್ನೂ ಏಕೆ ಹಾಳು ಮಾಡುತ್ತಿರುವಿರಿ?

ಒಬ್ಬ ಸುಳ್ಳುವಾದಿಯ ಸ್ಥಿತಿ ಏನಾಯಿತೆಂದು ನೋಡಿರಿ. ಕೆಲವು ದಿನಗಳ ಹಿಂದೆ ಪಾಕಿಸ್ತಾನದಲ್ಲಿ ಒಬ್ಬನು ತಾನು ಮಹ್‌ದೀ ಎಂದು ವಾದಿಸಿದನು. ಪರಸ್ಪರ ಅಲ್ಪ ಸಮಯದ ಫಯರಿಂಗ್ ನಂತರ ಅವನನ್ನು ಸೆರೆಹಿಡಿಯಲಾಯಿತು. ಅವನು ಈಗ ಸೆರೆಮನೆಯಲ್ಲಿದ್ದಾನೆ. ಸುಳ್ಳುವಾದಿಯ ಗತಿ ಏನಾಗುತ್ತದೆ ಎಂದು ಕೂಡಲೇ ತಿಳಿಯಿತು. ಇದರ ಮೊದಲು ಸಹ ಇಂತಹ ಘಟನೆಗಳು ನಡೆದಿವೆ.

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸತ್ಯವಾದಿ ಎಂಬುದರ ಬಗ್ಗೆ ಅಲ್ಲಾಹನ ಸಾಕ್ಷ್ಯಗಳು

ಹಝ್ರತ್ ಮಸೀಹ್ ಮೌಊದ್(ಅ) ಸತ್ಯವಾದಿ ಎಂಬುದಕ್ಕೆ ಅಲ್ಲಾಹನು ತೋರಿಸಿದ ಒಂದು ದೃಷ್ಟಾಂತದ ಬಗ್ಗೆ ನಾನು ಇದರ ಮೊದಲು ಸಹ ಪ್ರಸ್ತಾಪಿಸಿದ್ದೆನು. ಅದೇನೆಂದರೆ, ಸೂರ್ಯ–ಚಂದ್ರ ಗ್ರಹಣಗಳು ಅವರ ಕಾಲದಲ್ಲಿ ಸಂಭವಿಸಿದವು. ಇದು ಮಾನವನ ಯಾವ ಹಸ್ತಕ್ಷೇಪವೂ ಇರದಂತಹ ದೃಷ್ಟಾಂತವಾಗಿದೆ. ಹಝ್ರತ್ ಮುಹಮ್ಮದ್ ರಸೂಲ್(ಸ) 1400 ವರ್ಷಗಳ ಹಿಂದೆ ನಿರ್ದಿಷ್ಟ ರೀತಿಯಲ್ಲಿ ಭವಿಷ್ಯ ನುಡಿದಿದ್ದರು. ವಿಜ್ಞಾನ ಪ್ರಗತಿ ಹೊಂದಿದ ಇಂದಿನ ಕಾಲದಲ್ಲಿ ಕೂಡ ಅಷ್ಟು ದೂರ ಕಾಲದ ಬಗ್ಗೆ ಮಾತ್ರವಲ್ಲ, ಸಮೀಪ ಕಾಲದ ಬಗ್ಗೆ ಸಹ ಭವಿಷ್ಯ ನುಡಿಯಲು ಸಾಧ್ಯವಿಲ್ಲ. ರಮಝಾನ್ ತಿಂಗಳಲ್ಲಿ ಇಂತಹ ದಿನಾಂಕ ಚಂದ್ರ ಗ್ರಹಣ ಮತ್ತು ಇಂತಹ ದಿನಾಂಕ ಸೂರ್ಯ ಗ್ರಹಣ ಆಗುವುದೆಂದು

* ಇದು 2006ರಲ್ಲಿ ಹೇಳಿದುದಾಗಿದೆ. ಈಗ 2014ರಲ್ಲಿ 207 ದೇಶಗಳಲ್ಲಿ ಜಮಾಅತ್ ಸ್ಥಾಪಿತವಾಗಿದೆ.

ಹಝ್ರತ್ ಪೈಗಂಬರರು[ಸ] ಹೇಳಿದರು. ಹದೀಸಿನಲ್ಲಿ ಹೀಗೆ ವರದಿಯಾಗಿದೆ: "**ಇನ್ನ ಲಿಮಹ್‌ದೀನಾ ಆಯತೈನಿ ಲಮ್ ತಕೂನಾ ಮುಂಧು ಖ಼ಲ್‌ಖಿಸ್ಸಮಾವಾತಿ ವಲ್‌ಅರ್‌ಝಿ ತನ್‌ಕಸಿಫುಲ್ ಖಮರು ಲಿಅವ್ವಲಿ ಲೈಲತಿನ್ ಮಿನ್ ರಮಝಾನ ವತನ್‌ಕಸಿಫುಶ್ಶಮ್‌ಸು ಫಿನ್ನಿಸ್‌ಫಿ ಮಿನ್‌ಹು.**" – "ನಮ್ಮ ಮಹ್‌ದಿಯ ಸತ್ಯತೆಗೆ ಎರಡು ಚಿಹ್ನೆಗಳಿವೆ. ಈ ಚಿಹ್ನೆ ಯಾರ ಪರವಾಗಿಯೂ ಭೂಮ್ಯಾಕಾಶಗಳ ಸೃಷ್ಟಿಯ ನಂತರ ಎಂದೂ ಪ್ರಕಟವಾಗಲಿಲ್ಲ. ರಮಝಾನ್ ತಿಂಗಳಲ್ಲಿ ಚಂದ್ರ ಗ್ರಹಣದ ರಾತ್ರಿಗಳಲ್ಲಿ ಮೊದಲನೆಯ ರಾತ್ರಿ ಚಂದ್ರನಿಗೆ ಮತ್ತು ಸೂರ್ಯ ಗ್ರಹಣದ ದಿನಗಳಲ್ಲಿ ಮಧ್ಯದ ದಿನ ಸೂರ್ಯನಿಗೆ ಗ್ರಹಣವಾಗುವುದು."

**(ಸುನನ್ ದಾರುಖುತ್‌ನೀ)**

ಈ ಗ್ರಹಣಗಳು 1894ರಲ್ಲಿ ಸಂಭವಿಸಿದುವು. ಚಂದ್ರ ಗ್ರಹಣದ ದಿನಾಂಕಗಳಾದ 13,14,15ರಲ್ಲಿ 13ನೇ ದಿನಾಂಕ ಚಂದ್ರನಿಗೂ ಸೂರ್ಯ ಗ್ರಹಣದ ದಿನಾಂಕಗಳಾದ 27,28,29ರಲ್ಲಿ 28ನೇ ದಿನಾಂಕ ಸೂರ್ಯನಿಗೂ ಗ್ರಹಣವಾಯಿತು. ಈ ದೃಷ್ಟಾಂತಗಳು ಹಝ್ರತ್ ಮಸೀಹ್ ಮೌಊದ್‌ರ[ಅ] ಸತ್ಯತೆ ಬಗ್ಗೆ ಬಹಳ ಸ್ಪಷ್ಟವಾದ ಸಾಕ್ಷ್ಯಾಧಾರ ಆಗಿದೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು: "ಈ ಗ್ರಹಣಗಳು ಸಂಭವಿಸುವಾಗ ನನ್ನ ಹೊರತು ಬೇರೆ ಯಾರ ವಾದವೂ ಇರಲಿಲ್ಲ." ಕೆಲವು ಮೌಲವಿಗಳು **ಖಮರ್** ಪದದ ಬಗ್ಗೆ ವಾಗ್ವಾದ ಮಾಡುತ್ತಾರೆ. ಕೆಲವರ ಅಭಿಪ್ರಾಯ ಪ್ರಕಾರ ಎರಡನೆಯ ರಾತ್ರಿಯ ನಂತರದ ಚಂದ್ರ **ಖಮರ್** ಎಂದು ಕರೆಯಲ್ಪಡುತ್ತದೆ. ಬೇರೆ ಕೆಲವರು ಮೂರನೆಯ ರಾತ್ರಿಯ ನಂತರದ ಚಂದ್ರ **ಖಮರ್** ಎಂದು ಕರೆಯಲ್ಪಡುತ್ತದೆ ಎಂದು ಹೇಳುತ್ತಾರೆ. ಈ ಗ್ರಹಣಗಳು ಸಂಭವಿಸುವಾಗ ಹಝ್ರತ್ ಮಸೀಹ್ ಮೌಊದ್‌ರ[ಅ] ಹೊರತು ಬೇರೆ ಯಾರದಾದರೂ ವಾದವಿತ್ತೇ? ವಾಸ್ತವಿಕವಾಗಿ ಆಗ ಮಹ್‌ದೀ ವಾದ ಮಾಡುತ್ತಿದ್ದುದು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಮಾತ್ರ. ಹಝ್ರತ್ ಮಸೀಹ್ ಮೌಊದ್[ಅ] ಸ್ಪಷ್ಟವಾಗಿ ಹೇಳಿದರು: "ಅನೇಕ ಚಿಹ್ನೆಗಳು ಕಾಣಿಸಿವೆ. ನಾನು ಹೊರತು ಬೇರೆ ಯಾರಾದರೂ ಆಗಮಿಸಿದ್ದರೆ ತೋರಿಸಿ ಕೊಡಿರಿ. ಏಕೆಂದರೆ ಈ ಕಾಲವು ಒಬ್ಬ ಸತ್ಯವಾದಿಯ ಆಗಮನವನ್ನು ಆವಶ್ಯಪಡುತ್ತದೆ." ಆ ಜನರಿಗೆ ಬೇರೆ ಯಾರನ್ನಾದರೂ ತೋರಿಸಲು ಸಾಧ್ಯವಾಗಲಿಲ್ಲ. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೇ ಸತ್ಯವಂತರಾಗಿದ್ದಾರೆ. ಏಕೆಂದರೆ ಭೂಮಿಯ ಮತ್ತು ಆಕಾಶದ ಸಾಕ್ಷ್ಯಗಳು ಅವರ ಪರವಾಗಿವೆ. ಅಲ್ಲಾಹನು ವಿವರಿಸಿದ ನುಬುವ್ವತ್‌ನ ಮಾನದಂಡವು ಅವರನ್ನು ಬೆಂಬಲಿಸುತ್ತಿದೆ. ಕೆಲವು ಜನರು ಹಝ್ರತ್ ಮಸೀಹ್ ಮೌಊದ್[ಅ] ಪರಿಶುದ್ಧ ವ್ಯಕ್ತಿತ್ವ ಹೊಂದಿದ್ದರೆಂದು ಹಿಂದೆಯೂ ಸಾಕ್ಷ್ಯ ನುಡಿದಿದ್ದರು. ಅವರ ಗತಕಾಲದ ಜೀವಿತ ಪರಿಶುದ್ಧವಾಗಿತ್ತು. ಅವರ ಯೌವ್ವನ ಕಾಲ ಪರಿಶುದ್ಧವಾಗಿತ್ತು. ಅವರು ಜ್ಞಾನಸಂಪನ್ನರಾಗಿದ್ದರು. ಅವರಿಗಿಂತ ಹೆಚ್ಚಿನ ಮಟ್ಟದಲ್ಲಿ ಇಸ್ಲಾಮ್ ಧರ್ಮಕ್ಕೆ ಸೇವೆ ಬೇರೆ ಯಾರೂ ಸಲ್ಲಿಸಿರಲಿಲ್ಲ. ಅಹ್ಮದಿಯೇತರರೂ ಇದನ್ನು ಅಂಗೀಕರಿಸಿರುವರು. ಎಲ್ಲವನ್ನು ನೋಡಿದ ನಂತರ ಕೂಡ ಯಾರದಾದರೂ ಬುದ್ಧಿಯ ಮೇಲೆ ಪರದೆ ಬಿದ್ದಿದ್ದರೆ ಅಲ್ಲಾಹನೇ ಅವರನ್ನು ರಕ್ಷಿಸಬೇಕು. ಏಕೆಂದರೆ ಯಾರಿಗಾದರೂ ನಂಬುವ ಭಾಗ್ಯ ಅಲ್ಲಾಹನ ಅನುಗ್ರಹದಿಂದಲೇ ಲಭಿಸುತ್ತದೆ. ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳುತ್ತಾರೆ:

"ನಾನು ಸತ್ಯವಂತನಲ್ಲವಾದರೆ ಈ ಹದಿನಾಲ್ಕನೆಯ ಶತಮಾನದಲ್ಲಿ ನಾನು ಹೊರತು ಬೇರೆ ಯಾರು ಮುಜದ್ದಿದ್ ಎಂದು ವಾದಿಸಿದ್ದಾರೆ? ತನಗೆ ಅಲ್ಲಾಹನಿಂದ ಇಲ್‌ಹಾಮ್ ದೊರೆಯುತ್ತಿದೆ ಎಂದು ವಾದಿಸುವವರು ನಾನು ಹೊರತು ಬೇರೆ ಯಾರಾದರೂ ಇದ್ದಾರೆಯೇ? **ತಫಕ್ಕರೂವ ತನದ್ದಮೂ ವತ್ತಖುಲ್ಲಾಹ ವಲಾ ತಗ್‌ಲೂ** – ಚಿಂತಿಸಿರಿ, ಸ್ವಲ್ಪ ಲಜ್ಜೆ ತೋರಿಸಿರಿ. ಅಲ್ಲಾಹನಿಗೆ ಭಯಪಡಿರಿ. ನೀವು ನಾಚಿಕೆಗೇಡಿನಿಂದ ವರ್ತಿಸಬೇಡಿರಿ.

"ಮಸೀಹ್ ಮೌಊದ್ ನಾನಾಗಿದ್ದೇನೆ ಎಂದು ವಾದಿಸಿ ನಾನು ತಪ್ಪು ಮಾಡಿದ್ದೇನೆ ಎಂದು ನೀವು ಭಾವಿಸುವುದಾದರೆ, ನೀವು ನಿಮ್ಮ ಯೋಚನೆ ಪ್ರಕಾರ ಬರಲಿರುವ ವಾಗ್ದತ್ತ ಮಸೀಹರನ್ನು ಆಕಾಶದಿಂದ ಇಳಿಸಲು ಪ್ರಯತ್ನಿಸಿರಿ. ಏಕೆಂದರೆ ನಾನು ನಿಮ್ಮ ಮುಂದೆ ವಾಗ್ದತ್ತ ಮಸೀಹಾಗಿ ಉಪಸ್ಥಿತನಿದ್ದೇನೆ. ಆದರೆ ನೀವು ಯಾರ ಬರುವಿಕೆಯನ್ನು ನಿರೀಕ್ಷಿಸುತ್ತಾ ಇದ್ದೀರೋ ಅವರು ಇಲ್ಲಿ ಈಗ ಉಪಸ್ಥಿತರಿಲ್ಲ. ನೀವು ಅವರನ್ನು ಆಕಾಶದಿಂದ ಇಳಿಸಿ ತಂದರೆ ಮಾತ್ರ ನಾನು ನಿಮ್ಮ ಆರೋಪಗಳಿಗೆ ಈಡಾಗುವೆನು." (ಆಗ ಹಝ್ರತ್ ಮಸೀಹ್ ಮೌಊದ್[ಅ] ಎಲ್ಲರಿಗೂ ಪಂಥಾಹ್ವಾನ ನೀಡಿದರು:) "ನೀವು ಹೇಳುವುದು ಸತ್ಯವಾದರೆ ನೀವೆಲ್ಲರೂ ಸೇರಿ ಪ್ರಾರ್ಥಿಸಿರಿ. ಮಸೀಹಿಬ್ನು ಮರ್‌ಯಮ್ ಆಕಾಶದಿಂದ ಇಳಿದು ಬರುವುದು ಕಾಣುವಂತಾಗಲಿ. ನೀವು ಸತ್ಯವಂತರಾದರೆ ನಿಮ್ಮ ಈ ಪ್ರಾರ್ಥನೆ ಅಂಗೀಕರಿಸಲ್ಪಡುವುದು. ಏಕೆಂದರೆ ಸತ್ಯವಂತರು ಸುಳ್ಳು ಜನರ ವಿರುದ್ಧ ಪ್ರಾರ್ಥಿಸುವಾಗ ಸತ್ಯವಂತರ ಪ್ರಾರ್ಥನೆ ಅಲ್ಲಾಹನಿಂದ ಅಂಗೀಕರಿಸಲ್ಪಡುವುದು.

"ಆದರೆ ನೀವು ತಿಳಿದುಕೊಳ್ಳಿರಿ. ನಿಮ್ಮ ಈ ಪ್ರಾರ್ಥನೆ ಖಂಡಿತವಾಗಿ ಎಂದೂ ಸ್ವೀಕರಿಸಲ್ಪಡಲಾರದು. ಏಕೆಂದರೆ ನೀವು ತಪ್ಪು ಮಾಡಿತ್ತಿರುವಿರಿ. ವಾಗ್ದತ್ತ ಮಸೀಹ್ ಆಗಮಿಸಿಯಾಗಿದೆ. ಆದರೆ ನೀವು ಅವರನ್ನು ಗುರುತಿಸಿಲ್ಲ. ನಿಮ್ಮ ಊಹಾತ್ಮಕ ಪ್ರತೀಕ್ಷೆ ಎಂದೂ ಈಡೇರದು. ಈ ಕಾಲವು ದಾಟಿಹೋಗುವುದು. ಮಸೀಹರನ್ನು ಆಕಾಶದಿಂದ ಇಳಿದು ಬರುವುದಾಗಿ ಯಾರೂ ಕಾಣಲಾರರು."

**(ಇಝಾಲಃ ಔಹಾಮ್ ಭಾಗ: 1 ರೂಹಾನೀ ಖಝಾಇನ್, ಸಂಪುಟ 3 – ಪುಟ 179)**

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಇದೇ ಕಾರಣದಿಂದ ನಾನು ಹೇಳುತ್ತೇನೆ – ಈ ಜನರು ಧರ್ಮ ಮತ್ತು ಸತ್ಯದ ಶತ್ರುಗಳಾಗಿದ್ದಾರೆ. ಈಗ ಸಹ ಅವರಲ್ಲಿ ಯಾರಾದರೂ ತಮ್ಮ ಹೃದಯಗಳನ್ನು ಸರಿಪಡಿಸಿ ನನ್ನ ಸಮೀಪಕ್ಕೆ ಬರುವುದಾದರೆ ನಾನು ಅವರ ನಿರರ್ಥಕ ಅವಿವೇಕಭರಿತ ಸಂಶಯಗಳನ್ನು ನಿವಾರಿಸಲು ಸಿದ್ಧನಾಗಿದ್ದೇನೆ. ಅಲ್ಲಾಹನು ಹೇಗೆ ಒಂದು ದೊಡ್ಡ ಸೈನ್ಯದ ಹಾಗೆ ನನಗೆ ಸಾಕ್ಷ್ಯವಾಗಿ ಭವಿಷ್ಯವಾಣಿಗಳನ್ನು ಒದಗಿಸಿದ್ದಾನೆಂದೂ ಅವುಗಳ ಸತ್ಯ ಹಗಲು ಬೆಳಕಿನಂತೆ ಹೇಗೆ ಸ್ಪಷ್ಟವಾಗಿ ಪ್ರಕಟವಾಗಿವೆಯೆಂದೂ ನಾನು ತೋರಿಸಿಕೊಡುವೆನು."

## ಹಝ್ರತ್ ಮಸೀಹ್ ಮೌಊದರ(ಅ) ಬಗ್ಗೆ ಪ್ರೀತಿಯನ್ನು ಜನರ ಹೃದಯಗಳಲ್ಲಿ ಸ್ಥಾಪಿಸುವನೆಂದೂ ಎಲ್ಲ ಪಂಗಡಗಳ ಮೇಲೆ ಅವರ ಜಮಾಅತನ್ನು ಜಯಶಾಲಿಯನ್ನಾಗಿ ಮಾಡುವನೆಂದೂ ಅಲ್ಲಾಹನು ವಾಗ್ದಾನ ಮಾಡಿರುವನು

ಹಝ್ರತ್ ಮಸೀಹ್ ಮೌಊದ್(ಅ) ಜನರಿಗೆ ನೀಡಿದ ಆಮಂತ್ರಣ ನೂರು ವರ್ಷಗಳ ನಂತರ ಸಹ ಈಗಲೂ ಜಾರಿಯಲ್ಲಿದೆ. ಜನರು ತಮ್ಮ ಹೃದಯಗಳನ್ನು ಸರಿಪಡಿಸಿ ಆಗಮಿಸಿದರೆ ಅವರು ಸತ್ಯವನ್ನು ಗಳಿಸುವರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಈ ಅವಿವೇಕಿಗಳಾದ ಮೌಲವಿಗಳು ತಮ್ಮ ಕಣ್ಣುಗಳನ್ನು ಉದ್ದೇಶಪೂರ್ವಕವಾಗಿ ಮುಚ್ಚುವುದಾದರೆ ಮುಚ್ಚಲಿ. ಸತ್ಯಕ್ಕೆ ಅವರಿಂದ ಉಂಟಾಗುವ ಹಾನಿಯಾದರೂ ಏನು? ಒಂದು ಕಾಲ ಬರಲಿದೆ. ಅದು ಸಮೀಪವಾಗಿಯೇ ಇದೆ. ಫಿರ್ಔನನ ಗುಣಗಳನ್ನು ಹೊಂದಿದ ಅನೇಕ ಜನರು ಆ ಭವಿಷ್ಯವಾಣಿಗಳ ಬಗ್ಗೆ ಚಿಂತಿಸುವ ಕಾರಣ ಮುಳುಗುವುದರಿಂದ ರಕ್ಷಿಸಲ್ಪಡುವರು. ಅಲ್ಲಾಹನು ಹೇಳುತ್ತಾನೆ: ನಾನು ದಾಳಿಯ ಮೇಲೆ ದಾಳಿ ಮಾಡುವೆನು. ಎಲ್ಲಿಯವರೆಗೆ ಎಂದರೆ ನಿನ್ನ ಸತ್ಯವನ್ನು ಜನರ ಹೃದಯಗಳಲ್ಲಿ ಸ್ಥಾಪಿಸುವೆನು. ಓ ಮೌಲವಿಗಳೇ, ನಿಮಗೆ ಅಲ್ಲಾಹನೊಂದಿಗೆ ಯುದ್ಧ ಮಾಡುವ ಶಕ್ತಿ ಇದ್ದರೆ ಯುದ್ಧ ಮಾಡಿರಿ. ನನಗಿಂತ ಹಿಂದೆ ಮರ್ಯಮ್ ಪುತ್ರನಾದ ಒಬ್ಬ ಬಡ ಮನುಷ್ಯನನ್ನು ಯಹೂದಿಯರು ಹೇಗೆಲ್ಲ ಹಿಂಸಿಸಿದರು! ಅವರು ತಮ್ಮ ಗುಮಾನಿ ಪ್ರಕಾರ ಅವರನ್ನು ಶಿಲುಬೆಗೇರಿಸಿದರು. ಆದರೆ ಅಲ್ಲಾಹನು ಅವರನ್ನು ಶಿಲುಬೆ ಮೇಲೆ ಮೃತನಾಗುವುದರಿಂದ ರಕ್ಷಿಸಿದನು. ಆ ಕಾಲದಲ್ಲಿ ಅವರನ್ನು ಯಹೂದಿಯರು ಮೋಸಗಾರನೆಂದೂ ಸುಳ್ಳುವಾದಿಯೆಂದೂ ಗಣಿಸುತ್ತಿದ್ದರು. ಅಂತಹ ವ್ಯಕ್ತಿ ಎಂತಹ ಗೌರವ ಗಳಿಸಿದರೆಂದರೆ, ನಲ್ವತ್ತು ಕೋಟಿ ಜನರು ಅವರನ್ನು ತಮ್ಮ ದೇವನೆಂದು ನಂಬುತ್ತಾರೆ. ಈ ಜನರು ತಪ್ಪು ವಿಶ್ವಾಸವನ್ನವಲಂಬಿಸಿದರೂ ಅದು ಯಹೂದಿಯರಿಗೆ ನೀಡಲ್ಪಟ್ಟ ಉತ್ತರವಾಗಿದೆ. ಯಾವ ವ್ಯಕ್ತಿಯನ್ನು ಸುಳ್ಳುವಾದಿ ಎಂದು ಪರಿಗಣಿಸಿ ಯಹೂದಿಯರು ತಮ್ಮ ಪಾದಗಳಿಂದ ತುಳಿದು ಹಾಕಲು ಬಯಸಿದರೋ ಆ ಮರ್ಯಮ್ ಪುತ್ರ ಯೇಸು ಎಂತಹ ಭವ್ಯ ಸ್ಥಾನಕ್ಕೆ ತಲಪಿದರೆಂದರೆ ಈಗ ನಲ್ವತ್ತು ಕೋಟಿ ಜನರು ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದಾರೆ. ದೊರೆಗಳ ಕೊರಳುಗಳು ಅವರ ನಾಮದೆದುರಿಗೆ ಬಾಗುತ್ತವೆ.

"ಆದ್ದರಿಂದ ಮರ್ಯಮ್ ಪುತ್ರ ಯೇಸುವಿನ ಹಾಗೆ ನಾನು ಬಹುದೇವಾರಾಧನೆಯ ವರ್ಧನೆಗೆ ಕಾರಣವಾಗಬಾರದೆಂದು ನಾನು ಪ್ರಾರ್ಥಿಸಿದ್ದೇನೆ. ಅಲ್ಲಾಹನು ಹೀಗೆಯೇ ಮಾಡುವನೆಂದು ನಾನು ದೃಢವಾಗಿ ನಂಬುತ್ತೇನೆ. ಅಲ್ಲಾಹನು ನನಗೆ ಪದೇ ಪದೇ ಹೀಗೆ ತಿಳಿಸಿದ್ದಾನೆ: ಅವನು ನನಗೆ ಬಹಳ ವೈಭವ ನೀಡುವನು, ಅವನು ನನ್ನ ಬಗ್ಗೆ ಪ್ರೀತಿಯನ್ನು ಜನರ ಹೃದಯಗಳಲ್ಲಿ ಸ್ಥಾಪಿಸುವನು, ನನ್ನ ಜಮಾಅತನ್ನು ಭೂಮಿಯಲ್ಲಿ ಎಲ್ಲ ಕಡೆ ಹರಡುವನು, ಎಲ್ಲ ಪಂಗಡಗಳ ಮೇಲೆ ನನ್ನ ಜಮಾಅತನ್ನು ಜಯಶಾಲಿಯನ್ನಾಗಿ ಮಾಡುವನು, ನನ್ನ ಜಮಾಅತಿನ ಜನರು ಜ್ಞಾನದಲ್ಲಿ ಎಷ್ಟು ನೈಪುಣ್ಯ ಗಳಿಸುವರೆಂದರೆ, ಅವರು ತಮ್ಮ ಸತ್ಯದ ಪ್ರಕಾಶ, ಸಾಕ್ಷ್ಯಾಧಾರಗಳ ಮತ್ತು ದೃಷ್ಟಾಂತಗಳ ಮೂಲಕ ಎಲ್ಲ ಜನರನ್ನು ನಿರುತ್ತರರನ್ನಾಗಿ ಮಾಡುವರು." (ಅಲ್ಲಾಹನ ಅನುಗ್ರಹದಿಂದ ಪ್ರತಿಯೊಂದು

ದೇಶದಲ್ಲಿ ಈ ಸತ್ಯ ಪ್ರಕಟವಾಗುತ್ತಾ ಇದೆ. ಅದು ಹೀಗೆಯೇ ಮುಂದುವರಿಯುವುದು.) "ಪ್ರತಿಯೊಂದು ಜನಾಂಗ ಈ ನೀರಝುರಿಯಿಂದ ನೀರನ್ನು ಕುಡಿಯುವುದು. ಈ ಜಮಾಅತ್ ವೇಗವಾಗಿ ಬೆಳೆಯುವುದು, ವಿಶಾಲವಾಗಿ ಹರಡುವುದು ಮತ್ತು ಭೂಮಿಯನ್ನು ಆವರಿಸುವುದು. ಅನೇಕ ಅಡ್ಡಿ ಆತಂಕಗಳು ಉಂಟಾಗುವುವು. ಪರೀಕ್ಷೆಗಳು ಬರುವುವು. ಆದರೆ ಅಲ್ಲಾಹನು ಎಲ್ಲ ಅಡ್ಡಿ ಆತಂಕಗಳನ್ನು ನಿವಾರಿಸುವನು. ಅವನು ತನ್ನ ವಾಗ್ದಾನ ಈಡೇರಿಸುವನು. ಅಲ್ಲಾಹನು ನನ್ನನ್ನು ಸಂಬೋಧನೆ ಮಾಡಿ ಹೇಳಿರುವನು: "ನಾನು ನಿನಗೆ ಅನುಗ್ರಹಗಳ ಮೇಲೆ ಅನುಗ್ರಹ ನೀಡುವೆನು. ಎಷ್ಟರ ಮಟ್ಟಿಗೆಂದರೆ ದೊರೆಗಳು ನಿನ್ನ ಬಟ್ಟೆಗಳಿಂದ ಅನುಗ್ರಹವನ್ನು ಹುಡುಕುವರು."

"ಆದುದರಿಂದ, ಓ ಆಲಿಸುವ ಜನರೇ, ನೀವು ಈ ಮಾತುಗಳನ್ನು ನೆನಪಿನಲ್ಲಿಡಿರಿ. ಈ ಭವಿಷ್ಯವಾಣಿಗಳನ್ನು ಪೆಟ್ಟಿಗೆಗಳಲ್ಲಿ ಭದ್ರವಾಗಿ ಇರಿಸಿರಿ. ಇದು ದೇವವಚನವಾಗಿದ್ದು ಮುಂದೆ ಈಡೇರುವುದಾಗಿದೆ. ನಾನು ನನ್ನಲ್ಲಿ ಯಾವುದೇ ಒಳಿತನ್ನು ಕಾಣುವುದಿಲ್ಲ. ನಾನು ಮಾಡಬೇಕಾಗಿದ್ದ ಕೆಲಸವನ್ನು ಮಾಡಲಿಲ್ಲ. ನಾನು ನನ್ನನ್ನು ಒಬ್ಬ ಅಯೋಗ್ಯ ಕಾರ್ಮಿಕನ ಹಾಗೆ ಭಾವಿಸುತ್ತೇನೆ. ನನಗೆ ದೊರೆತದ್ದು ಅಲ್ಲಾಹನ ಅನುಗ್ರಹವಾಗಿದೆ. ಸರ್ವಶಕ್ತನೂ ಕೃಪಾಮಯನೂ ಆಗಿರುವ ಅಲ್ಲಾಹನಿಗೆ ಸಾವಿರ ಸಾವಿರ ಬಾರಿ ನಾನು ಕೃತಜ್ಞತೆ ಅರ್ಪಿಸುತ್ತೇನೆ. ಅವನು ಈ ಮುಷ್ಟಿ ಮಣ್ಣನ್ನು, ಅದು ಇಷ್ಟೆಲ್ಲಾ ಅಯೋಗ್ಯತೆ ಹೊಂದಿದ್ದರೂ ಸ್ವೀಕರಿಸಿದನು."

**(ತಜಲ್ಲಿಯಾತೆ ಇಲಾಹಿಯ್ಯಃ – ರೂಹಾನೀ ಖಝಾಇನ್ – ಸಂಪುಟ 20, ಪುಟ 408–410)**

ಒಟ್ಟಿನಲ್ಲಿ, ಹಝ್‌ರತ್ ಮಸೀಹ್ ಮೌಊದ್[ಅ] ನುಡಿದ ಈ ಭವಿಷ್ಯವಾಣಿಗಳು ಈಡೇರುತ್ತಾ ಇರುವುದನ್ನು ನಾವು ಪ್ರತಿದಿನ ಕಾಣುತ್ತಾ ಇದ್ದೇವೆ. ಪ್ರತಿಯೊಂದು ಧರ್ಮದವರೂ ಜನಾಂಗದವರೂ ಇದರ ಬಗ್ಗೆ ಚಿಂತಿಸಬೇಕು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಲ್ಲಾಹನು ಮಾಡಿದ ವಾಗ್ದಾನ ಪ್ರಕಾರ ಅವರ ಜಮಾಅತ್ ಅಭಿವೃದ್ಧಿ ಹೊಂದುತ್ತಾ ಮುಂದೆ ಸಾಗುತ್ತಿದೆ. ನಾನು ಹೇಳಿದ ಹಾಗೆ ಪ್ರತಿದಿನ ನಾವು ಅಭಿವೃದ್ಧಿಯನ್ನು ಕಾಣುತ್ತಿದ್ದೇವೆ. ಆದುದರಿಂದ ಅಹ್ಮದಿಯೇತರರಾದ ಮುಸ್ಲಿಮರು ಸಹ ಯೋಚಿಸಬೇಕು. ಆಗಮಿಸಬೇಕಾದ ವಾಗ್ದತ್ತ ಮಹ್‌ದೀ ಮಸೀಹ್ ಆಗಮಿಸಿ ಆಗಿದೆ. ಅವರ ವಾದವು ಸತ್ಯವೆಂಬುದಕ್ಕೆ ಪವಿತ್ರ ಖುರ್‌ಆನ್ ಮತ್ತು ಹದೀಸುಗಳಲ್ಲಿ ಅನೇಕ ಸಾಕ್ಷ್ಯಾಧಾರಗಳಿವೆ. ಪವಿತ್ರ ಖುರ್‌ಆನಿನಿಂದಲೂ ಹದೀಸುಗಳಿಂದಲೂ ಸಾಕ್ಷ್ಯಾಧಾರಗಳು ಸಿಗುತ್ತವೆ. ಅವುಗಳಲ್ಲಿ ಒಂದೆರಡನ್ನು ಮಾತ್ರ ನಾನು ವಿವರಿಸಿರುವೆನು. ಈ ಕಾಲಘಟ್ಟದ ಪರಿಸ್ಥಿತಿ ಸಹ ಮಹ್‌ದೀ ಮಸೀಹರನ್ನು ಕರೆಯುತ್ತಿದೆ. ಓ ಜನರೇ, ನೀವು ಯಾರ ಪ್ರತೀಕ್ಷೆ ಮಾಡುತ್ತಿರುವಿರಿ? ನೀವು ಸ್ವಲ್ಪವಾದರೂ ಯೋಚಿಸಿರಿ. ಕ್ರೈಸ್ತ ಧರ್ಮದವರಿಗೆ ಯಾವ ಮಸೀಹ್ ಬರಬೇಕಿತ್ತೋ ಅವರು ಆಗಮಿಸಿದರು. ಎಲ್ಲ ಧರ್ಮಗಳ ಜನರನ್ನು ಒಂದುಗೂಡಿಸುವುದಕ್ಕಾಗಿ ಯಾರು ಆಗಮಿಸಬೇಕಾಗಿತ್ತೋ ಅವರು ಬಂದಿರುವರು. ಒಬ್ಬರಿನ್ನೊಬ್ಬರ ಭಾವನೆಗಳನ್ನು ಗೌರವಿಸಲು ಯಾರಾದರೂ ಕಲಿಸಬಹುದಾದರೆ ಅದನ್ನು ಇದೇ ಮಹ್‌ದೀ ಮಸೀಹ್ ಕಲಿಸಬಲ್ಲರು. ಎಲ್ಲ ಧರ್ಮಗಳ ಪ್ರವಾದಿಗಳನ್ನು ಗೌರವಿಸಲು ಕಲಿಸುವವರೂ ಈ ಮಹ್‌ದೀ ಮಸೀಹರೇ ಆಗಿದ್ದಾರೆ. ಈಗ ಲೋಕದಲ್ಲಿ ಶಾಂತಿ ಮತ್ತು ಪ್ರೀತಿ ಹರಡುವವರು ಈ ಮಹ್‌ದೀ ಮಸೀಹರೇ ಆಗಿದ್ದಾರೆ. ಮಾನವರನ್ನು ದುಃಖದಿಂದಲೂ ಕಷ್ಟದಿಂದಲೂ

ರಕ್ಷಿಸಬಲ್ಲವರು ಇದೇ ಮಹ್‌ದೀ ಮಸೀಹರಾಗಿದ್ದಾರೆ. ಅಲ್ಲಾಹನ ಕಡೆಗೆ ಹೋಗಲಿಕ್ಕಿರುವ ಮಾರ್ಗ ತೋರಿಸಿ ಕೊಡುವವರು, ದಾಸರಿಗೆ ಅಲ್ಲಾಹನ ಮುಂದೆ ಬಾಗುವ ರೀತಿಯನ್ನು ಕಲಿಸುವವರು ಇದೇ ಮಹ್‌ದೀ ಮಸೀಹರಾಗಿದ್ದಾರೆ. ಲೋಕದ ಜನರು ಇವೆಲ್ಲವನ್ನು ಹೊಂದಲು ಬಯಸುವುದಾದರೆ, ಎಲ್ಲ ಪ್ರವಾದಿಗಳ ಭವಿಷ್ಯವಾಣಿಗಳ ಪ್ರಕಾರ ಆಗಮಿಸಿದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಈ ಸತ್ಯಸಂಧನಾದ ಪ್ರೇಮಿಯಾಗಿರುವ ಈ ಮಹ್‌ದೀ ಮಸೀಹರ ಉಪದೇಶಗಳ ಪ್ರಕಾರ ವರ್ತಿಸುವವರಾಗಿರಿ. ಹಾಗೆ ಮಾಡದಿದ್ದರೆ ಅಲ್ಲಾಹನ ಕೋಪದ ಜ್ವಾಲೆಯ ನೆರಳು ನಮ್ಮ ಮುಂದೆ ಕಾಣಿಸುತ್ತಿದೆ. ಅದರ ಬಗ್ಗೆ ಅಲ್ಲಾಹನಿಂದ ಸಂದೇಶ ಗಳಿಸಿ ನಮಗೆ ಹಝ್ರತ್ ಮಸೀಹ್ ಮೌಊದ್[ಅ] ತಿಳಿಸಿರುವರು. ಪ್ರತಿಯೊಬ್ಬ ಅಹ್ಮದಿ ತನ್ನನ್ನು ಸುಧಾರಣೆ ಮಾಡಲು ಶ್ರದ್ಧೆವಹಿಸಬೇಕು. ಅದರೊಂದಿಗೆ ಲೋಕಕ್ಕೆ ಈ ಎಚ್ಚರಿಕೆ ಬಗ್ಗೆ ತಿಳಿಸಬೇಕು. ಅಲ್ಲಾಹನು ಲೌಕಿಕ ಆಸಕ್ತರ ಮೇಲೆ ದಯೆದೋರಲಿ. ಅವರು ಸತ್ಯವನ್ನು ಮನವರಿಕೆ ಮಾಡುವ ಭಾಗ್ಯ ನೀಡಲಿ.

❖❖❖❖❖❖❖

# ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯದ ಹೆಸರಿನಲ್ಲಿ ಮುಸ್ಲಿಮರ ಭಾವನೆಗಳಿಗೆ ನೋವುಂಟು ಮಾಡಲು ಕೆಲವು ಪಾಶ್ಚಾತ್ಯ ದೇಶಗಳು ಮತ್ತು ಪತ್ರಿಕೆಗಳ ದೌರ್ಜನ್ಯಕರ ವರ್ತನೆ

## ಜುಮುಅ ಖುತ್‌ಬ 24–2–2006

ತಶಹ್ಹುದ್, ತಅವ್ವುದ್, ಸೂರತುಲ್ ಫಾತಿಹ ಪಠಿಸಿದ ನಂತರ ಹುಝೂರ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಪಾರಾಯಣ ಮಾಡಿದರು:

إِنَّ اللَّهَ وَمَلَائِكَتَهُ يُصَلُّونَ عَلَى النَّبِيِّ يَا أَيُّهَا الَّذِينَ آمَنُوا صَلُّوا عَلَيْهِ وَسَلِّمُوا تَسْلِيمًا

"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ." (33: 57).

ಕಳೆದ ಕೆಲವು ವಾರಗಳಲ್ಲಿ ನಡೆದ ಘಟನೆಗಳು, ಅಂದರೆ ಪತ್ರಿಕೆಗಳ ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಮನಸ್ಸಾಕ್ಷಿಯ ಸ್ವಾತಂತ್ರ್ಯದ ಹೆಸರಿನಲ್ಲಿ ಮುಸ್ಲಿಮರ ಭಾವನೆಗಳಿಗೆ ನೋವುಂಟುಮಾಡಲು ದೌರ್ಜನ್ಯಕರ ವರ್ತನೆಯನ್ನು ಕೆಲವು ಪಾಶ್ಚಾತ್ಯ ಪತ್ರಿಕೆಗಳು ಮತ್ತು ದೇಶಗಳು ಪ್ರಾರಂಭಿಸಿವೆ. ಅವುಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವೆನು. ಕೆಲವು ಪತ್ರಿಕೆಗಳ ಮತ್ತು ದೇಶಗಳ ವಿರುದ್ಧ ಮುಸ್ಲಿಮ್ ದೇಶಗಳಲ್ಲಿ ಬೀಸುತ್ತಿರುವ ಗಾಳಿಯ ಬಗ್ಗೆ ಸಹ ಹೇಳಲು ಬಯಸುತ್ತೇನೆ. ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಸರಕಾರಿ ಮಟ್ಟದಲ್ಲೂ ಪ್ರತಿಭಟನೆಗಳು ನಡೆಯುತ್ತಿವೆ. ಇಸ್ಲಾಮೀ ದೇಶಗಳ ಸಂಘಟನೆ (ಓಐಸಿ) ಸಹ, ಪಶ್ಚಿಮ ದೇಶಗಳು ಕ್ಷಮೆಯಾಚಿಸಬೇಕೆಂದೂ ಪತ್ರಿಕೆಗಳ ಸ್ವಾತಂತ್ರ್ಯ ಮತ್ತು ಮನಸ್ಸಾಕ್ಷಿ ಸ್ವಾತ್ರಂತ್ರ್ಯದ ಹೆಸರಲ್ಲಿ ಪ್ರವಾದಿಗಳ ತನಕ ಅದು ತಲಪದಂತೆ ನಿಯಮಗಳನ್ನು ರಚಿಸಲು ಒತ್ತಡ ಹೇರಬೇಕೆಂದೂ ಹೇಳಿದೆ. ಏಕೆಂದರೆ ಈ ರೀತಿಯ ವರ್ತನೆಯಿಂದ ಹಿಂದೆ ಸರಿಯದಿದ್ದರೆ, ಲೋಕದಲ್ಲಿ ಶಾಂತಿ ಸ್ಥಾಪನೆಯ ಖಾತರಿ ನೀಡಲಾಗದು. ಅವರ ಪ್ರತಿಕ್ರಿಯೆ ಬಹಳ ಉತ್ತಮವಾಗಿದೆ. ಅಲ್ಲಾಹನು ಇಸ್ಲಾಮೀ ದೇಶಗಳಿಗೆ ಶಕ್ತಿ ನೀಡಲಿ. ಅವರು ಹೃತ್ಪೂರ್ವಕ ನೋವಿನೊಂದಿಗೆ ಲೋಕದಲ್ಲಿ ಶಾಂತಿ ಸ್ಥಾಪಿಸಲು ಇಂತಹ ನಿರ್ಧಾರಗಳನ್ನು ಕೈಗೊಳ್ಳಲು ಅವರಿಗೆ ಸಾಧ್ಯವಾಗಲಿ.

## ಪಾಶ್ಚಾತ್ಯ ದೇಶಗಳ ಮತ್ತು ಪತ್ರಿಕೆಗಳ ದ್ವಿಮುಖ ಧೋರಣೆ

ಇತ್ತೀಚೆಗೆ ಇರಾನಿನ ಒಂದು ಪತ್ರಿಕೆ ಹೀಗೆ ಪ್ರಕಟಿಸಿತು: ಪಾಶ್ಚಾತ್ಯ ಪತ್ರಿಕೆಗಳ ಸೇಡು ತೀರಿಸಲು ತನ್ನ ಪತ್ರಿಕೆಯಲ್ಲಿ ಒಂದು ವ್ಯಂಗ್ಯ ಚಿತ್ರಗಳ ಸ್ಪರ್ಧೆ ನಡೆಸಲಾಗುವುದು. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಯಹೂದಿಯರೊಂದಿಗೆ ವರ್ತಿಸಲಾದ ಬಗ್ಗೆ ವ್ಯಂಗ್ಯ ಚಿತ್ರಗಳ ಸ್ಪರ್ಧೆ ನಡೆಸಲಾಗುವುದು.

ಇದು ಇಸ್ಲಾಮ್ ಧರ್ಮಕ್ಕೆ ಅನುಯೋಜ್ಯವಾದ ವರ್ತನೆ ಅಲ್ಲವಾದರೂ ಪಶ್ಚಿಮದ ದೇಶಗಳು ಸ್ವಾತಂತ್ರ್ಯದ ಬಗ್ಗೆ ಮಾಡುವ ಘೋಷಣೆಗಳಿಗೆ ಮತ್ತು ಪತ್ರಿಕೆಗಳ ಸ್ವಾತಂತ್ರ್ಯದ ಹೆಸರಿನಲ್ಲಿ ಅನುಚಿತವಾದುದನ್ನು ಮುದ್ರಿಸುವುದನ್ನು ಪ್ರತಿಪಾದಿಸುತ್ತಿರುವಾಗ ಇರಾನಿನ ಪತ್ರಿಕೆಯ ಪ್ರಕಟಣೆಯ ಬಗ್ಗೆ ಅವರು ಅತೃಪ್ತಿ ಸೂಚಿಸುವುದು ಸರಿಯಲ್ಲ. ಅವರು ಅತೃಪ್ತಿ ಸೂಚಿಸಬಾರದಿತ್ತು ಅಥವಾ ಹೀಗೆ ಹೇಳಬೇಕಾಗಿತ್ತು: ಯಾವ ತಪ್ಪಿನ ಕಾರಣದಿಂದ ಲೋಕದಲ್ಲಿ ಅಶಾಂತಿ ತಲೆದೋರಿದೆಯೋ ಇನ್ನು ಮುಂದೆ ಅಂತಹ ತಪ್ಪು ಮಾಡಬಾರದು. ಯಾವುದೇ ಧರ್ಮ ಅಥವಾ ಧರ್ಮ ಸ್ಥಾಪಕ ಅಥವಾ ಜನಾಂಗದ ವಿರುದ್ಧ ಕೆಟ್ಟ ಯೋಚನೆ ಕೈ ಬಿಟ್ಟು ಪ್ರೀತಿ ವಿಶ್ವಾಸದ ವಾತಾವರಣ ಸೃಷ್ಟಿಸೋಣ.

ಆದರೆ ಈ ರೀತಿಯ ಉತ್ತರಕ್ಕೆ ಬದಲಾಗಿ, ಇಷ್ಟೆಲ್ಲ ಗಲಭೆಗಳಿಗೆ ಕಾರಣವಾದ ಕಾರ್ಟೂನನ್ನು ಪ್ರಕಟಿಸಿದ ಡೆನ್ಮಾರ್ಕ್‌ನ ಪತ್ರಿಕೆಯ ಸಂಪಾದಕ, ಇರಾನಿನ ಈ ಪ್ರಕಟನೆಗೆ ಉತ್ತರವಾಗಿ ಹೀಗೆ ಬರೆದರು: "ನಾವು ಇದರಲ್ಲಿ ಖಂಡಿತವಾಗಿ ಭಾಗವಹಿಸುವುದಿಲ್ಲ." (ಇರಾನಿನ ಪತ್ರಿಕೆ ಪ್ರಕಟಿಸಿದ ಸ್ಪರ್ಧೆ ದ್ವಿತೀಯ ಮಹಾಯುದ್ಧದಲ್ಲಿ ಯಹೂದಿ ಕೋಮಿನ ವಿರುದ್ಧ ಅಕ್ರಮ ನಡೆದ  ವಿಷಯದಲ್ಲಿ ಕಾರ್ಟೂನ್ ಮಾಡುವ ಬಗ್ಗೆಯಾಗಿತ್ತು. ಯಾವುದೇ ಪ್ರವಾದಿಯನ್ನು ಅಪಮಾನಿಸುವ ಅಥವಾ ನಿಂದಿಸುವ ಬಗ್ಗೆಯಾಗಿರಲಿಲ್ಲ.) ನಂತರ ಅವರು ತಮ್ಮ ವಾಚಕರನ್ನು ಸಾಂತ್ವನಗೊಳಿಸುತ್ತಾ ಬರೆಯುತ್ತಾರೆ: "ನಮ್ಮ ವಾಚಕರು ಸಮಾಧಾನಗೊಳ್ಳಿರಿ. ನಮ್ಮ ನೈತಿಕ ಸ್ಥಾನಮಾನ ಈಗಲೂ ನೆಲೆನಿಂತಿದೆ. ನಾವು ಯೇಸುಕ್ರಿಸ್ತರ ಬಗ್ಗೆಯಾಗಲಿ ಹಾಲಕಾಸ್ಟ್ (ಯಹೂದಿಯರ ಜನಾಂಗ ನಾಶ) ಬಗ್ಗೆಯಾಗಲಿ ವ್ಯಂಗ್ಯಚಿತ್ರ ಪ್ರಕಟಿಸುವಂತಹ ಜನರಲ್ಲ. ಆದ್ದರಿಂದ ಯಾವುದೇ ಪರಿಸ್ಥಿತಿಯಲ್ಲಿ ಇರಾನಿನ ಪತ್ರಿಕೆ ಮತ್ತು ಮಾಧ್ಯಮಗಳ ಕೆಟ್ಟ ಅಭಿರುಚಿಯ ಸ್ಪರ್ಧೆಗಳಲ್ಲಿ ನಾವು ಭಾಗವಹಿಸಲಾರೆವು."

ಇದಾಗಿದೆ ಇವರ ನಿಲುವು. ತಮಗಾಗಿ ಒಂದು ಧೋರಣೆ. ಮುಸ್ಲಿಮರ ಭಾವನೆಗಳೊಂದಿಗೆ ವ್ಯಂಗ್ಯವಾಡಲು ಮತ್ತೊಂದು ಧೋರಣೆ. ಹೇಗಿದ್ದರೂ ಇದಾಗಿದೆ ಅವರ ಕೆಲಸ. ಮಾಡುತ್ತಲೇ ಹೋಗಲಿ.

## ಮುಸ್ಲಿಮರ ಬಲಹೀನತೆಯ ಅತ್ಯಂತ ಭಯಾನಕ ಸ್ಥಿತಿ

ಪಾಶ್ಚಿಮಾತ್ಯರ ದ್ವಿಮುಖ ಧೋರಣೆಯ ಇನ್ನೊಂದು ಉದಾಹರಣೆ ನೋಡಿರಿ. ಇಲ್ಲಿನ ಒಬ್ಬ ಲೇಖಕ ಹದಿನೇಳು ವರ್ಷಗಳ ಹಿಂದೆ ಒಂದು ಘಟನೆಯ ಬಗ್ಗೆ ಬರೆದಿದ್ದನು. ಆಸ್ಟ್ರೀಯ ದೇಶಕ್ಕೆ ಹೋದಾಗ ಅಲ್ಲಿ ಅವನ ಮೇಲೆ ಮೊಕದ್ದಮೆ ದಾಖಲಾಗಿ ಮೂರು ವರ್ಷದ ಶಿಕ್ಷೆ ವಿಧಿಸಲಾಯಿತು. ಇದು ಈ ಜನರ ನಡೆವಳಿಕೆಯ ರೀತಿ. ಅವರು ತಮ್ಮ ವಿರುದ್ಧ ಬರೆಯುವುದನ್ನು ಸಹಿಸಲಾರರು. ಆದರೆ ನಮ್ಮ ಸ್ಥಿತಿ ಹೇಗಿದೆ ಎಂದು ಸಹ

ನಾವು ಪರಿಶೀಲಿಸಬೇಕು. ಪಶ್ಚಿಮದವರು ತೋರಿಸುವ ಈ ಧೈರ್ಯಕ್ಕೆ ಕಾರಣ ನಮ್ಮ ಸ್ಥಿತಿಯೇ ಅಲ್ಲವೇ? ನಮಗೆ ಈಗಿನ ಪರಿಸ್ಥಿತಿಯಲ್ಲಿ ತಿಳಿಯುವುದೇನೆಂದರೆ, ಮುಸ್ಲಿಮ್ ದೇಶಗಳು ಅವರ ಅಧೀನದಲ್ಲಿವೆ ಎಂದು ಅವರಿಗೆ ತಿಳಿದಿದೆ. ಮುಸ್ಲಿಮ್ ದೇಶಗಳು ನೆರವಿಗೋಸ್ಕರ ತಮ್ಮ ಬಳಿಗೆಯೇ ಬರಬೇಕಾಗಿದೆ ಎಂದು ಅವರಿಗೆ ತಿಳಿದಿದೆ. ಮುಸ್ಲಿಮರು ಪರಸ್ಪರ ಹೋರಾಡುವಾಗ ಪಾಶ್ಚಿಮಾತ್ಯರ ನೆರವನ್ನು ಪಡೆಯುತ್ತಾರೆ. ಪಾಶ್ಚಿಮಾತ್ಯ ದೇಶಗಳ ಸರಕುಗಳ ಮೇಲೆ ಮುಸ್ಲಿಮ್ ದೇಶಗಳಲ್ಲಿ ಹಾಕಲಾದ ನಿರ್ಬಂಧ ಕೆಲವೇ ದಿನಗಳ ಕಾಲ ಇರುವುದು. ಅನಂತರ ಎಲ್ಲವೂ ಸರಿಯಾಗುವುದು ಎಂದು ಪಾಶ್ಚಿಮಾತ್ಯರಿಗೆ ಗೊತ್ತಿದೆ. ಮಾರುಕಟ್ಟೆಗಳಿಂದ ಎತ್ತಿಬಿಡಲಾದ ವಸ್ತುಗಳು ಪುನಃ ಮಾರುಕಟ್ಟೆಗೆ ಬರುವುವು. ಈ ಪಶ್ಚಿಮದ ದೇಶಗಳಲ್ಲಿರುವ ಮುಸ್ಲಿಮರು ಆ ವಸ್ತುಗಳನ್ನು ತಿನ್ನುತ್ತಿದ್ದಾರೆ, ಬಳಸುತ್ತಿದ್ದಾರೆ. ಡೆನ್ಮಾರ್ಕ್‌ನಲ್ಲಿ (ಡೆನ್ಮಾರ್ಕ್ ವಿರುದ್ಧ ಬಹಳ ಹೆಚ್ಚು ಪ್ರತಿಭಟನೆ ನಡೆಯಿತು.) ಎರಡು ಲಕ್ಷ ಮುಸ್ಲಿಮರಿದ್ದಾರೆ. ಅವರಲ್ಲಿ ಬಹುತೇಕ ಜನರು ಪಾಕಿಸ್ಥಾನದವರು. ಅವರು ಆ ವಸ್ತುಗಳನ್ನು ಬಳಸುತ್ತಿರುವರು. ಒಟ್ಟಿನಲ್ಲಿ ಮುಸ್ಲಿಮರ ಪ್ರತಿಭಟನೆ ತಾತ್ಕಾಲಿಕವಾಗಿದ್ದು ಬೇಗನೆ ಅಂತ್ಯವಾಗುವುದು.

ನಮ್ಮ ಸ್ಥಿತಿ ನೋಡಿರಿ. ಇರಾಕಿನಲ್ಲಿ ಈ ಸಮೀಪ ಕಾಲದಲ್ಲಿ ಇಮಾಮರ ಗೋರಿಯ ಗುಮ್ಮಟವನ್ನು ಸ್ಫೋಟಿಸಿ ಧ್ವಂಸಗೊಳಿಸಲಾಯಿತು. ಇದರ ಪರಿಣಾಮವಾಗಿ ಸುನ್ನಿಯರ ಮಸ್‌ಜಿದ್‌ಗಳ ಮೇಲೆ ಆಕ್ರಮಣ ನಡೆಯಿತು. ಇವುಗಳೆಲ್ಲ ಮುಸ್ಲಿಮರನ್ನು ಪರಸ್ಪರ ಹೋರಾಡಲು ಶತ್ರುಗಳು ನಡೆಸಿದ ಕಾರಸ್ಥಾನಗಳೋ ಎಂಬುದನ್ನು ಯೋಚಿಸಲು ಪ್ರಯತ್ನಿಸುವುದಿಲ್ಲ. ಈ ಬಾಂಬುಗಳನ್ನೂ ಆಯುಧಗಳನ್ನೂ ಪಶ್ಚಿಮದ ದೇಶಗಳಿಂದಲೇ ಖರೀದಿಸಲಾಗುತ್ತಿದೆ. ಆದರೆ ಜನರು ಇದರ ಬಗ್ಗೆ ಯೋಚಿಸುವುದೇ ಇಲ್ಲ. ಅವರ ಬುದ್ಧಿಗೆ ಅಂಧತೆ ಬಾಧಿಸಿದೆ. ಅವರು ಸಿಟ್ಟು ಮತ್ತು ಗುಂಪುಗಾರಿಕೆಯ ಕಾರಣ ಏನನ್ನೂ ಮನವರಿಕೆ ಮಾಡುವುದಿಲ್ಲ. ಮತ್ತೊಂದು, ದೌರ್ಭಾಗ್ಯವಶಾತ್ ಕಪಟಿಗಳ ವರ್ತನೆಯಾಗಿದೆ. ಅವರು ಶತ್ರುಗಳೊಂದಿಗೆ ಸೇರಿಕೊಂಡಿರುತ್ತಾರೆ. ಅವರಿಂದ ಶತ್ರುಗಳು ಲಾಭ ಪಡೆಯುತ್ತಾರೆ. ಅವರಿಗೆ ಯೋಚಿಸಲು ಬಿಡುವುದಿಲ್ಲ. ಇರಾಕಿನಲ್ಲಿ ಉಂಟಾದ ಹೊಸ ಪರಿಸ್ಥಿತಿಯಿಂದ ಆಂತರಿಕ ಯುದ್ಧದ ಕಡೆಗೆ ಸಾಗುತ್ತಿದೆ. ಈಗ ಅದು ಪ್ರಾರಂಭವಾಗಿದೆ. ಈಗಿನ ಪರಿಸ್ಥಿತಿಯನ್ನು ಸುಧಾರಿಸುವುದು ಅಸಾಧ್ಯವಾದ ಕಾರಣ ಅಲ್ಲಿನ ನಾಯಕರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಮುಸ್ಲಿಮರ ವಿರುದ್ಧ ಮುಸ್ಲಿಮರು ಹೋರಾಡುವಾಗ ಈ ಪರಿಸ್ಥಿತಿ ಅಫ್‌ಘಾನಿಸ್ಥಾನದಲ್ಲೂ ಪಾಕಿಸ್ಥಾನದಲ್ಲೂ ಇದೆ. ಪ್ರತಿಯೊಂದು ಪಂಗಡ ಇನ್ನೊಂದು ಪಂಗಡದ ವಿರುದ್ಧ ಹಿಂಸಾಚಾರ ಮಾಡಲು ಪ್ರಯತ್ನಿಸುತ್ತಿದೆ. ಧರ್ಮದ ಹೆಸರಲ್ಲಿ ಒಂದು ಪಂಗಡ ಮತ್ತೊಂದನ್ನು ಕೊಲ್ಲುತ್ತಿದೆ. ಆದರೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ:

[illegible]

–"ಯಾವನಾದರೂ ಉದ್ದೇಶಪೂರ್ವಕವಾಗಿ ಒಬ್ಬ ವಿಶ್ವಾಸಿಯನ್ನು ಕೊಂದರೆ, ಅವನಿಗೆ ಅದರ ಶಿಕ್ಷೆ ನರಕವಾಗಿದೆ. ಅಲ್ಲಿ ಅವನು ದೀರ್ಘಕಾಲ ವಾಸಿಸುವನು. ಅಲ್ಲಾಹನು ಅವನ ಮೇಲೆ ಕೋಪಗೊಳ್ಳುವನು ಮತ್ತು ಅವನನ್ನು ಶಪಿಸುವನು ಹಾಗೂ ಒಂದು ಕಠಿಣವಾದ ಶಿಕ್ಷೆಯನ್ನು ಅವನಿಗಾಗಿ ಸಿದ್ಧಗೊಳಿಸಿಟ್ಟಿರುವನು." (4 : 94)

## ಮುಸ್ಲಿಮರ ಒಡಕು ಮತ್ತು ಬಲಹೀನತೆಗೆ ಮೂಲ ಕಾರಣ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಗ್ಗಳ ಉಲ್ಲಂಘನೆ ಮತ್ತು ಮಹ್‌ದೀ ಮಸೀಹರ ನಿರಾಕರಣೆ

ನೀವು ನೋಡಿರಿ, ಮುಸ್ಲಿಮರು ಒಬ್ಬರಿನ್ನೊಬ್ಬರನ್ನು ಕೊಲ್ಲುತ್ತಿದ್ದಾರೆ. ಗಲಭೆ ಗೊಂದಲ ಬಡಿದೆಬ್ಬಿಸುವವರು ತಮ್ಮ ನಾಯಕರ ಉತ್ತೇಜನ ಪ್ರಕಾರ (ಅವರಲ್ಲಿ ಬಹುತೇಕ ಜನರು ಮತ ಪಂಡಿತರು) ಈ ಎಲ್ಲ ಗಲಭೆ, ಗೊಂದಲ ಮಾಡುತ್ತಿದ್ದಾರೆ. ಕೊಲೆಪಾತಕಗಳು ನಡೆಯುತ್ತಿವೆ. ಬೆಂಕಿ ಹಚ್ಚುವಿಕೆ ನಡೆಯುತ್ತಿವೆ. ಕೊಂದರೆ ಪುಣ್ಯಗಳಿಸುವಿರಿ, ಸ್ವರ್ಗಗಳಿಸುವಿರಿ ಎಂದೆಲ್ಲ ಮತ ಪಂಡಿತರು ಉಪದೇಶಿಸುತ್ತಾರೆ. ಆದರೆ ಅಲ್ಲಾಹನು ಜನರನ್ನು ನರಕಕ್ಕೆ ಹಾಕುತ್ತಿದ್ದಾನೆ. ಅವರ ಮೇಲೆ ಶಾಪ ಸುರಿಸುತ್ತಿದ್ದಾನೆ. ಪಾಕಿಸ್ಥಾನದಲ್ಲಿ, ಬಾಂಗ್ಲಾದೇಶದಲ್ಲಿ ಅಥವಾ ಬೇರೆ ದೇಶಗಳಲ್ಲಿ ಅಹ್ಮದಿಯರನ್ನು ಹುತಾತ್ಮರನ್ನಾಗಿ ಮಾಡುವವರಿಗೆ ಸ್ವರ್ಗದ ಆಶೆ ತೋರಿಸಿ ನರಕಕ್ಕೆ ಒಯ್ಯುವ ಕೆಲಸ ಮಾಡಿಸುತ್ತಾರೆ.

ಒಟ್ಟಿನಲ್ಲಿ, ಮುಸ್ಲಿಮರು ಮಾಡುವ ಕೆಲಸಗಳಿಂದ ಮುಸ್ಲಿಮರ ಶತ್ರುಗಳು ಲಾಭ ಪಡೆಯುತ್ತಾರೆ ಮತ್ತು ಮುಸ್ಲಿಮರ ಶಕ್ತಿ ಕಡಿಮೆ ಆಗುತ್ತಾ ಹೋಗುತ್ತಿದೆ. ಆದರೆ ಈ ಮುಸ್ಲಿಮರಿಗೆ ಬುದ್ಧಿ ಬರುವುದಿಲ್ಲ. ಮುಸ್ಲಿಮರ ಬುದ್ಧಿಹೀನತೆ ಮತ್ತು ಅವರಿಗೆ ಸಂಭವಿಸುವ ನಿಂದನೆಗಳಿಗೆ ಕಾರಣ ಅವರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಯನ್ನು ಪಾಲಿಸುವುದಿಲ್ಲ ಮತ್ತು ಮಹ್‌ದೀ ಮಸೀಹರನ್ನು ಸುಳ್ಳುವಾದಿ ಎಂದು ಹೇಳುತ್ತಾರೆ. ಈಗ ಅಹ್ಮದಿಯರು ಮಾಡಬೇಕಾದುದು ಅಲ್ಲಾಹನೊಂದಿಗೆ ಪ್ರಾರ್ಥನೆಯಾಗಿದೆ. ಇದರ ಬಗ್ಗೆ ನಾನು ಇದರ ಮೊದಲು ಸಹ ನಿಮ್ಮ ಗಮನ ಸೆಳೆದಿದ್ದೆ. ಅಲ್ಲಾಹನು ಮುಸ್ಲಿಮರಿಗೆ ಬುದ್ಧಿಯನ್ನೂ ತಿಳುವಳಿಕೆಯನ್ನೂ ದಯಪಾಲಿಸಲಿ. ಅವರು ಈ ಕಪಟರ ಮತ್ತು ಶತ್ರುಗಳ ಕೈಗೊಂಬೆಗಳಾಗದಿರಲಿ. ಇಸ್ಲಾಮನ್ನು ಅಪಕೀರ್ತಿಗೊಳಪಡಿಸುವವರೂ ಒಬ್ಬರಿನ್ನೊಬ್ಬರ ಕೊರಳು ಕತ್ತರಿಸುವವರೂ ಆಗದಿರಲಿ.

ಹೀಗಿದ್ದರೂ ಇಸ್ಲಾಮಿನ ಶತ್ರುಗಳು ಮುಸ್ಲಿಮರನ್ನು ಒಂದಲ್ಲದಿದ್ದರೆ ಇನ್ನೊಂದು ರೀತಿಯಲ್ಲಿ ಅಪಮಾನಿಸಲು ಪ್ರಯತ್ನಿಸುವಾಗ ಅಹ್ಮದಿಯರಿಗೆ ನೋವುಂಟಾಗುತ್ತದೆ. ಏಕೆಂದರೆ ಈ ಜನರು ನಮಗೆ ಪ್ರಿಯರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬುವವರಾಗಿರುತ್ತಾರೆ ಅಥವಾ ನಂಬುವವರೆಂದು ಹೇಳಿಕೊಳ್ಳುತ್ತಾರೆ. ಈ ದಾರಿ ತಪ್ಪಿದ ಮುಸ್ಲಿಮರಲ್ಲಿ ಬಹಳ ದೊಡ್ಡ ಸಂಖ್ಯೆಯ ಜನರು ತಮ್ಮ ಅಜ್ಞಾನದ ಕಾರಣದಿಂದ ನಾಯಕರ ಮತ್ತು ಮತ ಪಂಡಿತರ ಮಾತುಗಳನ್ನು ಆಲಿಸಿ ಅನುಚಿತ ಕೆಲಸಗಳನ್ನು ಮಾಡುತ್ತಾರೆ. ಆದರೆ ಅವರು ಮಾಡುವ ಕೆಲಸಗಳಿಗೆ ಇಸ್ಲಾಮಿನೊಂದಿಗೆ ದೂರದ ಸಂಬಂಧ ಕೂಡ ಇರುವುದಿಲ್ಲ. ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಆಲಿಸಿ ಅವರನ್ನು ತಥಾಕಥಿತ ಆಲಿಮ್‌ಗಳ ಹಿಡಿತದಿಂದ ಬಿಡಿಸಲಿ ಮತ್ತು ಇಸ್ಲಾಮಿನ ಪ್ರೀತಿಯ ಉತ್ಸಾಹದಿಂದ ಅವಿವೇಕವಾಗಿ ಅಥವಾ ಅಜ್ಞಾನದಿಂದ ವರ್ತಿಸುತ್ತಾ ಇಸ್ಲಾಮಿಗೆ ಅಪಕೀರ್ತಿ ಉಂಟುಮಾಡುತ್ತಿದ್ದ ತಮ್ಮ ವರ್ತನೆಯನ್ನು, ಇಸ್ಲಾಮಿನ ಸುಂದರ ಉಪದೇಶಗಳ ವಾಸ್ತವಿಕತೆಯನ್ನು ಅರಿತುಕೊಂಡು ಬದಲಾಯಿಸಲಿ. ಅಲ್ಲಾಹನು ಅವರಿಗೆ ನೇರಮಾರ್ಗವನ್ನು ತೋರಿಸಲಿ. ಏಕೆಂದರೆ ಅವರ ಕೆಲಸಗಳ ಕಾರಣ ಶತ್ರುಗಳಿಗೆ

ಇಸ್ಲಾಮಿನ ವಿರುದ್ಧ ಕೊಳೆಕೆಸೆಯಲು ಸಂದರ್ಭ ಸಿಗುತ್ತದೆ ಮತ್ತು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೋಷಾರೋಪ ಮಾಡಲು ಸಂದರ್ಭ ಒದಗುತ್ತದೆ.

ಆದ್ದರಿಂದ ಪ್ರತಿಯೊಬ್ಬ ಅಹ್ಮದೀ ಈಗ ಪ್ರಾರ್ಥನೆ ಬಗ್ಗೆ ಹೆಚ್ಚು ಶ್ರದ್ಧೆ ವಹಿಸಬೇಕಾಗಿದೆ. ಏಕೆಂದರೆ ಇಸ್ಲಾಮೀ ಲೋಕ ತಾನು ಮಾಡಿದ ತಪ್ಪುಗಳ ಕಾರಣ ಅತ್ಯಂತ ಭಯಾನಕ ಅವಸ್ಥೆಯಿಂದ ಕಂಗೆಟ್ಟಿದೆ. ನಮಗೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಸತ್ಯವಾಗಿಯೂ ಪ್ರೀತಿ ವಿಶ್ವಾಸಗಳು ಇದ್ದರೆ ನಾವು ಈ ಸಮುದಾಯಕ್ಕೋಸ್ಕರ ಬಹಳ ಪ್ರಾರ್ಥನೆ ಮಾಡಬೇಕಾಗಿದೆ. ನಾವು ಇದರ ಮೊದಲು ಸಹ ಮಾಡಿದ ಹಾಗೆ ಇದರ ಬಗ್ಗೆ ಬಹಳ ಶ್ರದ್ಧೆ ನೀಡಬೇಕು.

## ಪ್ರಾರ್ಥನೆ ಮಾಡುವ ಮತ್ತು ಅನುಗ್ರಹ ಗಳಿಸುವ ಮೂಲ ವಿಧಾನ

ನಾವು ಹೇಗೆ ಪ್ರಾರ್ಥಿಸಬೇಕೆಂದು ನಿಮ್ಮ ಗಮನಕ್ಕೆ ತರಲು ನಾನು ಬಯಸುತ್ತೇನೆ. ಈ ಪ್ರಾರ್ಥಿಸುವ ರೀತಿಗಳನ್ನು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೇ ಕಲಿಸಿಕೊಟ್ಟರು. ಇದರಿಂದ ನಮ್ಮ ಸುಧಾರಣೆ ಆಗುತ್ತದೆ ಮತ್ತು ನಮ್ಮ ಪ್ರಾರ್ಥನೆಗಳು ಸ್ವೀಕರಿಸಲ್ಪಟ್ಟ ದೃಶ್ಯಗಳನ್ನು ನಾವು ನೋಡಬಹುದು.

ಒಂದು ಹದೀಸಿನಲ್ಲಿ ಹಝ್‌ರತ್ ಉಮರ್ ಬಿನ್ ಖತ್ತಾಬ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೇಳಿದರು – ಪ್ರಾರ್ಥನೆ ಆಕಾಶ ಮತ್ತು ಭೂಮಿಯ ಮಧ್ಯೆ ನಿಂತುಬಿಡುತ್ತದೆ. ನೀನು ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ದುರೂದ್ ಪ್ರಾರ್ಥನೆ ಸಲ್ಲಿಸುವ ತನಕ ಅದರ ಯಾವ ಭಾಗವೂ (ಅಲ್ಲಾಹುವಿನ ಮುಂದೆ ಸಮರ್ಪಿಸಲ್ಪಡಲಿಕ್ಕೆ) ಮೇಲೆ ಹೋಗಲಾರದು." **(ತಿರ್ಮಿಧೀ)**

ಇದು ವಾಸ್ತವಿಕ ವಿಷಯವಾಗಿದೆ. ಇದರ ಬಗ್ಗೆ ಅಲ್ಲಾಹನೂ ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟಪಡಿಸಿದ್ದಾನೆ. ನಾನು ಖುತ್‌ಬದ ಆರಂಭದಲ್ಲಿ ಪಾರಾಯಣ ಮಾಡಿದ ವಚನ ಇದನ್ನೇ ಸೂಚಿಸುತ್ತದೆ.

إن الله وملائكته يصلون على النبي يا أيها الذين آمنوا صلوا عليه وسلموا تسليما

"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಓ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ." **(ಪವಿತ್ರ ಖುರ್‌ಆನ್ 33: 57)**

ಪವಿತ್ರ ಖುರ್‌ಆನ್‌ನಲ್ಲಿ ಅಸಂಖ್ಯಾತ ಆಜ್ಞೆಗಳಿವೆ. ಅವುಗಳನ್ನು ಪಾಲಿಸಿದರೆ ಅಲ್ಲಾಹನಿಗೆ ಪ್ರಿಯರಾಗುವಿರಿ. ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗುವಿರಿ. ಅಲ್ಲಾಹನ ಸಾಮೀಪ್ಯ ಗಳಿಸುವವರಾಗುವಿರಿ. ನರಕದಿಂದ ರಕ್ಷಿಸಲ್ಪಡುವಿರಿ. ಸ್ವರ್ಗವನ್ನು ಪ್ರವೇಶಿಸುವಿರಿ.

ನಾನು ಉಲ್ಲೇಖಿಸಿದ ವಚನದಲ್ಲಿರುವ ಆಜ್ಞೆ ಬಹಳ ಮಹತ್ವಪೂರ್ಣವಾಗಿದೆ. ಅಲ್ಲಾಹನು ತನ್ನ ದೂತರನ್ನೂ ಈ ಕೆಲಸದಲ್ಲಿ ನೇಮಿಸಿದ್ದಾನೆ. ಅಲ್ಲಾಹನು ಸ್ವತಃ ಸಹ

ತನ್ನ ಪ್ರಿಯ ಪ್ರವಾದಿಗೆ ಅನುಗ್ರಹವನ್ನೂ ಶಾಂತಿಯನ್ನೂ ಸುರಿಸುತ್ತಿದ್ದಾನೆ. ಆದುದರಿಂದ ನೀವು ದುರೂದ್ ಪ್ರಾರ್ಥನೆ ಮಾಡುವಾಗ ಅಲ್ಲಾಹನು ಮಾಡುವ ಕೆಲಸವನ್ನು ಅನುಸರಿಸುತ್ತಿರುವಿರಿ. ಅಲ್ಲಾಹನು ತನ್ನ ಆಜ್ಞೆಗಳನ್ನು ಪಾಲಿಸುವವರಿಗೆ ಅನುಗ್ರಹ ನೀಡುತ್ತಿರುವಾಗ, ಅಲ್ಲಾಹನೇ ಸ್ವತಃ ಮಾಡುವ ಕೆಲಸವನ್ನು ನಾವು ಮಾಡಿದರೆ ನಮಗೆ ಎಷ್ಟು ಅನುಗ್ರಹ ದಯಪಾಲಿಸುವನು! ಹೃತ್ಪೂರ್ವಕವಾಗಿ ಮಾಡಲಾಗುವ ದುರೂದ್ ಪ್ರಾರ್ಥನೆ ಮುಹಮ್ಮದ್ ರಸೂಲ್‌ರ(ಸ) ಸಮುದಾಯದ ಸುಧಾರಣೆಗೆ ಪೂರಕವೂ ಆಗುವುದು. ಅದು ಮುಸ್ಲಿಮರನ್ನು ಅಪಮಾನದಿಂದ ರಕ್ಷಿಸುವುದು. ಅದು ನಮ್ಮ ಸುಧಾರಣೆಗೆ ಮಾಧ್ಯಮವಾಗುವುದು. ನಮ್ಮ ಪ್ರಾರ್ಥನೆ ಸ್ವೀಕರಿಸಲ್ಪಡಲು ಸಹ ಕಾರಣವಾಗುವುದು. ದಜ್ಜಾಲನ ಕೆಡುಕುಗಳಿಂದ ರಕ್ಷಣೆ ಪಡೆಯುವ ಮಾರ್ಗವೂ ಆಗುವುದು.

ಹದೀಸುಗಳಲ್ಲಿ ದುರೂದ್ ಪ್ರಾರ್ಥನೆಯ ಪ್ರಯೋಜನಗಳ ಬಗ್ಗೆ ವಿವಿಧ ವರದಿಗಳಲ್ಲಿ ಪ್ರಸ್ತಾಪಿಸಲಾಗಿದೆ. ಒಂದು ವರದಿಯಲ್ಲಿ ಹಝ್ರತ್ ಮುಹಮ್ಮದ್ ರಸೂಲ್(ಸ) ಹೀಗೆ ಹೇಳಿದರು: "ಜನರಲ್ಲಿ ನನಗೆ ಅತ್ಯಧಿಕ ದುರೂದ್ ಪ್ರಾರ್ಥನೆ ಮಾಡುವವನು ಪುನರುತ್ಥಾನ ದಿನದಂದು ನನಗೆ ಅತ್ಯಂತ ಸಮೀಪಸ್ಥನಾಗುವನು." **(ತಿರ್ಮಿಧೀ)**

ಹಝ್ರತ್ ಮುಹಮ್ಮದ್ ರಸೂಲ್(ಸ) ಹೇಳಿದರು: "ಯಾರು ಹೃತ್ಪೂರ್ವಕವಾಗಿ ನನಗೆ ದುರೂದ್ ಒಂದು ಬಾರಿ ಅರ್ಪಿಸುತ್ತಾನೋ ಅಲ್ಲಾಹನು ಅದಕ್ಕೆ ಹತ್ತು ಬಾರಿ ದುರೂದ್ ಆಶೀರ್ವದಿಸುವನು; ದುರೂದ್ ಅರ್ಪಿಸಿದವನಿಗೆ ಹತ್ತು ಒಳಿತುಗಳನ್ನು ಅವನ ಹೆಸರಲ್ಲಿ ಬರೆಯುವನು ಮತ್ತು ಹತ್ತು ತಪ್ಪುಗಳನ್ನು ಕ್ಷಮಿಸುವನು." **(ಸುನನುನ್ನಸಾಈ)**

ಪ್ರಾರ್ಥಿಸುವಾಗ ಹೃತ್ಪೂರ್ವಕ ಸ್ಥಿತಿ ಇರಬೇಕು. ಬಹಳ ಜನರು ದುಆ ಮಾಡಲು ಅಥವಾ ದುಆ ಮಾಡಿಸಲು ಬರೆಯುತ್ತಾರೆ. ಅವರು ಹೇಳುತ್ತಾರೆ: ನಾವು ಬಹಳ ಪ್ರಾರ್ಥನೆ ಮಾಡಿದೆವು. ನೀವು ಸಹ ಪ್ರಾರ್ಥಿಸಿರಿ. ನಾವು ದುರೂದ್ ಪ್ರಾರ್ಥನೆ ಸಹ ಮಾಡಿದೆವು. ದೀರ್ಘಕಾಲ ಪ್ರಾರ್ಥಿಸಿದರೂ ನಮ್ಮ ಪ್ರಾರ್ಥನೆ ಸ್ವೀಕರಿಸಲ್ಪಟ್ಟಿಲ್ಲ.

ಹಝ್ರತ್ ಮುಹಮ್ಮದ್ ರಸೂಲ್(ಸ) ದುರೂದ್ ಪ್ರಾರ್ಥನೆ ಹೇಗೆ ಮಾಡಬೇಕೆಂದು ಉಪದೇಶಿಸಿದ್ದಾರೆ: "ಸಾದಿಖನ್ ಮಿನ್ ನಫ್‌ಸಿಹೀ" ಎಂದರೆ ಪ್ರಾರ್ಥನೆ ನಿಷ್ಠೆಯಿಂದ ಮಾಡಬೇಕು. ದುರೂದ್ ಪ್ರಾರ್ಥನೆ ಮಾಡುವವನು ತನ್ನನ್ನು ಪರಿಶೀಲಿಸಬೇಕು. ತನ್ನ ಹೃದಯವನ್ನು ಪರಿಶೀಲಿಸಬೇಕು. ಅದರಲ್ಲಿ ಲೌಕಿಕವಾದ ಮಾಲಿನ್ಯಗಳು ಎಷ್ಟಿವೆ ಎಂದು ನೋಡಬೇಕು. ನಿಷ್ಠೆಯಿಂದ ದುರೂದ್ ಪ್ರಾರ್ಥನೆ ಮಾಡುವ ಬಗ್ಗೆ ಎಷ್ಟು ಶ್ರದ್ಧೆ ಇದೆ ಎಂದು ನೋಡಬೇಕು. ಎಷ್ಟು ನಿಷ್ಠೆಯಿಂದ ದುರೂದ್ ಪ್ರಾರ್ಥನೆ ಮಾಡುತ್ತಿದ್ದೇವೆ ಎಂದು ನೋಡಬೇಕು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:"ದುರೂದ್ ಶರೀಫ್, ಸ್ಥಿರತೆಗಳಿಸಲು ಅತ್ಯಂತ ಬಲವತ್ತಾದ ಮಾರ್ಗವಾಗಿದೆ. ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡಿರಿ. ಕೇವಲ ಆಚಾರ ಅಥವಾ ಅಭ್ಯಾಸದ ರೂಪದಲ್ಲಿ ಅದು ಆಗದಿರಲಿ. ಹಝ್ರತ್ ಮುಹಮ್ಮದ್ ರಸೂಲ್‌ರ(ಸ) ಸೌಂದರ್ಯ ಮತ್ತು ಔದಾರ್ಯಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅವರ ಆಧ್ಯಾತ್ಮಿಕ ಸ್ಥಾನದ ಉನ್ನತಿಗೋಸ್ಕರ ಮತ್ತು ಅವರ ಯಶಸ್ಸಿಗೋಸ್ಕರ ದುರೂದ್ ಪ್ರಾರ್ಥನೆ ಮಾಡಿರಿ. ಅದರ ಪರಿಣಾಮವಾಗಿ ನಿಮ್ಮ ಪ್ರಾರ್ಥನೆಯು ಸ್ವೀಕರಿಸಲ್ಪಡುವ ಸಿಹಿಯೂ ರುಚಿಕರವೂ ಆದ ಫಲ ನಿಮಗೆ ಲಭಿಸುವುದು."

**(ರಿವ್ಯೂ ಆಫ್ ರಿಲೀಜನ್ಸ್ ಉರ್ದು–ಸಂಪುಟ 3 ಸಂಚಿಕೆ 1 ಪುಟ 115).**

ಮೇಲೆ ವಿವರಿಸಿದುದು ದುರೂದ್ ಪ್ರಾರ್ಥನೆಯ ಸರಿಯಾದ ರೀತಿಯಾಗಿದೆ.

ಹಝ್ರತ್ ಮಸೀಹ್ ಮೌಊದ್[ಅ] ಇನ್ನೊಂದು ಕಡೆ ಹೀಗೆ ಹೇಳುತ್ತಾರೆ: "ಓ ಜನರೇ, ನೀವು ಔದಾರ್ಯವಂತನಾದ ಪೈಗಂಬರರಿಗೆ[ಸ] ದುರೂದ್ ಪ್ರಾರ್ಥನೆ ಅರ್ಪಿಸಿರಿ. ಅವರು ರಹ್ಮಾನ್ ಮತ್ತು ಮನ್ನಾನ್ (ಅಪರಿಮಿತ ದಯಾಮಯನೂ ಔದಾರ್ಯವಂತನೂ ಆದ) ಅಲ್ಲಾಹನ ಗುಣಗಳನ್ನು ಪ್ರಕಟಿಸುವವರಾಗಿದ್ದಾರೆ. ಔದಾರ್ಯದ ಪ್ರತಿಫಲ ಔದಾರ್ಯವೇ ಆಗಿದೆ. ಯಾರ ಹೃದಯದಲ್ಲಿ ಅವರ ಔದಾರ್ಯದ ಬಗ್ಗೆ ಪ್ರಜ್ಞೆ ಇಲ್ಲವೋ ಅವನಲ್ಲಿ ಸತ್ಯವಿಶ್ವಾಸವೇ ಇಲ್ಲ ಅಥವಾ ಅವನು ಸತ್ಯವಿಶ್ವಾಸವನ್ನು ನಾಶಮಾಡುತ್ತಿದ್ದಾನೆ. ಓ ಅಲ್ಲಾಹ್, ಈ ನಿರಕ್ಷರಿ ಸಂದೇಶವಾಹಕ ಮತ್ತು ಪ್ರವಾದಿಯ ಮೇಲೆ ದುರೂದ್ ಆಶೀರ್ವಾದ ಸುರಿಸು. ಅವರು ಮೊದಲಿನ ಕಾಲದವರಿಗೆ ಧಾರಾಳ ನೀರಿನಿಂದ ಬಾಯಾರಿಕೆ ಹೋಗಲಾಡಿಸಿದ ಹಾಗೆ ಅಂತಿಮ ಕಾಲದವರ ನೀರಡಿಕೆ ನಿವಾರಿಸಿದರು ಮತ್ತು ಅವರನ್ನು ತನ್ನ ಬಣ್ಣವನ್ನು ಹೊಂದುವಂತೆ ಮಾಡಿದರು ಹಾಗೂ ಪರಿಶುದ್ಧ ಜನರೊಂದಿಗೆ ಸೇರಿಸಿದರು."

**(ಇಅ್‌ಜಾಝುಲ್ ಮಸೀಹ್– ರೂಹಾನೀ ಖಝಾಇನ್ – ಸಂಪುಟ 18 ಪುಟ 5–6)**

ಈ ರೀತಿ ನಿಷ್ಠಾವಂತರಾಗಿ ದುರೂದ್ ಪ್ರಾರ್ಥನೆ ಅರ್ಪಿಸಿದರೆ ಮತ್ತು ಅದರಲ್ಲಿ ಒಂದು ರೀತಿಯ ಸಾಮೂಹಿಕ ಬಣ್ಣವೂ ಹುಟ್ಟಿದರೆ ಆ ದುರೂದ್ ಪ್ರಾರ್ಥನೆಯು ಅದರ ಪರಿಣಾಮ ತೋರಿಸಲು ತೊಡಗುವುದು. ದುರೂದ್‌ನಿಂದ ಪ್ರಯೋಜನವಿಲ್ಲ ಎಂದು ಹೇಳುವವರಿಗೆ ಹದೀಸಿನಿಂದ ಮತ್ತು ಹಝ್ರತ್ ಮಸೀಹ್ ಮೌಊದ್‌ರ[ಅ] ಉಲ್ಲೇಖಗಳಿಂದ ಸ್ಪಷ್ಟವಾಗಿ ದುರೂದ್ ಬಗ್ಗೆ ತಿಳಿಸಬೇಕಾಗಿದೆ. ದುರೂದ್ ಪ್ರಾರ್ಥನೆ ಮಾಡುತ್ತಾ ಬಳಲಬಾರದು. ನೀವು ನಿಮ್ಮ ಆತ್ಮ ಪರಿಶೋಧನೆ ಮಾಡಬೇಕು. 'ನನಗೆ ದುರೂದ್ ಪ್ರಾರ್ಥನೆ ಮಾಡದವನು ಜಿಪುಣನೆ'ಂದು ಹಝ್ರತ್ ಪೈಗಂಬರರು[ಸ] ಹೇಳಿದ್ದಾರೆ. ಅಂತಹ ವ್ಯಕ್ತಿ ಜಿಪುಣತೆಯಿಂದ ಪಾಪವನ್ನು ತನ್ನ ಮೇಲೆ ಹೊದಿಸುತ್ತಾನಲ್ಲದೆ ಅಲ್ಲಾಹನ ಅನುಗ್ರಹದಿಂದ ವಂಚಿತನೂ ಆಗುತ್ತಾನೆ. ನಾವು ಮೇಲೆ ಉಲ್ಲೇಖಿಸಿದ ಹಾಗೆ ಒಂದು ಸಾರಿ ದುರೂದ್ ಅರ್ಪಿಸುವವನಿಗೆ ಹತ್ತು ಸಾರಿ ದುರೂದ್ ಅಲ್ಲಾಹನು ರವಾನಿಸುತ್ತಾನೆ. **(ಜಲಾಉಲ್ ಇಫ್‌ಹಾಮ್ – ಪುಟ 318)**

ಅಲ್ಲಾಹನ ರಕ್ಷಣೆ ಪಡೆಯಲಿಕ್ಕೋಸ್ಕರ ಹಝ್ರತ್ ಪೈಗಂಬರರ[ಸ] ಕೆಲವು ಸಹಾಬರೂ(ಶಿಷ್ಯರೂ) ಹಝ್ರತ್ ಮಸೀಹ್ ಮೌಊದ್‌ರ[ಅ] ಕೆಲವು ಸಹಾಬರೂ ಇತರ ಪ್ರಾರ್ಥನೆಗಳನ್ನು ಬಿಟ್ಟು ದುರೂದ್ ಶರೀಫ್ ಮಾತ್ರ ಅರ್ಪಿಸುತ್ತಿದ್ದರು.

ಒಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ಪೈಗಂಬರರು[ಸ] ಹೇಳಿದರು – "ಒಬ್ಬನೊಂದಿಗೆ ನನ್ನ ಹೆಸರಿನ ಪ್ರಸ್ತಾಪ ಮಾಡಿದಾಗ ಅವನು ನನಗೆ ದುರೂದ್ ಪ್ರಾರ್ಥನೆ ಅರ್ಪಿಸದಿದ್ದರೆ ಅದು ಅವನ ದುಸ್ವಭಾವ ಮತ್ತು ವಿಶ್ವಾಸಾರ್ಹನಲ್ಲದಿರುವಿಕೆಯ ಸಂಕೇತವಾಗಿದೆ. **(ಜಲಾಉಲ್ ಇಫ್‌ಹಾಮ್–ಪುಟ 327)**

ಹಝ್ರತ್ ಅಬೂಬಕರ್ ಸಿದ್ದೀಖ್[ರ] ಹೇಳಿದರು: "ಹಝ್ರತ್ ಪೈಗಂಬರರಿಗೆ[ಸ] ದುರೂದ್ ಅರ್ಪಿಸುವುದು ಗುಲಾಮರನ್ನು ವಿಮೋಚಿಸುವುದಕ್ಕಿಂತ ಹೆಚ್ಚು ಶ್ರೇಷ್ಠವಾಗಿದೆ. ಅವರ ಸಹವಾಸ ಅಲ್ಲಾಹನ ಮಾರ್ಗದಲ್ಲಿ ಜೀವ ತ್ಯಾಗಕ್ಕಿಂತಲೂ ಜಿಹಾದ್ ಮಾಡುವುದಕ್ಕಿಂತಲೂ ಉತ್ತಮವಾಗಿದೆ." **(ತಫ್‌ಸೀರ್ ದುರ್ರು ಮನ್‌ಸೂರ್)**

ಈಗ ಜಿಹಾದ್ ಹೆಸರಿನಲ್ಲಿ ಅನ್ಯರನ್ನು ಕೊಲ್ಲುತ್ತಿದ್ದಾರೆ ಮತ್ತು ಪರಸ್ಪರ ಒಬ್ಬರಿನ್ನೊಬ್ಬರ ಕೊರಳು ಕತ್ತರಿಸುತ್ತಾ ಇದ್ದಾರೆ. ಈ ಮತ ಪಂಡಿತರೊಂದಿಗೆ ಯಾರಾದರೂ ಕೇಳಬೇಕು. ನೀವು ಅವಿದ್ಯಾವಂತರಾದ ಅಜ್ಞಾನಿ ಮುಸ್ಲಿಮರ ಭಾವನೆಗಳನ್ನು ಉತ್ತೇಜಿಸುವಾಗ ಅವರು ಇಸ್ಲಾಮಿನ ಅಭಿಮಾನ ಪ್ರಕಟಿಸಲು ತಪ್ಪು ಕೆಲಸ ಮಾಡುತ್ತಾರೆ. ನೀವು ಅವರಿಗೆ ತಪ್ಪು ಮಾರ್ಗದರ್ಶನ ನೀಡುತ್ತಿರುವಿರಿ. ಇದು ಯಾವ ಇಸ್ಲಾಮ್ ಧರ್ಮ? ಇಸ್ಲಾಮಿನ ಉಪದೇಶವೇನೆಂದರೆ, ಹಝ್‌ರತ್ ಮುಹಮ್ಮದ್ ರಸೂಲ್‌ರ(ಸ) ಬಗ್ಗೆ ಅಪಮಾನಕರ ಮಾತನ್ನು ಆಲಿಸಿದರೆ ಅವರ ಸದ್ಗುಣಗಳನ್ನು, ಅವರ ಔದಾರ್ಯವನ್ನು ವರ್ಣಿಸಬೇಕೆಂದಾಗಿದೆ. ಅವರಿಗೆ ದುರೂದ್ ಅರ್ಪಿಸಬೇಕು. ಅದು ನಿಮ್ಮ ಜಿಹಾದಿಗಿಂತ ಹೆಚ್ಚು ಶ್ರೇಷ್ಠವಾಗಿದೆ. ಜೀವಾರ್ಪಣೆ ಮಾಡುವುದಕ್ಕಿಂತ ಪ್ರಾರ್ಥನೆ ಮತ್ತು ದುರೂದ್ ಕಡೆಗೆ ಹೆಚ್ಚು ಗಮನಿಸಬೇಕು.

ಹಝ್‌ರತ್ ಮಸೀಹ್ ಮೌಊದರ(ಅ) ಈ ಕಾಲದಲ್ಲಿ ಇದು ಇನ್ನಷ್ಟು ಆವಶ್ಯಕವಾಗಿದೆ. ಹಿಂಸಾಚಾರಕ್ಕೆ ಬದಲಾಗಿ ಪ್ರಾರ್ಥನೆ ಮತ್ತು ದುರೂದ್‌ಗೆ ಹೆಚ್ಚು ಆದ್ಯತೆ ನೀಡಬೇಕು. ಅದರೊಂದಿಗೆ ಆತ್ಮ ಪರಿಶುದ್ಧಿಗೋಸ್ಕರ ಪ್ರಯತ್ನಿಸಬೇಕು. ನೀವು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಎಷ್ಟರ ಮಟ್ಟಿಗೆ ಪ್ರೀತಿಸುತ್ತಿರುವಿರಿ ಎಂದು ಪರಿಶೀಲಿಸಿರಿ. ಕೆಲವು ವರ್ಗಗಳ ಸ್ವಾರ್ಥದ ಕಾರಣ ನಮ್ಮನ್ನು ಈ ಬೆಂಕಿಯೊಳಗೆ ಒಯ್ಯಲಾಗುತ್ತಿದೆಯೋ, ನಾವು ಕೇವಲ ತಾತ್ಕಾಲಿಕ ಉತ್ಸಾಹ ಭರಿತರಾಗಿದ್ದೇವೋ ಎಂದು ನೋಡಿರಿ.

ನಮ್ಮ ಕರ್ತವ್ಯವೇನೆಂದರೆ, ನಾವು ನಮ್ಮ ಆತ್ಮ ಸುಧಾರಣೆ ಕಡೆಗೆ ಗಮನ ನೀಡುವ ಜೊತೆಗೆ ನಮ್ಮ ಸುತ್ತು ಮುತ್ತಲು ಮುಸ್ಲಿಮರಿಗೆ ಮನವರಿಕೆ ಮಾಡಿಕೊಡಲು ಸಾಧ್ಯವಿದ್ದರೆ ಹೀಗೆ ಮನವರಿಕೆ ಮಾಡಿಕೊಡಬೇಕು: "ನೀವು ತಪ್ಪಾದ ರೀತಿಯನ್ನು ಅವಲಂಬಿಸಬೇಡಿರಿ. ಅಲ್ಲಾಹನು ಮತ್ತು ಅವನ ಸಂದೇಶವಾಹಕರು ಇಷ್ಟಪಡುವ ಮಾರ್ಗವನ್ನು, ಅವರು ತೋರಿಸಿಕೊಟ್ಟ ಮಾರ್ಗವನ್ನು ಅವಲಂಬಿಸಿರಿ." ಹಝ್‌ರತ್ ಪೈಗಂಬರರು(ಸ) ಹೇಳಿರುವರು: "ನೀವು ನನ್ನ ಪ್ರೀತಿ ಬಯಸುವುದಾದರೆ, ಸ್ವರ್ಗಕ್ಕೆ ಹೋಗಲು ಬಯಸುವುದಾದರೆ ನನಗೆ ದುರೂದ್ ಪ್ರಾರ್ಥನೆ ಮಾಡಿರಿ."

ಒಂದು ಹದೀಸಿನಲ್ಲಿ ಹಝ್‌ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳುತ್ತಾರೆ: ಹಝ್‌ರತ್ ಮುಹಮ್ಮದ್ ರಸೂಲ್(ಸ) ಹೇಳಿದರು – "ಯಾರು ನನಗೋಸ್ಕರ ದುರೂದ್ ಪ್ರಾರ್ಥನೆ ಮಾಡುವುದಿಲ್ಲವೋ ಅವನಿಗೆ ಧರ್ಮವೇ ಇಲ್ಲ." **(ಜಲಾಉಲ್ ಇಫ್‌ಹಾಮ್)**

ಹಝ್‌ರತ್ ಮುಹಮ್ಮದ್ ರಸೂಲ್(ಸ) ಒಮ್ಮೆ ಹೀಗೆ ಹೇಳಿದರು: "ಅಲ್ಲಾಹನನ್ನು ಹೆಚ್ಚು ಹೆಚ್ಚಾಗಿ ಸ್ಮರಿಸುವುದು ಮತ್ತು ನನಗೋಸ್ಕರ ದುರೂದ್ ಪ್ರಾರ್ಥನೆ ಮಾಡುವುದು ಕಷ್ಟವನ್ನೂ ದಾರಿದ್ರ್ಯವನ್ನೂ ನಿವಾರಿಸುವುದು." **(ಜಲಾಉಲ್ ಇಫ್‌ಹಾಮ್)**

ಆಹಾರದ ಕೊರತೆ, ಸಂಕಷ್ಟಮಯ ಪರಿಸ್ಥಿತಿ, ಈಗ ಮುಸ್ಲಿಮರಿಗೆ ಸಂಭವಿಸಿರುವ ಸಂಕಷ್ಟ, ಪಶ್ಚಿಮ ದೇಶದವರು ತಮಗೋಸ್ಕರ ಒಂದು ಧೋರಣೆ, ಮುಸ್ಲಿಮ್ ದೇಶಗಳಿಗೋಸ್ಕರ ಇನ್ನೊಂದು ಧೋರಣೆ ಹೊಂದಿರುವುದು ಇವುಗಳಿಗೆಲ್ಲ ಅತ್ಯುತ್ತಮ ಪರಿಹಾರ ಮಾರ್ಗ ಹಝ್‌ರತ್ ಪೈಗಂಬರರಿಗೆ(ಸ) ಹೆಚ್ಚು ಹೆಚ್ಚಾಗಿ ದುರೂದ್

ಅರ್ಪಿಸುವುದಾಗಿದೆ. ದುರೂದ್ ಪ್ರಾರ್ಥನೆಗೆ ಪ್ರತಿಫಲವಾಗಿ ಅಲ್ಲಾಹನು ನಿಶ್ಚಯಿಸಿದ ಅನುಗ್ರಹಗಳನ್ನು ಆ ಮೂಲಕ ಪಡೆಯಬಹುದಾಗಿದೆ.

ಒಂದು ಹದೀಸನ್ನು ಇದರ ಮೊದಲು ಪ್ರಸ್ತಾಪ ಮಾಡಿದ್ದೇನೆ. ಅದರ ಬಗ್ಗೆ ಹೆಚ್ಚು ವಿವರಣೆ ನೀಡಲು ಇನ್ನೊಂದು ಹದೀಸು ಇದೆ. ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: "ಹಝ್ರತ್ ಪೈಗಂಬರರು(ಸ) ಹೇಳಿದರು: ಪುನರುತ್ಥಾನ ದಿನದಲ್ಲಿ, ಆ ದಿನದ ಪ್ರತಿಯೊಂದು ಭಯಪಡಿಸುವ ಸ್ಥಳಗಳಿಂದ ನಿಮ್ಮ ಪೈಕಿ ಎಲ್ಲರಿಗಿಂತ ಹೆಚ್ಚು ನನಗೆ ಹತ್ತಿರವಾಗಿರುವವನು ಲೋಕದಲ್ಲಿದ್ದಾಗ ನನಗೆ ಅತ್ಯಂತ ಹೆಚ್ಚು ದುರೂದ್ ಪ್ರಾರ್ಥನೆ ಮಾಡಿದವನಾಗಿದ್ದಾನೆ." **(ತಫ್‌ಸೀರ್ ದುರ್‍ರು ಮನ್‌ಸೂರ್)**

ಪುನರುತ್ಥಾನದ ದಿನ ಹಝ್ರತ್ ಮುಹಮ್ಮದ್ ರಸೂಲರಿಗೆ(ಸ) ಸಮೀಪವಾಗಿರುವುದನ್ನು ಬಯಸದವನು ಯಾರಿದ್ದಾನೆ? ಪ್ರತಿಯೊಂದು ಅಪಾಯಕರ ಸ್ಥಳಗಳನ್ನು ಅವರ ಕೈ ಹಿಡಿದು ದಾಟಬೇಕಾಗಿದೆ. ಖಂಡಿತವಾಗಿಯೂ ಅಲ್ಲಾಹನ ಕೋಪದಿಂದ ರಕ್ಷಣೆ ಪಡೆಯಲು ಇಚ್ಛಿಸುವುದಾದರೆ ಅದಕ್ಕಿರುವ ಮಾರ್ಗ ಹಝ್ರತ್ ಮುಹಮ್ಮದ್ ರಸೂಲರ(ಸ) ಸಮೀಪ ಇರುವುದಾಗಿದೆ ಎಂದು ಹಝ್ರತ್ ಪೈಗಂಬರರೇ(ಸ) ತಿಳಿಸಿರುವರು. ಆದುದರಿಂದ ಸತ್ಯವಿಶ್ವಾಸಿ ಎಲ್ಲ ಸಮಯಗಳಲ್ಲೂ ದುರೂದ್ ಪ್ರಾರ್ಥನೆ ಮಾಡುವ ಬಗ್ಗೆ ಗಮನ ಕೊಡಬೇಕು ಮತ್ತು ಪ್ರತಿಯೊಂದು ಸಂದರ್ಭದ ಲಾಭ ಪಡೆದುಕೊಂಡು ದುರೂದ್ ಪ್ರಾರ್ಥನೆ ಮಾಡಬೇಕಾಗಿದೆ.

ಇನ್ನೊಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: "ಹಝ್ರತ್ ಅನಸ್(ರ) ಹೀಗೆ ಹೇಳಿದರು: ಹಝ್ರತ್ ಮುಹಮ್ಮದ್ ರಸೂಲ್(ಸ) ಹೇಳಿದರು – ಒಬ್ಬನು ಒಂದು ದಿನ ಒಂದುಸಾವಿರ ಸಾರಿ ನನಗೆ ದುರೂದ್ ಪ್ರಾರ್ಥನೆ ಮಾಡಿದರೆ ಅವನು ಇಹಲೋಕ ಜೀವಿತದಲ್ಲಿಯೇ ಸ್ವರ್ಗದಲ್ಲಿ ತನಗಿರುವ ಸ್ಥಾನವನ್ನು ಕಾಣುವನು."

**(ಜಲಾಉಲ್ ಇಫ್‌ಹಾಮ್)**

ಆದುದರಿಂದ ದುರೂದ್ ಪ್ರಾರ್ಥನೆಯ ಅನುಗ್ರಹದಿಂದ ಉಂಟಾಗುವ ಬದಲಾವಣೆಗಳು ಇಹಲೋಕದ ಜೀವಿತವನ್ನು ಸ್ವರ್ಗಮಯವನ್ನಾಗಿ ಮಾಡುವುದು. ಈ ಕೆಲಸ ಮತ್ತು ಒಳಿತುಗಳು ಮತ್ತು ಪರಿಶುದ್ಧ ಬದಲಾವಣೆಗಳು ಇಹಲೋಕವನ್ನು ಸ್ವರ್ಗವನ್ನಾಗಿ ಮಾಡುವಾಗ ಪರಲೋಕದಲ್ಲಿಯೂ ಸ್ವರ್ಗದ ವಾರೀಸುದಾರನನ್ನಾಗಿ ಮಾಡುವುದು.

ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಅಲ್ ಆಸ್ ವರದಿ ಮಾಡುತ್ತಾರೆ: "ಹಝ್ರತ್ ಮುಹಮ್ಮದ್ ರಸೂಲ್(ಸ) ಹೇಳಿದರು: ಅಝಾನ್ ಧ್ವನಿ ಕೇಳಿಸುವಾಗ ಆ ಶಬ್ದಗಳನ್ನು ಪುನರಾವರ್ತಿಸಿ ಹೇಳಿರಿ. ಅನಂತರ ನನಗೋಸ್ಕರ ದುರೂದ್ ಪ್ರಾರ್ಥನೆ ಮಾಡಿರಿ. ನನಗೋಸ್ಕರ ದುರೂದ್ ಪ್ರಾರ್ಥನೆ ಮಾಡಿದವನಿಗೆ ಅಲ್ಲಾಹನು ಹತ್ತು ಪಟ್ಟು ಅನುಗ್ರಹ ಸುರಿಸುವನು. ನನಗೋಸ್ಕರ ಅಲ್ಲಾಹನಿಂದ "ವಸೀಲ" ಬೇಡಿಕೊಳ್ಳಿರಿ. ಇದು ಸ್ವರ್ಗದ ಪದವಿಗಳಲ್ಲಿ ಒಂದಾಗಿದೆ. ಅದು ಅಲ್ಲಾಹನ ದಾಸರಲ್ಲಿ ಒಬ್ಬನಿಗೆ ಮಾತ್ರ ದೊರಕುವುದು. ಹಾಗೆ ವಸೀಲ ಲಭಿಸುವವನು ನಾನೇ ಆಗುವೆನೆಂದು ನಾನು ಪ್ರತೀಕ್ಷಿಸುತ್ತೇನೆ. ಯಾರು ನನಗೋಸ್ಕರ ಅಲ್ಲಾಹನಿಂದ ವಸೀಲವನ್ನು ಬೇಡಿಕೊಂಡಿರುವನೋ ಆತನಿಗೆ

ಶಫಾಅತ್ (ಹಝ್ರತ್ ಪೈಗಂಬರರ(ಸ) ಶಿಫಾರಸು) ಅನುಮತಿಸಲ್ಪಡುವುದು."

**(ಸಹೀಹ್ ಮುಸ್ಲಿಮ್)**

ಅಧ್ಹಾನ್ ನಂತರದ ಪ್ರಾರ್ಥನೆ ಪ್ರತಿಯೊಬ್ಬ ಅಹ್ಮದೀ ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಆ ಪ್ರಾರ್ಥನೆ ಮಾಡಬೇಕು.

ದುರೂದ್ ಪ್ರಾರ್ಥನೆಯ ಮಹತ್ವ ಮತ್ತು ಅದರ ಪ್ರಯೋಜನಗಳು ಸ್ಪಷ್ಟವಾದವು. ಆದರೆ ದುರೂದ್ ಪ್ರಾರ್ಥನೆ ಯಾವ ರೀತಿ ಮಾಡಬೇಕು? ಎಂದು ಕೆಲವು ಜನರು ಕೇಳುತ್ತಾರೆ. ವಿವಿಧ ಜನರು ವಿವಿಧ ದುರೂದ್‌ಗಳನ್ನು ರಚಿಸಿದ್ದಾರೆ. ಆದರೆ ಇದಕ್ಕೆ ಸಂಬಂಧಿಸಿ ಒಂದು ಹದೀಸು ಹೀಗಿದೆ:

ಹಝ್ರತ್ ಕಅಬ್ ಉಜ್ರ(ರ) ವರದಿ ಮಾಡುತ್ತಾರೆ: ನಾವು ಹಝ್ರತ್ ಮುಹಮ್ಮದ್ ರಸೂಲರರೊಂದಿಗೆ(ಸ) ವಿಚಾರಿಸಿದೆವು. ತಮಗೆ ಸಲಾಮ್ ಅರ್ಪಿಸುವ ರೀತಿ ನಮಗೆ ಗೊತ್ತಿದೆ. ಆದರೆ ತಮಗೋಸ್ಕರ ದುರೂದ್ ಹೇಗೆ ಪಠಿಸಬೇಕು? ಆಗ ಹಝ್ರತ್ ಪೈಗಂಬರರು(ಸ) ಹೇಳಿದರು – ನೀವು ಹೀಗೆ ದುರೂದ್ ಹೇಳಿರಿ:

**"ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್‌ರಾಹೀಮ ಇನ್ನಕ ಹಮೀದುಮ್ಮಜೀದ್. ವ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್‌ರಾಹೀಮ ಇನ್ನಕ ಹಮೀದುಮ್ಮಜೀದ್."** (ತಿರ್ಮಿಧೀ)

ನಮಾಝ್‌ನಲ್ಲಿ ನಾವು ಓದುವ ದುರೂದ್ ಇದಕ್ಕಿಂತ ಸ್ವಲ್ಪ ವಿಸ್ತೃತವಾಗಿದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಬರೆದ ಒಂದು ಪತ್ರದಲ್ಲಿ ಹೀಗೆ ಹೇಳಿದ್ದಾರೆ:

"ತಹಜ್ಜುದ್ ನಮಾಝ್ ಮತ್ತು ಧಿಕ್ರ್‌ಗಳಲ್ಲಿ ನೀವು ತಲ್ಲೀನರಾಗಿರಿ. ತಹಜ್ಜುದ್ ನಮಾಝ್‌ನಲ್ಲಿ ಬಹಳ ಅನುಗ್ರಹಗಳಿವೆ. ನಿರುಪಯೋಗಿಯಾಗಿರುವುದು ವ್ಯರ್ಥವಾಗಿದೆ. ನಿರುಪಯೋಗಿಯಾಗಿ ಆರಾಮದಿಂದ ಇರುವುದಕ್ಕೆ ಯಾವುದೇ ಮಹತ್ವವಿಲ್ಲ. ಅಲ್ಲಾಹನು ಹೇಳಿರುವನು: وَالَّذِينَ جَاهَدُوا فِينَا لَنَهْدِيَنَّهُمْ سُبُلَنَا ವಲ್ಲಧೀನ ಜಾಹದೂ ಫೀನ ಲನಹ್‌ದಿಯನ್ನಹುಮ್ ಸುಬುಲನಾ–ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನ ಪಡುತ್ತಾರೋ ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. (ಪವಿತ್ರ ಖುರ್‌ಆನ್ 29 : 70). ಹಝ್ರತ್ ಮುಹಮ್ಮದ್ ರಸೂಲರ(ಸ) ಪವಿತ್ರ ನಾಲಗೆಯಿಂದ ಉಚ್ಚರಿಸಲ್ಪಟ್ಟ ದುರೂದ್ ಅತ್ಯಂತ ಉತ್ತಮವಾಗಿದೆ. ಅದು ಹೀಗೆ:

اللّٰهُمَّ صَلِّ عَلٰى مُحَمَّدٍ وَعَلٰى آلِ مُحَمَّدٍ كَمَا صَلَّيْتَ عَلٰى إِبْرَاهِيْمَ وَعَلٰى
آلِ إِبْرَاهِيْمَ إِنَّكَ حَمِيْدٌ مَجِيْدٌ
اللّٰهُمَّ بَارِكْ عَلٰى مُحَمَّدٍ وَعَلٰى آلِ مُحَمَّدٍ كَمَا بَارَكْتَ عَلٰى إِبْرَاهِيْمَ
وَعَلٰى آلِ إِبْرَاهِيْمَ إِنَّكَ حَمِيْدٌ مَجِيْدٌ

"ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್‌ರಾಹೀಮ ವ ಅಲಾ ಆಲಿ ಇಬ್‌ರಾಹೀಮ ಇನ್ನಕ ಹಮೀದುಮ್ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್‌ರಾಹೀಮ ವ ಅಲಾ ಆಲಿ ಇಬ್‌ರಾಹೀಮ ಇನ್ನಕ ಹಮೀದುಮ್ಮಜೀದ್."

(ಓ ಅಲ್ಲಾಹ್, ನೀನು ಹಝ್ರ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೂ ಅವರ ಕುಟುಂಬಕ್ಕೆ ಸೇರಿದವರಿಗೂ ಶುಭಾಶೀರ್ವಾದಗಳನ್ನು ನೀಡು – ಹಝ್ರ್‌ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ಶುಭಾಶೀರ್ವಾದ ನೀಡಿದ ಹಾಗೆ. ನಿಶ್ಚಯವಾಗಿಯೂ ನೀನು ಸ್ತುತಿಸಲ್ಪಡುವವನೂ ಮಹತ್ವಶಾಲಿಯೂ ಆಗಿರುವೆ. ಓ ಅಲ್ಲಾಹ್, ನೀನು ಹಝ್ರ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೂ ಅವರ ಕುಟುಂಬದವರಿಗೂ ಅನುಗ್ರಹ ದಯಪಾಲಿಸು– ಹಝ್ರ್‌ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ಅನುಗ್ರಹ ನೀಡಿದ ಹಾಗೆ. ನಿಶ್ಚಯವಾಗಿಯೂ ನೀನು ಸ್ತುತಿಸಲ್ಪಡುವವನೂ ಮಹತ್ವಶಾಲಿಯೂ ಆಗಿರುವೆ.)

"ಒಬ್ಬ ಸಾತ್ವಿಕನ ಬಾಯಿಯಿಂದ ಹೊರಟ ಮಾತುಗಳಲ್ಲಿ ನಿಶ್ಚಯವಾಗಿಯೂ ಅನುಗ್ರಹವಿರುತ್ತದೆ. ಆದುದರಿಂದ ಸಾತ್ವಿಕರಾದವರ ನೇತಾರನೂ ಪ್ರವಾದಿಗಳ ನಾಯಕನೂ ಆಗಿರುವ ಹಝ್ರ್‌ರತ್ ಮುಹಮ್ಮದ್ ರಸೂಲರ(ಸ) ಬಾಯಿಯಿಂದ ಹೊರಟ ಶಬ್ದಗಳು ಎಷ್ಟು ಹೆಚ್ಚು ಅನುಗ್ರಹಪೂರ್ಣವಾಗಿರಬಹುದೆಂದು ಯೋಚಿಸಿರಿ. ಆದುದರಿಂದ ವಿವಿಧ ದುರೂದ್‌ಗಳಿಗಿಂತ ಈ ದುರೂದ್ ಹೆಚ್ಚು ಅನುಗ್ರಹದಾಯಕವಾಗಿದೆ. ವಿನೀತನಾದ ನಾನು ಇದನ್ನೇ ಪಠಿಸುತ್ತೇನೆ. ಇದರ ಬಗ್ಗೆ ಲೆಕ್ಕವಿಡುವ ಆವಶ್ಯಕತೆ ಇಲ್ಲ. ನಿಷ್ಠೆ, ಪ್ರೀತಿ ಮತ್ತು ಪ್ರಜ್ಞೆಯಿಂದಲೂ ವಿನಯದಿಂದಲೂ ದುರೂದ್ ಪ್ರಾರ್ಥನೆ ಮಾಡಬೇಕು. ನೀವು ನಿಮ್ಮ ಹೃದಯದಲ್ಲಿ ಅಳಲು, ತನ್ನನ್ನು ತಾನೇ ಮರೆತ ಸ್ಥಿತಿ, ಹೃದಯದಲ್ಲಿ ವೈಶಾಲ್ಯತೆ ಮತ್ತು ಉತ್ಸಾಹ ಹುಟ್ಟುವ ತನಕ ದುರೂದ್ ಪ್ರಾರ್ಥನೆ ಮಾಡುತ್ತಾ ಇರಬೇಕು."

**(ಮಕ್ತೂಬಾತೆ ಅಹ್ಮದ್ ಭಾಗ–1 ಪುಟ 17–18)**

ಇದೇ ದುರೂದನ್ನು ನಾವು ನಮಾಝ್‌ಗಳಲ್ಲಿ ಉಚ್ಚರಿಸುತ್ತೇವೆ. ಇದನ್ನೇ ಪುನರಾವರ್ತಿಸುತ್ತಾ ಇರಬೇಕು. ಎಷ್ಟು ಸಲ ಉಚ್ಚರಿಸಿದ್ದೇವೆ ಎಂಬುದರ ಲೆಕ್ಕವಿಡಬೇಕಿಲ್ಲ ಎಂದು ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳಿದ್ದಾರೆ.

ಹದೀಸಿನಲ್ಲಿ ಒಂದು ಸಾವಿರ ಸಾರಿ ದುರೂದ್ ಪ್ರಾರ್ಥಿಸುವ ಬಗ್ಗೆ ಹೇಳಲಾಗಿದೆ. ಇದರ ಅರ್ಥ ಹೆಚ್ಚು ಹೆಚ್ಚು ಸಲ ಈ ಪ್ರಾರ್ಥನೆ ಮಾಡಬೇಕೆಂದಾಗಿದೆ. ಆದರೆ ಹಝ್ರ್‌ರತ್ ಮಸೀಹ್ ಮೌಊದ್(ಅ) ಕೆಲವರಿಗೆ ನಿರ್ದಿಷ್ಟ ಸಂಖ್ಯೆ ಸಹ ಹೇಳಿದ್ದಾರೆ. ಕೆಲವರಿಗೆ ಏಳುನೂರು ಸಲ ಪ್ರತಿದಿನ, ಕೆಲವರಿಗೆ ಹನ್ನೊಂದು ನೂರು ಸಲ ಪ್ರತಿದಿನ ಎಂದು ಹೇಳಿದ್ದಾರೆ. ಈ ಆಜ್ಞೆ ಪ್ರತಿಯೊಬ್ಬ ವ್ಯಕ್ತಿಗೆ ಆ ವ್ಯಕ್ತಿಯ ಸ್ಥಿತಿ ಮತ್ತು ಆಧ್ಯಾತ್ಮಿಕ ಮಟ್ಟವನ್ನು ಅನುಸರಿಸಿಯಾಗಿದೆ. ಅದು ಬದಲಾಗುತ್ತಾ ಇರುತ್ತದೆ.

ಹೇಗಿದ್ದರೂ ನಾವು ದುರೂದ್ ಶರೀಫ್ ಓದುವುದು ಆವಶ್ಯಕವಾಗಿದೆ. ಖಿಲಾಫತ್ ಜುಬಿಲಿಗೆ ಸಂಬಂಧಿಸಿದ ಪ್ರಾರ್ಥನೆಗಳಲ್ಲಿ ಒಂದು, ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಇಲ್‌ಹಾಮ್ ಮೂಲಕ ದೊರೆತ ಈ ಕೆಳಗಿನ ದುಆ ಸೇರಿದ್ದಿತು: ಸುಬ್‌ಹಾನಲ್ಲಾಹಿ ವಬಿಹಮ್‌ದಿಹೀ ಸುಬ್‌ಹಾನಲ್ಲಾಹಿಲ್ ಅಝೀಮ್. ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್.

ಇದರೊಂದಿಗೆ ದುರೂದ್ ಪ್ರಾರ್ಥನೆ ಪೂರ್ಣವಾಗಿ ಉಚ್ಚರಿಸಲು ಹೇಳಿದ್ದೆ. ಹಝ್ರ್‌ರತ್ ಮುಹಮ್ಮದ್ ರಸೂಲ್(ಸ) ಉಚ್ಚರಿಸಿದ ದುರೂದ್ ಪ್ರಾರ್ಥನೆಯನ್ನು

ನಮ್ಮ ದುಆಗಳಲ್ಲಿ ಆವಶ್ಯಕವಾಗಿಯೂ ಸೇರಿಸಲು ನಾನು ಹೇಳಿದ್ದೆ. ಆದರೆ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದಂತೆ ಪ್ರಾರ್ಥನೆಯಲ್ಲಿ ತಲ್ಲೀನರಾಗಿ ಉಚ್ಚರಿಸಬೇಕು. ನಮ್ಮಲ್ಲಿ ಒಂದು ವಿಶಿಷ್ಟ ಸ್ಥಿತಿ ಉಂಟಾಗಬೇಕು. ಇಂತಹ ಸ್ಥಿತಿಯನ್ನು ತಲಪುವಾಗ ಅಲ್ಲಾಹನ ಅನುಗ್ರಹಗಳಿಗೆ ನಾವು ವಾರೀಸುದಾರರಾಗುತ್ತೇವೆ.

## ಜಯ ಕೇವಲ ಪ್ರಾರ್ಥನೆಯಿಂದ ಮಾತ್ರ ಗಳಿಸಬಹುದು

ಇದು ಪವಿತ್ರ ಖುರ್‌ಆನ್‌ನಲ್ಲಿ ಪ್ರಸ್ತಾಪಿಸಲಾದ ಆಖರೀನ್ ಕಾಲಘಟ್ಟವಾಗಿದೆ. ಈ ಕಾಲಘಟ್ಟದೊಂದಿಗೆ ಇಸ್ಲಾಮಿನ ವಿಜಯವು ಜೋಡಿಸಲ್ಪಟ್ಟಿದೆ. ಆದರೆ ಈ ವಿಜಯ ಸಿಗುವುದು ನಮಗೆಲ್ಲರಿಗೂ ತಿಳಿದಿರುವಂತೆ ಖಡ್ಗ, ಬಂದೂಕು, ತುಪಾಕಿ ಮತ್ತು ಬಾಂಬ್‌ಗಳ ಮೂಲಕವಲ್ಲ. ಇದಕ್ಕೆ ಬೇಕಾದ ಅತ್ಯಂತ ದೊಡ್ಡ ಆಯುಧ ದುಆ ಆಗಿದೆ. ಹಝ್ರತ್ ಮಸೀಹ್ ಮೌಊದ್‌ರಿಗೆ[ಅ] ಅಲ್ಲಾಹನಿಂದ ನೀಡಲ್ಪಟ್ಟ ಸಾಕ್ಷ್ಯಾಧಾರಗಳು ಸಹ ಇದಕ್ಕೆ ಆವಶ್ಯಕವಾದ ಆಯುಧಗಳಾಗಿವೆ. ಇವುಗಳ ಮೂಲಕವೇ – إن شاء الله (ಅಲ್ಲಾಹನು ಇಚ್ಛಿಸಿದರೆ) ವಿಜಯ ಸಿಗುವುದು. ದುಆಗಳು ಅಂಗೀಕರಿಸಲ್ಪಡಲು ಮತ್ತು ಅಲ್ಲಾಹನ ಸಾಮೀಪ್ಯ ಮತ್ತು ಅನುಗ್ರಹಗಳನ್ನು ಗಳಿಸಲು ಅಲ್ಲಾಹನು ತನ್ನ ವಚನ ಮೂಲಕ ಪವಿತ್ರ ಖುರ್‌ಆನ್‌ನಲ್ಲಿ ನೀಡಿದ ಆಜ್ಞೆಯಂತೆ ಹಝ್ರತ್ ಮುಹಮ್ಮದ್ ರಸೂಲರಿಗೆ[ಸ] ದುರೂದ್ ದುಆ ಮಾಡಬೇಕು. ವಿವಿಧ ಹದೀಸುಗಳನ್ನು ಸಹ ನಾವು ನೋಡಿದೆವು. ಹಝ್ರತ್ ಮುಹಮ್ಮದ್ ರಸೂಲರಿಗೆ[ಸ] ದುರೂದ್ ಅರ್ಪಿಸದೆ ಜಯವು ಸಾಧ್ಯವಾಗದು. ಈ ಸ್ಥಾನ ಲಭಿಸಿದುದು ದುರೂದ್ ದುಆ ಮಾಡಿದ ಕಾರಣದಿಂದಾಗಿದೆ ಎಂದು ಹಝ್ರತ್ ಮಸೀಹ್ ಮೌಊದರೂ[ಅ] ಹೇಳಿದ್ದಾರೆ. ಇಸ್ಲಾಮಿನ ಮುಂದಿನ ಜಯಗಳೊಂದಿಗೆ ಸಹ ಇದಕ್ಕೆ ವಿಶಿಷ್ಟ ಸಂಬಂಧವಿದೆ. ಅಲ್ಲಾಹನು ತನ್ನನ್ನು ಮಹ್‌ದೀ ಮಸೀಹ್ ಆಗಿ ಲೋಕಕ್ಕೆ ಕಳುಹಿಸಿದ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ವಿವರಿಸುತ್ತಾರೆ:


"ನನಗೆ ಅನಂತರ ದೊರೆತ ಇಲ್‌ಹಾಮ್ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದಿನ್ ಸಯ್ಯಿದಿ ವುಲ್‌ದಿ ಆದಮ ವ ಖಾತಮನ್ನಬಿಯ್ಯೀನ್. (ಮುಹಮ್ಮದ್ ಮತ್ತು ಅವರ ಕುಟುಂಬಕ್ಕೆ ಸೇರಿದವರಿಗೆ ದುರೂದ್ ಪ್ರಾರ್ಥನೆ ಮಾಡು. ಅವರು ಆದಮ್ ಸಂತಾನಗಳ ನಾಯಕ ಮತ್ತು ಖಾತಮುಲ್ ಅಂಬಿಯಾ ಆಗಿದ್ದಾರೆ.)

"ಎಲ್ಲ ಸ್ಥಾನಗಳು ಮತ್ತು ಅನುಗ್ರಹಗಳು ಈ ದುಆದ ಮೂಲಕವೇ ಲಭಿಸಿದುವು ಮತ್ತು ಅವರನ್ನು ಪ್ರೀತಿಸಿದ ಕಾರಣದಿಂದ ಲಭಿಸಿದುವು ಎಂಬುದಕ್ಕೆ ಇದು ಸೂಚನೆಯಾಗಿದೆ. ಸುಬ್‌ಹಾನಲ್ಲಾಹ್ –ಅಲ್ಲಾಹನು ಪರಿಶುದ್ಧನು. ಸೃಷ್ಟಿಗಳಲ್ಲಿ ಶ್ರೇಷ್ಠರಾದ ಈ ಮಹಾನುಭಾವರಿಗೆ ಅಲ್ಲಾಹನ ಸನ್ನಿಧಿಯಲ್ಲಿ ಎಷ್ಟು ಉನ್ನತ ಸ್ಥಾನಮಾನಗಳಿವೆ! ಅವರನ್ನು ಪ್ರೀತಿಸುವವನು ಅಲ್ಲಾಹನ ಪ್ರೀತಿಗೆ ಪಾತ್ರನಾಗುತ್ತಾನೆ. ಅವರ ಸೇವಕನಿಗೆ ಲೋಕವು ಸೇವಕನಾಗುತ್ತದೆ. ನನಗೆ ಒಂದು ವಿಷಯ ನೆನಪಿಗೆ ಬರುತ್ತಿದೆ. ಒಂದು ರಾತ್ರಿ ಈ ವಿನೀತ ಎಷ್ಟು ಸಾರಿ ದುರೂದ್ ಪ್ರಾರ್ಥನೆ ಮಾಡಿದನೆಂದರೆ ಹೃದಯ ಮತ್ತು ಜೀವ ಅದರಿಂದ ಭರಿತವಾಯಿತು. ಅದೇ ರಾತ್ರಿ ಸ್ವಪ್ನದಲ್ಲಿ ನಾನು ಕಂಡೆನು – ಶುದ್ಧನೀರಿನ ರೂಪದಲ್ಲಿ ಪ್ರಕಾಶದ ಹೂಜೆಗಳನ್ನು ಈ ವಿನೀತನ ಮನೆಗೆ ದೇವದೂತರು ತಂದಿರುವರು ಮತ್ತು ಅವರಲ್ಲೊಬ್ಬರು ಹೇಳಿದರು: "ಇದು ನೀನು ಮುಹಮ್ಮದ್‌ರ[ಸ] ಕಡೆಗೆ ಕಳುಹಿಸಿದ ಅನುಗ್ರಹಗಳೇ ಆಗಿವೆ."

"ಇದೇ ರೀತಿ ಇನ್ನೊಂದು ಅದ್ಭುತ ಸಂಭವ ನೆನಪಿಗೆ ಬರುತ್ತಿದೆ. ನನಗೆ ಸಂದೇಶವಾಣಿ ಲಭಿಸಿತು. ಅದರ ಅರ್ಥ ಹೀಗೆ: ದೇವದೂತರ ಕೂಟದಲ್ಲಿ ವಾಗ್ವಾದ ನಡೆಯುತ್ತಿದೆ. ಧರ್ಮದ ಪುನಶ್ಚೇತನಕ್ಕೋಸ್ಕರ ದೇವನ ನಿರ್ಧಾರವಾಗಿದೆ. ಆದರೆ ಧರ್ಮವನ್ನು ಪುನರುಜ್ಜೀವ ಗೊಳಿಸುವವನು ಯಾರೆಂಬ ಬಗ್ಗೆ ಇಷ್ಟರವರೆಗೆ ಸ್ಪಷ್ಟವಾಗಿಲ್ಲ. ಆದುದರಿಂದ ಅವರು ಭಿನ್ನಾಭಿಪ್ರಾಯದಲ್ಲಿದ್ದಾರೆ. ಅದೇ ಸಂದರ್ಭದಲ್ಲಿ ಧರ್ಮವನ್ನು ಪುನಶ್ಚೇತನ ಮಾಡುವ ಒಬ್ಬನನ್ನು ಜನರು ಹುಡುಕುತ್ತಿರುವುದಾಗಿ ನಾನು ಸ್ವಪ್ನದಲ್ಲಿ ಕಂಡೆನು. ಒಬ್ಬ ಈ ವಿನೀತನ ಮುಂದೆ ಬಂದು "ಹಾಧಾ ರಜುಲುನ್ ಯುಹಿಬ್ಬು ರಸೂಲಲ್ಲಾಹ್" – ಈ ಪುರುಷ ಅಲ್ಲಾಹನ ಸಂದೇಶವಾಹಕರನ್ನು ಪ್ರೀತಿಸುವವನಾಗಿದ್ದಾನೆ ಎಂದು ಹೇಳಿದನು. ಈ ಮಾತಿನ ಅರ್ಥವೇನೆಂದರೆ, ಧರ್ಮ ಪುನಶ್ಚೇತನ ಮಾಡುವ ಈ ಹುದ್ದೆಗೆ ಶರತ್ತು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಪ್ರೀತಿಸುವುದಾಗಿದೆ. ಈ ವ್ಯಕ್ತಿಯಲ್ಲಿ ಅದು ಇದೆ.

"ಮೇಲೆ ವಿವರಿಸಿದ ಇಲ್‌ಹಾಮ್‌ನಲ್ಲಿ ಹಝ್ರತ್ ಮುಹಮ್ಮದ್ ರಸೂಲರ(ಸ) ಆಲ್‌ಗೆ (ಕುಟುಂಬಕ್ಕೆ) ದುರೂದ್ ಪ್ರಾರ್ಥನೆ ಮಾಡಲು ಆಜ್ಞಾಪಿಸಲಾಗಿದೆ. ಇದರಲ್ಲಿ ಇರುವ ರಹಸ್ಯವೇನೆಂದರೆ, ಅಲ್ಲಾಹನ ಅನುಗ್ರಹಗಳನ್ನು ಗಳಿಸಲು ಹಝ್ರತ್ ಪೈಗಂಬರರ(ಸ) ಕುಟುಂಬವನ್ನು ಪ್ರೀತಿಸುವುದು ಅತ್ಯಾವಶ್ಯಕವಾಗಿದೆ. ಯಾರು ಮಹೋನ್ನತನಾದ ಅಲ್ಲಾಹನ ಸಾಮೀಪ್ಯ ಗಳಿಸಿದವರಲ್ಲಿ ಸೇರುವನೋ ಅವನು ಆ ಪರಿಶುದ್ಧರ ವಾರೀಸುದಾರನಾಗುತ್ತಾನೆ ಮತ್ತು ಎಲ್ಲ ಜ್ಞಾನಗಳಲ್ಲೂ ವಿದ್ಯೆಗಳಲ್ಲೂ ಅವರ ವಾರೀಸುದಾರನಾಗುತ್ತಾನೆ." **(ಬರಾಹೀನೆ ಅಹ್ಮದಿಯ್ಯ– ಹಾಶಿಯದರ್ ಹಾಶಿಯ–3. ರೂಹಾನೀ ಖಝಾಇನ್ – ಸಂಪುಟ 1 ಪುಟ 597–598)**

## ಇಸ್ಲಾಮಿಗೆ ನಷ್ಟವಾದ ವೈಭವವನ್ನು ಪುನಃಸ್ಥಾಪಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿ ಪ್ರಯತ್ನಿಸಬೇಕಾದುದು ಆವಶ್ಯಕ

ಇಸ್ಲಾಮಿನ ಪುನಶ್ಚೇತನಕ್ಕೋಸ್ಕರ, ಇಸ್ಲಾಮ್‌ಗೆ ನಷ್ಟವಾಗಿರುವ ವೈಭವವನ್ನು ಮರಳಿ ತರಲಿಕ್ಕೋಸ್ಕರ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ಮಾಡುವ ದೋಷಾರೋಪಗಳನ್ನು ಪ್ರತಿರೋಧಿಸಲು ಅಲ್ಲಾಹನು ಯಾವ ಪಹಿಲ್ವಾನನ್ನು ನಿಲ್ಲಿಸಿರುವನೋ ಅವರನ್ನು ಹಿಂಬಾಲಿಸುವ ಮೂಲಕ ಮತ್ತು ಅಲ್ಲಾಹನು ಅವರಿಗೆ ನೀಡಿದ ಸಾಕ್ಷ್ಯಾಧಾರಗಳ ಮೂಲಕ ಹಾಗೂ ಅವರ ಉಪದೇಶಗಳನ್ನು ಅನುಸರಿಸುವ ಮೂಲಕ ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ರಸೂಲರ(ಸ) ಪತಾಕೆ ಪೂರ್ಣ ಭವ್ಯತೆಯಿಂದ ಲೋಕದಲ್ಲಿ ಹಾರಾಡುವುದು –  (ಅಲ್ಲಾಹನು ಇಚ್ಛಿಸಿದರೆ) ಅದು ಹಾರಾಡುತ್ತಲೇ ಇರುವುದು.

ಹಝ್ರತ್ ಮಸೀಹ್ ಮೌಊದ್(ಅ) ಈ ಕಾಲಘಟ್ಟದ ಮಹತ್ವದ ಬಗ್ಗೆ ಜನರ ಗಮನಹರಿಸುತ್ತಾ ಹೇಳಿದುದರ ಸಾರಾಂಶ ಹೀಗಿದೆ: ಈಗ ಇಸ್ಲಾಮ್ ಧರ್ಮಕ್ಕೆ ಕಠಿಣ ಕಷ್ಟದ ದಿನಗಳಾಗಿವೆ. ಆದುದರಿಂದ ಇಸ್ಲಾಮಿಗೆ ನಷ್ಟವಾದ ವೈಭವವನ್ನು ಮರಳಿ ತರಲು ಅಲ್ಲಾಹನು ಒಂದು ಜಮಾಅತನ್ನು ಸ್ಥಾಪಿಸಿದ್ದಾನೆ. ಆದುದರಿಂದ ಮುಸ್ಲಿಮರು

ತಮ್ಮ ಹಟವನ್ನು ಬಿಟ್ಟು ಬಿಡಬೇಕು. ಅವರು ಯೋಚಿಸಬೇಕು – ಹಝ್ರತ್ ಮುಹಮ್ಮದ್ ರಸೂಲರ(ಸ) ಮೇಲೆ ಎಲ್ಲ ಕಡೆಗಳಿಂದಲೂ ದೂಷಣೆ ನಡೆಯುತ್ತಾ ಇರುವಾಗ ಅವರ ಗೌರವವನ್ನು ಕಾಪಾಡಲು ಅಲ್ಲಾಹನು ಉತ್ಸಾಹ ತೋರಿಸದೆ ಇರುವನೇ? ವಾಸ್ತವಿಕವಾಗಿ ಅವನು ಅವರಿಗೆ ಶುಭಾಶೀರ್ವಾದ ನೀಡುತ್ತಾ ಇರುತ್ತಾನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳಿದುದರ ಪೂರ್ಣ ರೂಪ ಹೀಗಿದೆ:

"ಈ ಕಾಲಘಟ್ಟ ಬಹಳ ಅನುಗ್ರಹಭರಿತವಾಗಿದೆ. ಕಲಹಪೀಡಿತ ಈ ದಿನಗಳಲ್ಲಿ ತನ್ನ ಅನುಗ್ರಹದಿಂದ ಹಝ್ರತ್ ಮುಹಮ್ಮದ್ ರಸೂಲರ(ಸ) ಶ್ರೇಷ್ಠತೆಯನ್ನು ಪ್ರಕಟಿಸಲು ಅಲ್ಲಾಹನು ಅನುಗ್ರಹೀತ ನಿರ್ಧಾರ ಮಾಡಿದನು. ಇಸ್ಲಾಮ್‌ಗೆ ನೆರವು ನೀಡುವ ವ್ಯವಸ್ಥೆಯನ್ನು ತನ್ನ ಅದೃಶ್ಯ ಶಕ್ತಿ ಮೂಲಕ ಮಾಡಿದನು ಮತ್ತು ಒಂದು ಜಮಾಅತನ್ನು ಸ್ಥಾಪಿಸಿದನು. ಇಸ್ಲಾಮಿನ ಬಗ್ಗೆ ತಮ್ಮ ಹೃದಯಗಳಲ್ಲಿ ನೋವನ್ನು ಹೊಂದಿದವರೊಂದಿಗೆ, ಅವರಿಗೆ ಇಸ್ಲಾಮಿನ ಬಗ್ಗೆ ಗೌರವ ಭಾವನೆ ಇದ್ದರೆ, ನಾನು ಕೇಳುತ್ತೇನೆ – ಅವರು ಹೇಳಲಿ, ಈ ಕಾಲಘಟ್ಟಕ್ಕಿಂತ ಕೆಟ್ಟ ಕಾಲಘಟ್ಟ ಇದರ ಮೊದಲು ದಾಟಿ ಹೋಗಿದೆಯೇ? ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ಬೈದು ಅಪಮಾನ ಮಾಡಲಾಗಿದೆ ಮತ್ತು ಪವಿತ್ರ ಖುರ್‌ಆನನ್ನು ನಿಂದಿಸಲಾಗಿದೆ. ನನಗೆ ಮುಸ್ಲಿಮರ ಸ್ಥಿತಿಯ ಬಗ್ಗೆ ಅತ್ಯಂತ ಹೆಚ್ಚು ವಿಷಾದವೂ ದುಃಖವೂ ಆಗುತ್ತಿದೆ. ಕೆಲವು ಸಾರಿ ದುಃಖದಿಂದ ನಾನು ಅಸ್ವಸ್ಥನಾಗುತ್ತೇನೆ. ಈ ಅಪಮಾನವನ್ನು ಅರಿತುಕೊಳ್ಳುವ ಪ್ರಜ್ಞೆ ಕೂಡ ಅವರಿಗಿಲ್ಲವಾಗಿದೆ. ಏನು, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಗೌರವ ಕಾಪಾಡುವ ಕಾಳಜಿ ಅಲ್ಲಾಹನಿಗಿರಲಿಲ್ಲವೇ? ಇಷ್ಟೆಲ್ಲ ಬೈಗಳನ್ನು ಆಲಿಸಿ ಕೂಡ ಅಲ್ಲಾಹನು ಇಸ್ಲಾಮಿನ ವಿರೋಧಿಗಳ ಬಾಯಿ ಮುಚ್ಚಿಸಲು ಒಂದು ದೈವಿಕ ಜಮಾಅತನ್ನು ಸ್ಥಾಪಿಸಿ ಲೋಕದಲ್ಲಿ ಹಝ್ರತ್ ಪೈಗಂಬರರ(ಸ) ಶ್ರೇಷ್ಠತೆ ಮತ್ತು ಪರಿಶುದ್ಧತೆಯನ್ನು ಪ್ರಚಾರ ಮಾಡಲು ಏರ್ಪಾಡು ಮಾಡದೆ ಬಿಟ್ಟು ಬಿಡುವನೇ? ಅಲ್ಲಾಹನು ಮತ್ತು ಅವನ ದೂತರು ಹಝ್ರತ್ ಪೈಗಂಬರರಿಗೆ(ಸ) ಶುಭಾಶೀರ್ವಾದ ನೀಡುತ್ತಾ ಇರುವಾಗ, ಅವರು ಅಪಮಾನಿತರಾದಾಗ ಅವರ ಗೌರವ ಕಾಪಾಡಲು ಈ ಜಮಾಅತನ್ನು ಅಲ್ಲಾಹನು ಸ್ಥಾಪಿಸಿದನು."

**(ಮಲ್‌ಫೂಝಾತ್ – ಭಾಗ 3 ಪುಟ 8–9 ಹೊಸ ಮುದ್ರಣ)**

ತಮ್ಮನ್ನು ಹಝ್ರತ್ ಮಸೀಹ್ ಮೌಊದ್‌ರೊಂದಿಗೆ(ಅ) ಸಂಬಂಧಿಸಿದವರೆಂದು ಹೇಳುವವರ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ ಎಂದು ಮೇಲಿನ ಉಲ್ಲೇಖದಿಂದ ತಿಳಿಯಬಹುದು.

ಹಝ್ರತ್ ಮುಹಮ್ಮದ್ ರಸೂಲರ(ಸ) ವಿರುದ್ಧ ನಿಂದನೆಯ ಬಿರುಗಾಳಿ ಬೀಸುತ್ತಿರುವಾಗ ಅಲ್ಲಾಹನ ದೂತರು ಅವರಿಗೆ ಶುಭಾಶೀರ್ವಾದ ಕೋರುತ್ತಾ ಇರಬಹುದು. ಅವರು ಶುಭಾಶೀರ್ವಾದ ಕೋರುತ್ತಲೇ ಇರುವರು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸತ್ಯಸಂಧ ಪ್ರೇಮಿ ಮತ್ತು ಈ ಕಾಲಘಟ್ಟದ ಇಮಾಮ್ ಆಗಿರುವವರ ಜಮಾಅತಿಗೆ ಸೇರಿದವರಾದ ನಾವು ನಮ್ಮ ಪ್ರಾರ್ಥನೆಗಳಲ್ಲಿ ದುರೂದನ್ನು ಅಧಿಕಗೊಳಿಸಿ ಸತ್ಯಭರಿತ ಹೃದಯದೊಂದಿಗೆ ಅದನ್ನು ಹರಡಬೇಕು. ವಾತಾವರಣದ ಪ್ರತಿಯೊಂದು

ಕಣ ಕಣವೂ ದುರೂದಿನಿಂದ ತುಂಬಲಿ. ನಮ್ಮ ಎಲ್ಲ ಪ್ರಾರ್ಥನೆಗಳು ದುರೂದ್ ಮೂಲಕ ಅಲ್ಲಾಹನ ದರಬಾರಿಗೆ ತಲಪಲಿ ಮತ್ತು ಸ್ವೀಕಾರ ಪಡೆಯುವಂತಾಗಲಿ. ಹಝ್ರತ್ ಮುಹಮ್ಮದ್ ರಸೂಲರೊಂದಿಗೆ(ಸ) ನಮಗಿರುವ ಪ್ರೀತಿಯ ಪ್ರಕಟಣೆ ಹೀಗೆ ಆಗಬೇಕು. ಅವರ ಕುಟುಂಬದೊಂದಿಗೆ ಸಹ ನಮ್ಮ ಪ್ರೀತಿಯ ಪ್ರಕಟಣೆ ಹೀಗೆಯೇ ಆಗಬೇಕು. ಅಲ್ಲಾಹನು ಮುಸ್ಲಿಮ್ ಸಮುದಾಯಕ್ಕೆ ಬುದ್ಧಿ ನೀಡಲಿ, ಅರಿವು ನೀಡಲಿ. ಅವರು ಅಲ್ಲಾಹನು ಕಳುಹಿಸಿದ ಮಹಾತ್ಮರನ್ನು ಗುರುತಿಸುವಂತಾಗಲಿ. ಅವರು ಹಝ್ರತ್ ಮುಹಮ್ಮದ್ ರಸೂಲರ(ಸ) ಆಧ್ಯಾತ್ಮಿಕ ಪುತ್ರನ ಈ ಜಮಾಅತಿನಲ್ಲಿ ಸೇರಿಕೊಂಡು ರಾಜಿ, ಶಾಂತಿ ಮತ್ತು ಪ್ರೀತಿಯ ವಾತಾವರಣವನ್ನು ಪುನಃ ಸ್ಥಾಪಿಸಿ ಲೋಕದಲ್ಲಿ ಹಝ್ರತ್ ಪೈಗಂಬರರ(ಸ) ಸ್ಥಾನವನ್ನು ಉನ್ನತಗೊಳಿಸುವವರಾಗಲಿ. ಅಲ್ಲಾಹನು ಈ ಜನರಿಗೆ ಬುದ್ಧಿಯನ್ನು ದಯಪಾಲಿಸಲಿ. ತಾವು ಹಝ್ರತ್ ಪೈಗಂಬರರೊಂದಿಗೆ(ಸ) ಸಂಬಂಧ ಹೊಂದಿದವರೆಂದು ಹೇಳಿಕೊಂಡು ಹದಿನಾಲ್ಕು ನೂರು ವರ್ಷಗಳ ನಂತರ ಸಹ ಮುಹರ್ರಮ್ ತಿಂಗಳಲ್ಲಿ ಮುಸ್ಲಿಮರು ಮುಸ್ಲಿಮರ ರಕ್ತ ಹರಿಸುತ್ತಿದ್ದಾರೆ. ಅವರು ಪಾಠ ಕಲಿಯಲೇ ಇಲ್ಲ. ಈಗ ಸಹ ರಕ್ತಪಾತ ಮಾಡುತ್ತಾ ಇರುತ್ತಾರೆ. ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ. ಅವರು ಇಂತಹ ಕೆಲಸ ಮಾಡದಿರಲಿ ಮತ್ತು ತಮ್ಮ ಹೃದಯಗಳಲ್ಲಿ ದೇವ ಭಯ ಉಂಟುಮಾಡಲಿ ಹಾಗೂ ಇಸ್ಲಾಮಿನ ನೈಜ ಉಪದೇಶಗಳನ್ನು ಅನುಸರಿಸುವವರಾಗಲಿ. ಅವರು ಹೀಗೆಲ್ಲ ಮಾಡುವುದು ಈ ಕಾಲಘಟ್ಟದ ಇಮಾಮರನ್ನು ಗುರುತಿಸದ ಕಾರಣದಿಂದಾಗಿದೆ; ಅವರು ಹಝ್ರತ್ ಪೈಗಂಬರರ(ಸ) ಆಜ್ಞೆಯನ್ನು ತಿರಸ್ಕರಿಸಿದ ಕಾರಣದಿಂದಾಗಿದೆ.

ಈಗ ಪ್ರತಿ ಅಹ್ಮದಿಗೆ ಬಹಳ ದೊಡ್ಡ ಹೊಣೆಗಾರಿಕೆ ಇದೆ. ಅಹ್ಮದಿಯರು ಈ ಕಾಲದ ಇಮಾಮರನ್ನು ಗುರುತಿಸಿದ್ದಾರೆ. ಅವರು ಹಝ್ರತ್ ಮುಹಮ್ಮದ್ ರಸೂಲರಿಗೋಸ್ಕರ(ಸ) ಬಹಳ ದುರೂದ್ ಪ್ರಾರ್ಥನೆ ಮಾಡಬೇಕು. ತಮ್ಮನ್ನು ಮತ್ತು ಇತರ ಮುಸ್ಲಿಮರನ್ನು ವಿನಾಶದಿಂದ ರಕ್ಷಿಸಲು ಅಲ್ಲಾಹನನ್ನು ಬೇಡಿಕೊಳ್ಳಬೇಕು.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ನಮಗೆ ಇರುವ ಪ್ರೀತಿ ನಮ್ಮೊಂದಿಗೆ ಆವಶ್ಯಪಡುವುದೇನೆಂದರೆ, ನಾವು ಮುಸ್ಲಿಮ್ ಸಮುದಾಯಕ್ಕೋಸ್ಕರ ಪ್ರಾರ್ಥಿಸಬೇಕು. ಅನ್ಯರ ಉದ್ದೇಶಗಳು ಸರಿಯಲ್ಲ. ಇನ್ನೆಷ್ಟು ಕಷ್ಟಗಳಲ್ಲೂ ಪರೀಕ್ಷೆಗಳಲ್ಲೂ ವಿಪತ್ತುಗಳಲ್ಲೂ ಈ ಮುಸ್ಲಿಮರು ಹಿಡಿಗೂಡಲ್ಪಡುವರು ಎಂದು ತಿಳಿಯದು. ಅವರ ವಿರುದ್ಧ ಏನೆಲ್ಲ ಯೋಜನೆಗಳು ರೂಪಿಸಲ್ಪಡುತ್ತವೆ ಎಂದು ತಿಳಿಯದು. ಅಲ್ಲಾಹನೇ ದಯೆದೋರಲಿ.

ಅಲ್ಲಾಹನು ನಮ್ಮನ್ನು ಯಾವಾಗಲೂ ನೇರಮಾರ್ಗದಲ್ಲಿ ನಡೆಸುತ್ತಾ ಇರಲಿ. ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ದಾಸರಾಗೋಣ. ನಮಗೆ ಈ ಕಾಲಘಟ್ಟದ ಇಮಾಮರನ್ನು ನಂಬುವ ಭಾಗ್ಯ ನೀಡಿದುದಕ್ಕೆ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸೋಣ. ನಾವು ನಂಬಿದ ನಂತರ ನಮ್ಮ ಕರ್ತವ್ಯಗಳನ್ನು ಈಡೇರಿಸುವ ಸೌಭಾಗ್ಯ ನಮಗೆ ಅಲ್ಲಾಹನು ದಯಪಾಲಿಸಲಿ. ಯಾವಾಗಲೂ ನಮ್ಮನ್ನು ಅಲ್ಲಾಹನಿಗೆ ಪ್ರಿಯವಾದ ಮಾರ್ಗದಲ್ಲಿ ನಡೆಯುವವರನ್ನಾಗಿ ಮಾಡಲಿ. ❖❖❖

# ಲಂಡನ್‌ನಿಂದ ಪ್ರಕಟವಾಗುವ “ಜಂಗ್” ಎಂಬ ಉರ್ದು ಪತ್ರಿಕೆಯಲ್ಲಿ ಅಹ್ಮದಿಯಾ ಜಮಾಅತ್ ಬಗ್ಗೆ ಸುಳ್ಳು, ನಿರಾಧಾರ ವರದಿ ಪ್ರಕಟವಾದುದು ದುಷ್ಟ ವರ್ತನೆಯೂ ಕೆಡುಕನ್ನು ಉತ್ತೇಜಿಸುವಂತಹದೂ ಆಗಿದೆ

## ಜುಮುಅ ಖುತ್‌ಬ 3–3–2006

ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹುಝೂರ್ ಹೀಗೆ ಹೇಳಿದರು:

ಲಂಡನ್‌ನಿಂದ ಪ್ರಕಟವಾಗುವ “ಜಂಗ್” ಪತ್ರಿಕೆಯಲ್ಲಿ ನಿನ್ನೆ ಪ್ರಕಟವಾದಂತಹ ವರದಿಗೆ ಅಹ್ಮದಿಯಾ ಜಮಾಅತ್‌ನ ವಿಶ್ವಾಸಾದರ್ಶಗಳೊಂದಿಗೆ ಯಾವ ಸಂಬಂಧವೂ ಇಲ್ಲ. ಈ ವರದಿಯನ್ನು ಕೇವಲ ಉದ್ಧಟತನದಿಂದ ಪ್ರಕಟಿಸಲಾಗಿದೆ. ಇದರಲ್ಲಿ ಪ್ರಕಟಿಸಲಾದುದು ನಮ್ಮ ವಿಶ್ವಾಸಾದರ್ಶಗಳಿಗೆ ವಿರುದ್ಧವಾಗಿದೆ ಮಾತ್ರವಲ್ಲ, ಅದರಲ್ಲಿ ವಿವರಿಸಲಾದ ಘಟನೆಗೆ ವಾಸ್ತವಿಕತೆಯೊಂದಿಗೆ ಯಾವ ಸಂಬಂಧವೂ ಇಲ್ಲ. ಹಾಗೆ ಸಂಭವಿಸಿಯೇ ಇಲ್ಲ. ಪಾಕಿಸ್ತಾನದಲ್ಲಿಯೂ ಈ ವರದಿಯನ್ನು ಉಲ್ಲೇಖಿಸಿ ಸಮಾಚಾರಗಳು ಪ್ರಕಟವಾಗಿರಬಹುದು. ಈ ಪತ್ರಿಕೆ ತನ್ನ ಮಾರಾಟವನ್ನು ವರ್ಧಿಸಲು ಇಂತಹ ವರದಿಗಳನ್ನು ಪ್ರಕಟಿಸಲು ಬಹಳ ಉತ್ಸಾಹ ತೋರಿಸುತ್ತದೆ. ಪತ್ರಿಕೆಯ ಪ್ರಸಾರವನ್ನು ವರ್ಧಿಸಲು ಅನೈತಿಕ ಕೃತ್ಯಗಳನ್ನು ಮಾಡುತ್ತದೆ ಮತ್ತು ಸುಳ್ಳುಗಳ ಮೂಟೆಗಳನ್ನು ಪ್ರಸಿದ್ಧೀಕರಿಸುವ ಸ್ವಭಾವ ಹೊಂದಿದೆ. ಪಾಕಿಸ್ತಾನದಲ್ಲಿ ಪ್ರಕಟವಾಗುವ “ಜಂಗ್” ಪತ್ರಿಕೆಯ ಮುದ್ರಣದ ಬಗ್ಗೆ ಹೇಳುವುದಾದರೆ, ಅದು ನಮ್ಮ ಬಗ್ಗೆ ಅವಿವೇಕಭರಿತವಾಗಿಯೂ ಸುಳ್ಳಿನಿಂದಲೂ ತುಂಬಿದ ವರದಿಗಳನ್ನು ಪ್ರಕಟಿಸುತ್ತದೆ ಎಂದು ನಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಕೆಲವು ದಿನಗಳ ಹಿಂದೆ ಡೆನ್ಮಾರ್ಕ್ ಪತ್ರಿಕೆಯಲ್ಲಿ ನಿರರ್ಥಕ ಅನುಚಿತ ವ್ಯಂಗ್ಯ ಚಿತ್ರಗಳು ಪ್ರಕಟಗೊಂಡಿದ್ದವು. ಲೋಕದ ಬೇರೆ ದೇಶಗಳಲ್ಲೂ ಈ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಲಾಗಿತ್ತು. ಈ ಕಾರಣದಿಂದ ಮುಸ್ಲಿಮರಲ್ಲಿ ಅತ್ಯಂತ ಹೆಚ್ಚು ದುಃಖ ಮತ್ತು ಕೋಪದ ಅಲೆ ಉದ್ಭವಿಸಿತು. ಹರತಾಳಗಳು ನಡೆಯುತ್ತಿದ್ದುವು. ಪ್ರತಿಭಟನೆಯ ಮೆರವಣಿಗೆಗಳನ್ನು ನಡೆಸುತ್ತಿದ್ದರು. ಕೋಪವು ಪ್ರಕಟಿಸಲ್ಪಡುವಾಗ ಅದನ್ನು ಹತೋಟಿಗೆ ತರುವವರು ಇಲ್ಲದಿದ್ದರೆ, ಅದರ ಪ್ರವಾಹವನ್ನು ತಡೆಯುವವರು ಯಾರೂ ಇಲ್ಲದಿದ್ದರೆ, ಅದನ್ನು ಸರಿಯಾದ ದಿಕ್ಕಿಗೆ ಚಲಾಯಿಸುವವರು ಯಾರೂ ಇಲ್ಲದಿರುವಾಗ ಇಂತಹ

ಪ್ರತಿಕ್ರಿಯೆಗಳು ಸಂಭವಿಸುತ್ತವೆ. ಏಕೆಂದರೆ ಮುಸ್ಲಿಮರು ನಮಾಝ್ ಮಾಡುವವರಾಗಿದ್ದರೂ ನಮಾಝ್ ಮಾಡದವರಾಗಿದ್ದರೂ ಧಾರ್ಮಿಕ ಕರ್ತವ್ಯಗಳನ್ನು ಈಡೇರಿಸುವವರಾಗಿದ್ದರೂ ಈಡೇರಿಸದವರಾಗಿದ್ದರೂ ಅವರು ಹೇಗಿದ್ದರೂ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವವನ್ನು ಕಾಪಾಡುವ ಪ್ರಶ್ನೆ ಬಂದಾಗ ಬಹಳ ಅಭಿಮಾನ ಪ್ರಕಟಿಸುವವರಾಗಿರುತ್ತಾರೆ. ಹಝ್ರತ್ ಪೈಗಂಬರರ(ಸ) ಗೌರವವನ್ನು ರಕ್ಷಿಸಲು ಸಾಯಲು ಸಹ ಸಿದ್ಧರಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಜಂಗ್ ಪತ್ರಿಕೆ ಈ ಸಮಾಚಾರ ಪ್ರಕಟಿಸಿದುದು, ಅದು ಸಹ ಶುಕ್ರವಾರಕ್ಕೆ ಒಂದು ದಿನ ಮೊದಲು ಪ್ರಕಟಿಸಿದುದು ಅಹ್ಮದಿಯಾ ಜಮಾಅತ್‌ಗೆ ವಿರುದ್ಧವಾಗಿ ವಾತಾವರಣವನ್ನು ಸೃಷ್ಟಿಸಲಿಕ್ಕಾಗಿ ಮಾತ್ರವಾಗಿದೆ. ಸಾಮಾನ್ಯವಾಗಿ ಶುಕ್ರವಾರ ಹರತಾಳ ಆಚರಿಸುವ ಬಗ್ಗೆ, ಮೆರವಣಿಗೆಗಳನ್ನು ಹೊರಡಿಸುವ ಬಗ್ಗೆ ಮತ್ತು ಇತರ ರೀತಿಯ ಪ್ರತಿಭಟನೆಗಳ ಬಗ್ಗೆ ಕಾರ್ಯ ಯೋಜನೆ ಹೆಚ್ಚಾಗಿ ರೂಪಿಸಲ್ಪಡುತ್ತದೆ. ಜಂಗ್ ಪತ್ರಿಕೆ ಮಾಡಿದುದು ಅತ್ಯಂತ ಅಕ್ರಮಕರವೂ ಗಲಭೆ ಗೊಂದಲಗಳನ್ನು ಪ್ರಚೋದಿಸುವಂತಹದೂ ಆಗಿರುತ್ತದೆ. ಅಜ್ಞಾನಿಗಳಾದ ಮುಸ್ಲಿಮರನ್ನು ಪ್ರಚೋದಿಸಿ ಅಹ್ಮದಿಯರನ್ನು ಹಿಂಸಾಚಾರಗಳಿಗೆ ಗುರಿಪಡಿಸುವುದು ಈ ಸಮಾಚಾರದ ಉದ್ದೇಶವಾಗಿದೆ. ಅವರು ಯಾವಾಗಲೂ ಪ್ರಯತ್ನಪಡುವುದು ಅಹ್ಮದಿಯರ ವಿರುದ್ಧ ಅಜ್ಞಾನಿಗಳೂ ಅಲ್ಪಜ್ಞಾನಿಗಳೂ ಆಗಿರುವ ಮುಸ್ಲಿಮರನ್ನು ಪ್ರಚೋದಿಸಲು ಸಿಗುವ ಸಂದರ್ಭವನ್ನು ಕಳೆದುಕೊಳ್ಳಬಾರದೆಂದಾಗಿದೆ.

ನಿಮ್ಮಲ್ಲಿ ಅನೇಕರು ಪತ್ರಿಕೆಯ ಈ ವರದಿಯನ್ನು ಓದಿರಬಹುದು. ಆದರೆ ಎಲ್ಲರೂ ಓದಿರಲಿಕ್ಕಿಲ್ಲ. ಆದುದರಿಂದ ನಾನು ಆ ವರದಿಯನ್ನು ಓದಿ ಹೇಳುತ್ತೇನೆ.

ಕೋಪನ್ ಹೇಗನ್ ನಗರದ ಅವರ ವರದಿಗಾರ ಡಾಕ್ಟರ್ ಜಾವೇದ್ ಕನ್‌ವಲ್ ಹೀಗೆ ಹೇಳುತ್ತಾರೆ: "ಡೆನ್ಮಾರ್ಕ್ ಸರಕಾರದ ರಹಸ್ಯಾನ್ವೇಷಣೆ ವಿಭಾಗದ ಒಬ್ಬ ಅಧಿಕಾರಿ ತನ್ನ ಹೆಸರು, ಹುದ್ದೆ, ವಿಭಾಗವನ್ನು ರಹಸ್ಯವಾಗಿ ಇಡಬೇಕೆಂಬ ಷರತ್ತು ವಿಧಿಸಿ ವ್ಯಂಗ್ಯ ಚಿತ್ರಗಳಿಗೆ ಸಂಬಂಧಿಸಿ ಮಾತನಾಡುತ್ತಾ ಜಂಗ್ ಪತ್ರಿಕೆಗೆ ಹೀಗೆ ತಿಳಿಸಿದರು: 2005ರ ಸೆಪ್ಟಂಬರ್‌ನಲ್ಲಿ ಖಾದಿಯಾನಿಗಳ ವಾರ್ಷಿಕ ಸಮ್ಮೇಳನ ಡೆನ್ಮಾರ್ಕ್‌ನಲ್ಲಿ ಜರಗಿತ್ತು. ಅದರಲ್ಲಿ ಖಾದಿಯಾನಿಗಳ ಕೇಂದ್ರದ ಅಧಿಕಾರಿಗಳು ಭಾಗವಹಿಸಿದ್ದರು. ಆಗ ಖಾದಿಯಾನಿಗಳ ಒಂದು ಪ್ರತಿನಿಧಿ ಸಂಘ ಡೆನ್ಮಾರ್ಕ್‌ನ ಒಬ್ಬ ಸಚಿವರನ್ನು ಭೇಟಿ ಆದ ಸಂದರ್ಭದಲ್ಲಿ ಜಿಹಾದ್ ಬಗ್ಗೆ ಮಾತನಾಡುತ್ತಾ, "ಅವರೇ ಇಸ್ಲಾಮ್ ಧರ್ಮದ ನೈಜ ತತ್ವಗಳ ಪತಾಕೆ ಎತ್ತಿಕೊಂಡವರಾಗಿದ್ದಾರೆ ಎಂದು ಹೇಳಿತ್ತು." ಇಲ್ಲಿಯ ತನಕ ಸರಿಯಾಗಿದೆ. ನಾವು ಅವರಿಗೆ ವಿಶಿಷ್ಟವಾಗಿ ಹೇಳಿಲ್ಲ. ಆದರೆ ನಮ್ಮ ವಾದ ನಾವೇ ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಪ್ರಚಾರ ಮಾಡುವವರು ಎಂದಾಗಿದೆ.

ವರದಿ ಹೀಗೆ ಮುಂದುವರಿಯುತ್ತದೆ: "ಅವರ ಪ್ರವಾದಿ ಮಿರ್ಝಾ ಗುಲಾಮ್ ಅಹ್ಮದ್ ಜಿಹಾದನ್ನು ರದ್ದುಗೊಳಿಸಲಾಗಿದೆ ಎಂದು ಹೇಳಿದ್ದಾರೆ."

ಈ ವರದಿ ಸರಿಯಾಗಿದೆ. ಆದರೆ ಜಿಹಾದನ್ನು ರದ್ದುಗೊಳಿಸಿದುದು ಷರತ್ತುಬದ್ಧವಾಗಿ ಮಾತ್ರವಾಗಿದೆ.

ವರದಿ ಹೀಗೆ ಮುಂದುವರಿಯುತ್ತದೆ: "ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ

ಇಸ್ಲಾಮೀ ಆಜ್ಞೆಗಳನ್ನು ಬದಲಾಯಿಸಿದ್ದಾರೆ." ನಊಧುಬಿಲ್ಲಾಹ್– ನಾವು ಅಲ್ಲಾಹನ ಅಭಯ ಯಾಚಿಸುತ್ತೇವೆ. ಇದು ಸಂಪೂರ್ಣವಾಗಿ ಸುಳ್ಳು ದೋಷಾರೋಪವಾಗಿದೆ.

ವರದಿ ಹೀಗೆ ಮುಂದುವರಿಯುತ್ತದೆ: "ಈ ಕಾರಣದಿಂದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶಗಳೂ ಅವರ ಕಾಲಘಟ್ಟವೂ ಕೊನೆಗೊಂಡಿವೆ."

ಇದು ಪತ್ರಿಕೆಯ ಉದ್ಧಟತನದ ವರದಿಯಾಗಿದೆ. ನಊಧುಬಿಲ್ಲಾಹ್– ನಾವು ಅಲ್ಲಾಹನ ಅಭಯ ಯಾಚಿಸುತ್ತೇವೆ. ನಾವು ಇಂತಹ ವಿಶ್ವಾಸವನ್ನು ಹೊಂದಿಲ್ಲ.

ವರದಿ ಹೀಗೆ ಮುಂದುವರಿಯುತ್ತದೆ: "ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಅನುಸರಿಸುವವರು ಸೌದಿ ಅರೇಬಿಯಕ್ಕೆ ಸೀಮಿತಗೊಂಡಿದ್ದಾರೆಂದು ಖಾದಿಯಾನಿಗಳು ದೃಢಪಡಿಸಿಕೊಟ್ಟ ಕಾರಣ ಡೆನ್ಮಾರ್ಕಿನ ಪತ್ರಿಕೆ ಸೆಪ್ಟಂಬರ್ ದಿನಾಂಕ 30ರಂದು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಸಂಬಂಧಿಸಿ ಹನ್ನೆರಡು ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿತು. ಅದರ ಮೂಲ ಉದ್ದೇಶ ಜಿಹಾದ್ ಸಿದ್ಧಾಂತವನ್ನು ದೂಷಿಸುವುದಾಗಿತ್ತು. ಜನವರಿ ತನಕ ಖಾದಿಯಾನಿಗಳ ವಾದ ಸತ್ಯವೆಂದು ನಮಗೆ ನಂಬಿಕೆ ಇತ್ತೆಂದೂ ಜನವರಿ ತನಕ ಸೌದಿ ಅರೇಬಿಯಾದ ಹೊರತು ಬೇರೆ ಯಾವ ದೇಶವೂ ನಮ್ಮ ವಿರುದ್ಧ ಪ್ರತಿಭಟಿಸಲಿಲ್ಲವೆಂದೂ ಓಐಸಿ ಮೌನವಾಗಿ ಇದ್ದುದು ನಮ್ಮ ನಂಬಿಕೆಯನ್ನು ದೃಢಪಡಿಸಿತೆಂದೂ ಆ ಉನ್ನತ ಡ್ಯಾನಿಶ್ ಅಧಿಕಾರಿ ಹೇಳಿದರು. ಅವರು ಆ ಸಂದರ್ಶನದ ವೀಡಿಯೋವನ್ನು ನಮಗೆ ಕೇಳಿಸಿದರು. ಅದರಲ್ಲಿ ಡ್ಯಾನಿಶ್, ಉರ್ದು ಮತ್ತು ಇಂಗ್ಲಿಷ್ ಭಾಷೆಗಳ ಮಾತುಕತೆಗಳು ಇದ್ದುವು."

**('ಜಂಗ್' ದಿನ ಪತ್ರಿಕೆ, ಲಂಡನ್, 2–3–2006 ಪುಟ 1, 3)**

ಅಲ್ಲಿ ಮಾತುಕತೆ ಮೂರು ಭಾಷೆಗಳಲ್ಲಿ ನಡೆಯುತ್ತಿತ್ತು ಎಂಬಂತೆ ಸೂಚಿಸಲಾಗಿದೆ.

ಸುಳ್ಳಿಗೆ ಯಾವುದೇ ಅಡಿಪಾಯವಿರುವುದಿಲ್ಲ. ಇದು ಮಿತಿಮೀರಿದ ನಿರಾಧಾರ ವರದಿ ಆಗಿದೆ. ಡಾಕ್ಟರ್ ಜಾವೇದ್ ಕನ್‌ವಲ್ ಜಂಗ್ ಪತ್ರಿಕೆಯ ವಿಶೇಷ ವರದಿಗಾರನಾಗಿರಬಹುದು. ಈ ವ್ಯಕ್ತಿ ಡೆನ್ಮಾರ್ಕ್‌ನಲ್ಲಿರಬಹುದಾಗಿ ಭಾವಿಸಲಾಗಿತ್ತು. ಆದರೆ ಈಗ ತಿಳಿದು ಬಂದುದೇನೆಂದರೆ, ಈ ವ್ಯಕ್ತಿ ಇಟಲಿಯಲ್ಲಿದ್ದು ಅಲ್ಲಿಂದ ಜಂಗ್ ಪತ್ರಿಕೆ ಮತ್ತು ಜಿಯೋ ಟೀವಿಯ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದಾರೆ. ನಿಯಮಗಳ ಪ್ರಕಾರ ಈ ವ್ಯಕ್ತಿ ಯಾವುದೇ ಪತ್ರಿಕೆಯಲ್ಲಿ ಡೆನ್ಮಾರ್ಕ್‌ನಿಂದ ವರದಿ ಎಂದು ಸಮಾಚಾರ ನೀಡಲು ಸಾಧ್ಯವಿಲ್ಲ ಎಂದು ನನಗೆ ತಿಳಿಯಿತು.

ಈ ವರದಿಯಲ್ಲಿ ಮೊದಲನೆಯದಾಗಿ ಹೇಳಿದುದು ಸೆಪ್ಟಂಬರ್‌ನಲ್ಲಿ ನಮ್ಮ ಜಲ್ಸ (ವಾರ್ಷಿಕ ಸಭೆ) ಡೆನ್ಮಾರ್ಕ್‌ನಲ್ಲಿ ಜರಗಿತೆಂದಾಗಿದೆ. ಆದರೆ ಕಳೆದ ವರ್ಷ ಸೆಪ್ಟಂಬರ್‌ನಲ್ಲಿ ನಮ್ಮ ಜಲ್ಸ ಅಲ್ಲಿ ಜರಗಿಯೇ ಇರಲಿಲ್ಲ. ನಾನು ಅಲ್ಲಿಗೆ ಹೋದ ಕಾರಣ ಸ್ಕೇಂಡಿನೇವಿಯನ್ ದೇಶಗಳ ಜಲ್ಸ ಜರಗಿತ್ತು. ಅದು ಸ್ವೀಡನ್‌ನಲ್ಲಿ ಜರಗಿತ್ತು. ನಾವು ಅಲ್ಲಿ ಏನು ಹೇಳಿದ್ದೇವೆ, ಏನು ಹೇಳಲಿಲ್ಲ ಎಂದು ಎಲ್ಲ ಜನರು ಎಂ.ಟಿ.ಎ. ಮೂಲಕ ನೋಡಿದ್ದಾರೆ.

ಡೆನ್ಮಾರ್ಕ್‌ಗೆ ನಾನು ಹೋದಾಗ ಅಲ್ಲಿ ಒಂದು ಹೋಟೆಲ್‌ನಲ್ಲಿ ಸ್ವಾಗತ ಸಮಾರಂಭದ ವ್ಯವಸ್ಥೆ ಮಾಡಲಾಗಿತ್ತು. ಅದರಲ್ಲಿ ಪತ್ರಿಕೆಗಳ ಪ್ರತಿನಿಧಿಗಳೂ ಇತರ ವಿದ್ಯಾವಂತರಾದ

ಸ್ನೇಹಿತರೂ ಭಾಗವಹಿಸಿದ್ದರು. ಸರಕಾರಿ ಅಧಿಕಾರಿಗಳೂ ಒಬ್ಬ ಸರಕಾರಿ ಸಚಿವ ಸಹ ಆಗಮಿಸಿದ್ದರು. ಅಲ್ಲಿ ಪವಿತ್ರ ಖುರ್‌ಆನ್, ಹದೀಸ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶಗಳ ಮತ್ತು ಹಝ್ರತ್ ಮಸೀಹ್ ಮೌಊದ್‌ರ(ಅ) ಉಪದೇಶಗಳ ಪ್ರಕಾರ ಇಸ್ಲಾಮಿನ ಸುಂದರ ಶಾಂತಿಪ್ರಿಯ ತತ್ವಗಳನ್ನು ವಿವರಿಸಲಾಗಿತ್ತು. ಅಲ್ಲಿ ಹೇಳಿದುದೆಲ್ಲವೂ ಸ್ಪಷ್ಟವೂ ಬಹಿರಂಗವೂ ಆಗಿತ್ತು. ಅಲ್ಲಿ ರಹಸ್ಯ ಮಾತುಕತೆಗಳು ನಡೆಯಲಿಲ್ಲ. ಅಲ್ಲಿನ ಪತ್ರಿಕೆಗಳು ವರದಿಗಳನ್ನು ಪ್ರಕಟಿಸಿದವು. ಅವರ ಟಿ.ವಿ. ಪ್ರೋಗ್ರಾಮ್‌ನಲ್ಲೂ ಸಂಕ್ಷಿಪ್ತ ವರದಿ ಪ್ರಕಟವಾಗಿತ್ತು. ಅಲ್ಲಿ ಯಾರೊಂದಿಗೂ ಪ್ರತ್ಯೇಕ ಸಂದರ್ಶನ ನಡೆಸಿಲ್ಲ. ಸ್ವಾಗತ ಸಮಾರಂಭದ ನನ್ನ ಭಾಷಣವನ್ನು ಎಂ.ಟಿ.ಎ. ಸಹ ತೋರಿಸಿದೆ ಎಂದು ನಾನು ಭಾವಿಸುತ್ತೇನೆ. ಅದನ್ನು ತೋರಿಸಿಲ್ಲವಾದರೆ ಎಂ.ಟಿ.ಎ. ಅದನ್ನು ಈಗ ತೋರಿಸಬೇಕು.

ಅಲ್ಲಿ ನಡೆದ ಭಾಷಣದಲ್ಲಿ ಪ್ರಾಯಶಃ ಈ ವರದಿ ಬರೆದವನು ಹೇಳಿದಂತೆ ಹೀಗೆ ಹೇಳಿರಬಹುದು: ಕೆಲವು ಜನರು ಇಸ್ಲಾಮನ್ನು ಅಪಕೀರ್ತಿಗೊಳಪಡಿಸುತ್ತಾರೆ. ಆದರೆ ಮುಸ್ಲಿಮರಲ್ಲಿ ಬಹುಸಂಖ್ಯಾತ ಜನರು ಇಂತಹ ಜಿಹಾದ್ ಮತ್ತು ಭೀಕರ ಕೃತ್ಯಗಳನ್ನು ಇಷ್ಟಪಡುವುದಿಲ್ಲ.

ಆದರೆ ನಮಗೆ ಸಂಬಂಧಿಸಿ ಬಹಳ ದೊಡ್ಡ ಸುಳ್ಳು ಹೇಳಲಾಗಿದೆ. ಅತ್ಯಂತ ಸುಳ್ಳುಗಾರನಾದವನು ಸಹ ಇಂತಹ ಸುಳ್ಳು ಸುದ್ದಿ ಪ್ರಕಟಿಸುವಾಗ ಯೋಚಿಸಬೇಕು. ಏಕೆಂದರೆ ಈಗ ಪ್ರತಿಯೊಂದು ವಿಷಯ ದಾಖಲಿಸಲ್ಪಡುತ್ತದೆ. ವರದಿ ಬರೆದವನ ಪ್ರಕಾರ ಉರ್ದು, ಇಂಗ್ಲಿಷ್, ಡ್ಯಾನಿಶ್ ಭಾಷೆಗಳಲ್ಲಿ ವೀಡಿಯೋ ಟೇಪ್‌ಗಳಿವೆ. ಆತ ಹೇಳುವುದು ಸತ್ಯವಾದರೆ ಅವುಗಳನ್ನು ತೋರಿಸಲಿ, ನಮಗೂ ತೋರಿಸಲಿ. ಅಲ್ಲಿ ಯಾರು ಏನು ಹೇಳಿದ್ದಾರೆಂದು ಆಗ ತಿಳಿಯುವುದು.

## ಇದು ಅಪ್ಪಟ ಸುಳ್ಳು ಎಂದು ಈ ಸುಳ್ಳು ಸುದ್ದಿ ಪ್ರಕಟಿಸಿದವನಿಗೆ ನಾನು ಹೇಳುತ್ತೇನೆ: ಲಅ್‌ನತುಲ್ಲಾಹಿ ಅಲಲ್ ಕಾಧಿಬೀನ್ – ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬಂದೆರಗಲಿ

ಇದು ಅಪ್ಪಟ ಸುಳ್ಳಾಗಿದೆ ಎಂದು ಈ ಸುಳ್ಳು ಸುದ್ದಿ ಹಬ್ಬಿಸುವವನಿಗೆ ನಾನು ಪ್ರಥಮವಾಗಿ ಹೇಳಲು ಬಯಸುತ್ತೇನೆ: 'ಲಅ್‌ನತುಲ್ಲಾಹಿ ಅಲಲ್ ಕಾಧಿಬೀನ್'. ನೀವು ಹೇಳುವುದು ಸತ್ಯವಾಗಿದ್ದರೆ ನೀವು ಸಹ ಹೀಗೆಯೇ ಹೇಳಿರಿ. ಆದರೆ ಅಲ್ಲಾಹನ ಬಗ್ಗೆ ಒಂದು ಸಾಸಿವೆ ಕಾಳಿನಷ್ಟಾದರೂ ಭಯ ಇದ್ದರೆ ನಿಮಗೆ ಹೀಗೆ ಹೇಳಲು ಸಾಧ್ಯವಾಗದು. ಇಂತಹ ಜನರಲ್ಲಿ ದೇವಭಯ ಇರುವುದೇ ಕಮ್ಮಿ. ಈ ರೀತಿ ಶಾಪ ವಚನವನ್ನು ಪುನರಾವರ್ತಿಸದಿದ್ದರೂ ಇಂತಹ ಘೋರ ಸುಳ್ಳು ಹೇಳಿ ಹಝ್ರತ್ ಮಸೀಹ್ ಮೌಊದ್‌ರ(ಅ) ಪ್ರಾರ್ಥನೆಯ ಪರಿಣಾಮಕ್ಕೆ ಈ ಜನರು ಗುರಿಯಾಗಿದ್ದಾರೆ. ಅಹ್ಮದಿಯಾ ಜಮಾಅತ್ ವಿರುದ್ಧ ಇಂತಹ ನಿಂದನೀಯ ಚಟುವಟಿಕೆಗಳು ಹಿಂದೆ ಸಹ ನಡೆದಿವೆ. ಅವು ನಿರಂತರವಾಗಿ ಮುಂದುವರಿಯುತ್ತಲೂ ಇವೆ. ಅವರು ತಮ್ಮ ಭಾವನೆಗೆ ಅನುಸಾರವಾಗಿ ನಮ್ಮ ಬೆನ್ನಿಗೆ ಚೂರಿ ಹಾಕಲು ಪ್ರಯತ್ನಿಸುತ್ತಿರುವಾಗ ಅಲ್ಲಾಹನು ಅವರಿಗೆ ಸೋಲನ್ನುಣ್ಣುವಂತೆ ಮಾಡುತ್ತಾನೆ ಮತ್ತು ಅಹ್ಮದಿಯಾ ಜಮಾಅತ್‌ನೊಂದಿಗೆ

ತನ್ನ ಪ್ರೀತಿಯನ್ನು ಪ್ರಕಟಿಸುತ್ತಾನೆ. ಅವನು ಹಿಂದೆಗಿಂತ ಹೆಚ್ಚಿನ ಮಟ್ಟದಲ್ಲಿ ತನ್ನ ಅನುಗ್ರಹ ತೆಗೆದುಕೊಂಡು ಬರುತ್ತಾನೆ.

## ವ್ಯಂಗ್ಯ ಚಿತ್ರಗಳ ಪ್ರಕಟಣೆಯ ವಿರುದ್ಧ ಅಹ್ಮದಿಯಾ ಜಮಾಅತ್‌ನ ಪ್ರತಿಕ್ರಿಯೆ ಮತ್ತು ಪ್ರಯತ್ನಗಳು

ಈ ವ್ಯಂಗ್ಯ ಚಿತ್ರಗಳು ಪ್ರಕಟಿಸಲ್ಪಟ್ಟಾಗ ಎಲ್ಲರಿಗಿಂತಲೂ ಮೊದಲು ಅಹ್ಮದಿಯಾ ಜಮಾಅತ್ ಈ ವಿಷಯವನ್ನು ತನ್ನ ಕೈಗೆತ್ತಿಕೊಂಡಿತ್ತು ಮತ್ತು ಪತ್ರಿಕೆಯನ್ನು ಅದರಿಂದ ತಡೆಯಲು ಪ್ರಯತ್ನ ಮಾಡಿತ್ತು. ಇದರ ಬಗ್ಗೆ ನಾನು ಇದರ ಮೊದಲು ಸಹ ಪ್ರಸ್ತಾಪಿಸಿದ್ದೇನೆ. ಅನಂತರ ಡಿಸೆಂಬರ್, ಜನವರಿ ತಿಂಗಳುಗಳಲ್ಲಿ ಆ ಪತ್ರಿಕೆಗಳಿಗೆ ಬರೆದಿದ್ದೆವು ಮತ್ತು ನಮ್ಮ ಪ್ರತಿಭಟನೆಯನ್ನು ಸ್ಪಷ್ಟವಾಗಿ ವಿವರಿಸಿದ್ದೆವು. ನಮ್ಮ ಮುಬಲ್ಲಿಗರು ಪತ್ರಿಕೆಗಳಿಗೆ ಪತ್ರ ಬರೆಯುವ ಕಾಲದಲ್ಲಿ ನಾನು ಖಾದಿಯಾನ್‌ನಲ್ಲಿದ್ದೆನು. ನಮ್ಮ ಮಿಶನರಿಯ ಸಂದರ್ಶನ ವರದಿ ಸಹ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಈ ವಿಷಯಕ್ಕೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ಪ್ರತಿಕ್ರಿಯೆ ಬಗ್ಗೆ ಬರೆದ ನಂತರ ಆ ಪತ್ರಿಕೆ ಹೀಗೆ ಬರೆಯಿತು: ಈ ಜಮಾಅತಿನ ಜನರು ಹಿಂಸಾಚಾರಕ್ಕೆ ಬದಲಾಗಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉತ್ತಮ ಜೀವಿತ ಮಾದರಿಯನ್ನು ತಮ್ಮ ಜೀವಿತದಲ್ಲಿ ಅಳವಡಿಸಿಕೊಳ್ಳಲು ಬಯಸುತ್ತಾರೆ. ಆದರೆ ಇದರ ಅರ್ಥ ಇಲ್ಲಿನ ಸ್ಥಳೀಯ ಅಹ್ಮದಿಯಾ ಮಸ್‌ಜಿದ್‌ಗೆ ಸಂಬಂಧಿಸಿದ ಇಮಾಮರಿಗೆ ವ್ಯಂಗ್ಯ ಚಿತ್ರಗಳಿಂದ ನೋವಾಗಲಿಲ್ಲ ಎಂದಲ್ಲ. ಈ ವ್ಯಂಗ್ಯ ಚಿತ್ರಗಳಿಂದ ಇಲ್ಲಿನ (ಅಹ್ಮದಿಯಾ ಮಸ್‌ಜಿದ್‌ನ) ಇಮಾಮರ ಹೃದಯ ಘಾಸಿಗೊಂಡಿದೆ. ಅವರು ಕೂಡಲೇ ಈ ವ್ಯಂಗ್ಯ ಚಿತ್ರಗಳನ್ನು ಪ್ರತಿಭಟಿಸಿ ಒಂದು ಲೇಖನ ಬರೆದರು ಮತ್ತು ಡೆನ್ಮಾರ್ಕಿನ ಪತ್ರಿಕೆಗಳು ಪ್ರಕಟಿಸಿದುವು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ಇದ್ದ ಪ್ರೀತಿಯ ಕಾರಣದಿಂದಲೇ ನಮ್ಮ ಜಮಾಅತ್‌ನಲ್ಲಿ ಪ್ರೀತಿಯ ಅಗ್ನಿ ಪ್ರಜ್ವಲಿಸಿದೆ. ಯುರೋಪಿನಲ್ಲಿ ಕ್ರೈಸ್ತ ಧರ್ಮದಿಂದ ಅಹ್ಮದಿಯ್ಯತ್ ಎಂಬ ನೈಜ ಇಸ್ಲಾಮಿಗೆ ಮತಾಂತರಗೊಂಡ ಯುರೋಪಿಯನ್ ದೇಶದ ನಿವಾಸಿಗಳೂ ಈ ಪ್ರೀತಿಯಿಂದ ಭರಿತರಾಗಿದ್ದಾರೆ.

ಡೆನ್ಮಾರ್ಕ್ ದೇಶದ ನಾಗರಿಕರಾದ ಅಹ್ಮದೀ ಮುಸ್ಲಿಮ್ ಅಬ್ದುಸ್ಸಲಾಮ್ ಮೆಡ್‌ಸನ್ ಸಾಹೇಬರ ಇಂಟರ್‌ವ್ಯೂ VENSTER BLADET ಎಂಬ ಡ್ಯಾನಿಶ್ ಪತ್ರಿಕೆಯಲ್ಲಿ 16–2–2006ರಂದು ಪ್ರಕಟವಾಯಿತು. ಒಂದು ದೀರ್ಘ ಸಂದರ್ಶನ ಅದಾಗಿದೆ. ಅದರ ಕೆಲವು ಭಾಗಗಳನ್ನು ನಿಮಗೆ ಕೇಳಿಸುತ್ತೇನೆ.

ಅಬ್ದುಸ್ಸಲಾಮ್ ಮೆಡ್‌ಸನ್ ಸಾಹೇಬರು ಹೀಗೆ ಹೇಳಿದರು: "ಡೆನ್ಮಾರ್ಕ್ ಪ್ರಧಾನಮಂತ್ರಿ ಮುಸ್ಲಿಮ್ ದೇಶಗಳ ರಾಯಭಾರಿಗಳನ್ನು ಭೇಟಿಯಾಗಬೇಕಿತ್ತು. ಏಕೆಂದರೆ ಈ ವ್ಯಂಗ್ಯ ಚಿತ್ರಗಳನ್ನು ನೋಡಿ ಜನರು ಕೋಪಾವಿಷ್ಟರಾಗುತ್ತಾರೆ. ಪ್ರಧಾನಮಂತ್ರಿ ಮುಸ್ಲಿಮ್ ದೇಶಗಳ ರಾಯಭಾರಿಗಳನ್ನು ಭೇಟಿಯಾಗಿದ್ದರೆ ಈ ಸಮಸ್ಯೆ ಎಷ್ಟು ಗಂಭೀರವಾಗಿದೆ ಮತ್ತು ಅದರ ಪರಿಣಾಮಗಳೇನಾಗಬಹುದೆಂದು ತಿಳಿಯಬಹುದಾಗಿತ್ತು. ಈ ವ್ಯಂಗ್ಯ ಚಿತ್ರಗಳನ್ನು ನೋಡಿದಾಗ ಎಂತಹ ಪ್ರತಿಭಟನೆ ಉಂಟಾಗಬಹುದೆಂದು

ನಾನು ಭಾವಿಸುತ್ತಿದ್ದೆನೋ ಅದೇ ರೀತಿಯ ಪ್ರತಿಭಟನೆಗಳು ನಡೆದಿವೆ. ಏಕೆಂದರೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮುಸ್ಲಿಮರಿಗೆ ಜೀವನದ ಪ್ರತಿಯೊಂದು ಪಾರ್ಶ್ವದಲ್ಲೂ ಮಾದರಿಯಾಗಿದ್ದಾರೆ. ಇಂತಹ ಮಹಾಪುರುಷರ ವಿರುದ್ಧ ಅಪಮಾನಕರ ಆಕ್ರಮಣ ನಡೆದರೆ ಪ್ರತಿಯೊಬ್ಬ ಮುಸ್ಲಿಮನಿಗೆ ನೋವುಂಟಾಗುತ್ತದೆ. ಅವನು ಅದರಿಂದ ದುಃಖ ಅನುಭವಿಸುತ್ತಾನೆ."

ಅಬ್ದುಸ್ಸಲಾಮ್ ಮೆಡ್‌ಸನ್ ಸಾಹೇಬರು ಕೇಳುತ್ತಾರೆ: "ಯೂಲಂಡ್ ಪೋಸ್ಟನ್ ಎಂಬ ಪತ್ರಿಕೆ ವ್ಯಂಗ್ಯ ಚಿತ್ರ ಪ್ರಕಟಿಸಿ ಗಳಿಸಿದ ಲಾಭವಾದರೂ ಏನು?"

ಮೆಡ್‌ಸನ್ ಸಾಹೇಬರಿಗೂ ಈ ವ್ಯಂಗ್ಯ ಚಿತ್ರಗಳ ಪ್ರಕಟಣೆಯಿಂದ ಬಹಳ ನೋವಾಗಿದೆ ಎಂದು ಪತ್ರಿಕೆ ಪ್ರಕಟಿಸಿದೆ. ಮೆಡ್‌ಸನ್ ಸಾಹೇಬರು ಹೇಳಿದರು: ಹಝ್ರತ್ ಮುಹಮ್ಮದ್ ಪೈಗಂಬರರ(ಸ) ರೂಪಲಾವಣ್ಯದ ಬಗ್ಗೆ ಸ್ಪಷ್ಟವಾದ ವಿವರಣೆ ಲಭ್ಯವಿದೆ.

ಮೆಡ್‌ಸನ್ ಸಾಹೇಬರು ಹೇಳಿದರು: "ಪತ್ರಿಕೆ ಮಾಡಿದುದು ಕೊಳಕು ಬಾಲಿಶ ಕೃತ್ಯವಾಗಿದೆ. ಡೆನ್ಮಾರ್ಕ್‌ನಲ್ಲಿ ಅಪಮಾನವನ್ನು ತಡೆಯುವ ನಿಯಮವಿದೆ. ಇದರ ಆವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೆ. ಆದರೆ ಈಗ ನಾನು ಭಾವಿಸುವುದೇನೆಂದರೆ ಕಲಹಗಳನ್ನು ತಡೆಯಲು ಈ ನಿಯಮವನ್ನು ಜಾರಿಗೊಳಿಸುವುದು ಆವಶ್ಯಕವಾಗಿದೆ. ಆದರೆ ಹಝ್ರತ್ ಪೈಗಂಬರರನ್ನು(ಸ) ನಿಂದಿಸಿದುದಕ್ಕೆ ಶಿಕ್ಷೆಯನ್ನು ಅಲ್ಲಾಹನೇ ನೀಡುವನು."

ನೋಡಿರಿ, ಒಬ್ಬ ಯುರೋಪಿಯನ್ ಅಹ್ಮದೀ ಮುಸ್ಲಿಮರ ಸತ್ಯವಿಶ್ವಾಸ ಎಷ್ಟು ದೃಢವಾಗಿದೆ! ಇದಾಗಿದೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ಇಂತಹ ನೀಚ ವರ್ತನೆಗೆ ನಮ್ಮ ಪ್ರತಿಕ್ರಿಯೆ.

## ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಹೊಂದಿದ್ದ ಪ್ರೀತಿ

ನಮ್ಮ ಮೇಲೆ ಸುಳ್ಳು ಆರೋಪ ಹೊರಿಸುವ ಜನರಿಗಿಂತ ಲಕ್ಷಾಂತರ ಪಟ್ಟು ಅಲ್ಲ, ಕೋಟ್ಯಾಂತರ ಪಟ್ಟು ಹೆಚ್ಚು ಪ್ರೇಮ ನಮಗೆ ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಇದೆ. ಇದಕ್ಕೆ ಕಾರಣ ಹಝ್ರತ್ ಮಸೀಹ್ ಮೌಊದ್(ಅ) ನಮ್ಮ ಹೃದಯಗಳಲ್ಲಿ ಚಿತ್ರಿಸಿದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸುಂದರ ಉಪದೇಶಗಳಾಗಿವೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸುಂದರ ನಡೆವಳಿಕೆಗಳನ್ನು ನಮಗೆ ಅಂದವಾಗಿ ಚಿತ್ರಿಸಿ ಹಝ್ರತ್ ಮಸೀಹ್ ಮೌಊದ್(ಅ) ತೋರಿಸಿದರು. ಹಝ್ರತ್ ಮಸೀಹ್ ಮೌಊದ್‌ರ(ಅ) ಸ್ಥಾನ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ಥಾನಕ್ಕಿಂತ ಮೇಲಿನದು ಎಂದು ಯಾವ ಅಹ್ಮದಿಯಾಗಲಿ ಎಂದೂ ಯೋಚಿಸಲಾರ. ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಎಷ್ಟು ಪ್ರೀತಿಸುತ್ತಿದ್ದರೆಂದರೆ, ಅವರು ಹಸ್ಸಾನ್ ಬಿನ್ ಸಾಬಿತ್‌ರವರ ಈ ಕೆಳಗಿನ ಅರಬಿ ಪದ್ಯ ಓದಿ ಕಣ್ಣೀರು ಸುರಿಸುತ್ತಿದ್ದರು. ಆ ಪದ್ಯ ಹೀಗೆ:

ಕುನ್‌ತಸ್ಸವಾದ ಲಿನಾಝಿರಿ, ಫಅಮಿಯ ಅಲೈಕನ್ನಾಝಿರು,
ಮನ್‌ಶಾಅ ಬಅ್‌ದಕ ಫಲ್‌ಯಮುತ್, ಫ ಅಲೈಕ ಕುನ್‌ತು ಉಹಾಧ್ಧಿರು.

"ಓ ಮುಹಮ್ಮದ್(ಸ) ನೀವು ನನ್ನ ಕಣ್ಮಣಿ ಆಗಿದ್ದಿರಿ. ಇಂದು ನೀವು ಮೃತರಾದುದರಿಂದ ನನ್ನ ಕಣ್ಣುಗಳು ಕುರುಡಾದುವು. ನೀವು ಮೃತರಾದ ನಂತರ ಯಾರು ಬೇಕಾದರೂ ಸಾಯಲಿ. ನಾನು ಹೆದರುತ್ತಾ ಇದ್ದುದು ನಿಮ್ಮ ಮೃತ್ಯುವಿನ ಬಗ್ಗೆ ಮಾತ್ರವಾಗಿತ್ತು."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಿದ್ದರು: "ನನ್ನಿಂದ ಈ ಪದ್ಯ ರಚಿಸಲ್ಪಟ್ಟಿದ್ದರೆ ಎಷ್ಟು ಚೆನ್ನಾಗಿತ್ತು!"

ಇಂತಹ ಮಹಾನುಭಾವರ ಬಗ್ಗೆ, ಅವರು ತನ್ನನ್ನು ಹಝ್ರತ್ ಮುಹಮ್ಮದ್ ಪೈಗಂಬರರಿಗಿಂತ(ಸ) ಶ್ರೇಷ್ಠನೆಂದೂ ಅವರನ್ನು ನಂಬುವವರು ಅವರಿಗೆ ಹಝ್ರತ್ ಮುಹಮ್ಮದ್ ಪೈಗಂಬರರಿಗಿಂತ(ಸ) ಉನ್ನತ ಸ್ಥಾನ ನೀಡುತ್ತಾರೆಂದೂ ಹೇಳುವುದು ಅತ್ಯಂತ ನೀಚ ದೋಷಾರೋಪವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೆಜ್ಜೆ ಹೆಜ್ಜೆಗೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರೇಮದಲ್ಲಿ ಮತ್ತರಾಗುವ ದೃಶ್ಯಗಳನ್ನೇ ನಾವು ಕಾಣುತ್ತಿದ್ದೇವೆ. ಒಂದು ಪದ್ಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ:

**ಉಸ್ ನೂರ್ ಪರ್ ಫಿದಾ ಹೂಂ, ಉಸ್‌ಕಾ ಹೀ ಮೈಂ ಹುವಾ ಹೂಂ,**
**ಓ ಹೈ ಮೈಂ ಚೀಝ್ ಕ್ಯಾ ಹೂಂ, ಬಸ್ ಫೈಸಲಾ ಯಹೀ ಹೈ.**

"ಆ ಪ್ರಕಾಶದಲ್ಲಿ ನಾನು ಲೀನನಾಗಿದ್ದೇನೆ. ನಾನು ಅದರದ್ದೇ ಆಗಿದ್ದೇನೆ. ಅವರ ಮುಂದೆ ನಾನು ಯಾವ ವಸ್ತುವೂ ಅಲ್ಲ. ಇದೇ ತೀರ್ಪು ಆಗಿದೆ."

**(ಖಾದಿಯಾನ್ ಕಾ ಆರ್ಯಾ ಔರ್ ಹಮ್ – ರೂಹಾನೀ ಖಝಾಇನ್ ಭಾಗ–20 ಪುಟ–456)**

ಯಾರು ತನ್ನ ಎಲ್ಲವನ್ನೂ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಎಂಬ ಪ್ರಕಾಶಕ್ಕೆ ಅರ್ಪಿಸುತ್ತಿರುವರೋ ಅಂತಹ ಮಹಾನುಭಾವರ ಬಗ್ಗೆ ಏನೆಲ್ಲ ಸುಳ್ಳು ಹೇಳುತ್ತಿದ್ದಾರೆಂದು ನೋಡಿರಿ. (ನಊಝುಬಿಲ್ಲಾಹ್ – ನಾವು ಅಲ್ಲಾಹನ ಅಭಯ ಯಾಚಿಸುತ್ತೇವೆ). ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ಥಾನ ಈಗ ಬಾಕಿಯಾಗಿ ಉಳಿದಿಲ್ಲವೆಂದೂ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿಯ ಸ್ಥಾನ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ಥಾನಕ್ಕಿಂತ ಮೇಲಿದೆ ಎಂದು ಅಹ್ಮದಿಯರು ನಂಬುತ್ತಾರೆಂದೂ ಅಹ್ಮದಿಯರ ಅಭಿಪ್ರಾಯ ಪ್ರಕಾರ ಹಝ್ರತ್ ಮಸೀಹ್ ಮೌಊದ್(ಅ) ಅಂತಿಮ ಪ್ರವಾದಿ ಎಂದು ಅಹ್ಮದಿಯರು ನಂಬುತ್ತಾರೆಂದೂ ಸುಳ್ಳು ಆಕ್ಷೇಪ ಮಾಡುತ್ತಾರೆ. ಅಹ್ಮದಿಯರ ಅಭಿಪ್ರಾಯ ಪ್ರಕಾರ ಹಝ್ರತ್ ಮಸೀಹ್ ಮೌಊದ್(ಅ) ಅಂತಿಮ ಪ್ರವಾದಿಯಾದ ಕಾರಣ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವ್ಯಂಗ್ಯ ಚಿತ್ರ ರಚಿಸಲು ಅಹ್ಮದಿಯರು ಅನುಮತಿ ನೀಡಿದರೆಂದು ಆರೋಪಿಸುತ್ತಾರೆ. ಇನ್ನಾಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್. ಲಅ್‌ನತುಲ್ಲಾಹಿ ಅಲಲ್ ಕಾಝಿಬೀನ್ (ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಸುರಿಯಲಿ). ಅಹ್ಮದಿಯರಾದ ನಾವು ಹೇಳಿದುದರಿಂದ ವ್ಯಂಗ್ಯಚಿತ್ರ ಪ್ರಕಟಿಸಲಾಯಿತು ಎಂದು ಹೇಳುವುದು ಅತ್ಯಂತ ಬಾಲಿಶ ಮಾತಾಗಿದೆ. ಏನು ಅವರು ನಮ್ಮ ಅನುಮತಿಗೆ ಕಾಯುತ್ತಿದ್ದರೇ? ನಾವು ಅನುಮತಿ ನೀಡಿದರೆ ಅವರು ವ್ಯಂಗ್ಯಚಿತ್ರ ಪ್ರಕಟಿಸುವರು ಎಂದು ಹೇಳುವುದು ಎಷ್ಟು ಹಾಸ್ಯಾಸ್ಪದವಾಗಿದೆ! ಡೆನ್ಮಾರ್ಕ್‌ನಲ್ಲಿ ಅಹ್ಮದಿಯರ ಜನಸಂಖ್ಯೆ ಕೆಲವು ನೂರುಗಳಷ್ಟು ಮಾತ್ರವಿದೆ. ಸಮಾಚಾರ ನೀಡುವಾಗ ಈ ಉರ್ದು ಪತ್ರಿಕೆಗಳು ಹಿಂದೆ ಮುಂದೆ ಸ್ವಲ್ಪ ಯೋಚಿಸಲಿ.

## ಮುಸ್ಲಿಮ್ ದೇಶಗಳ ಸರಕಾರಗಳು ಸ್ವಾರ್ಥ ಮುಲ್ಲಾಗಳ ಮತ್ತು ಇತರ ಸ್ವಾರ್ಥ ಹಿತಾಸಕ್ತಿಗಳ ಮೋಸಕ್ಕೆ ಗುರಿಯಾಗಬಾರದು

ಡೆನ್ಮಾರ್ಕ್ ಸರಕಾರ ಪ್ರಾಯಶಃ ಬುದ್ಧಿಹೀನವಾಗಿಲ್ಲ. ಆದರೆ ಸಮಾಚಾರವನ್ನು ಬರೆದವ ಮತ್ತು ಪ್ರಕಟಿಸಿದವರು ಬುದ್ಧಿಶೂನ್ಯತೆ ಹೊಂದಿದ್ದಾರೆಂದು ತೋರುತ್ತದೆ. ಅವರ ಹೃದಯಗಳಲ್ಲಿ ಪಿತೂರಿಗಳ ಹೊರತು ಬೇರೇನೂ ಕಾಣಿಸುವುದಿಲ್ಲ. ಮುಸ್ಲಿಮರನ್ನು ಪ್ರಚೋದಿಸುವ ಹೊರತು ಬೇರೆ ಯಾವ ಉದ್ದೇಶವೂ ಈ ಸಮಾಚಾರ ಪ್ರಕಟಣೆಯಲ್ಲಿಲ್ಲ ಎಂದು ಕಾಣುತ್ತದೆ. ಈ ಹೆಸರಿನಲ್ಲಿ ಮುಸ್ಲಿಮರು ಉತ್ತೇಜಿಸಲ್ಪಡುತ್ತಾರೆ. ಆದುದರಿಂದ ಮುಸ್ಲಿಮ್ ದೇಶಗಳಲ್ಲಿ – ಬಂಗ್ಲಾದೇಶದಲ್ಲಿ, ಇಂಡೋನೇಶಿಯಾದಲ್ಲಿ ಅಥವಾ ಪಾಕಿಸ್ಥಾನದಲ್ಲಿ ಅಹ್ಮದಿಯರ ವಿರುದ್ಧ ಪರಿಸ್ಥಿತಿ ಇರುವ ಈ ಪ್ರದೇಶಗಳಲ್ಲಿ ಕಲಹ ಗೊಂದಲಗಳು ತಲೆದೋರಲಿ ಎಂದು ಈ ಸಮಾಚಾರ ಪ್ರಕಟನೆಯ ಉದ್ದೇಶವಾಗಿದೆ. ಕೆಲವು ಸ್ವಾರ್ಥ ಹಿತಾಸಕ್ತಿಗಳು ಈ ನೆವನದಿಂದ ಆ ದೇಶಗಳಲ್ಲಿ ಸರಕಾರದ ವಿರುದ್ಧ ಚಳುವಳಿ ಹೂಡುವುದು ಅಸಂಭವ್ಯವೇನೂ ಅಲ್ಲ. ನಾವು ಸಾಮಾನ್ಯವಾಗಿ ನೋಡಿರುವುದೇನೆಂದರೆ, ಅಹ್ಮದಿಯರ ವಿರುದ್ಧ ಪ್ರಾರಂಭಿಸಲಾದ ಚಳುವಳಿಗಳು ಸರಕಾರದ ಕಡೆಗೆ ತಿರುಗುತ್ತವೆ. ಆದುದರಿಂದ ಈ ದೇಶಗಳ ಸರಕಾರಗಳು ಬುದ್ಧಿಪೂರ್ವಕವಾಗಿ ಕೆಲಸ ಮಾಡಬೇಕು. ಸ್ವಾರ್ಥ ಮುಲ್ಲಾಗಳ ಮತ್ತು ಸ್ವಾರ್ಥ ಹಿತಾಸಕ್ತಿಗಳ ಮೋಸಕ್ಕೆ ಗುರಿಯಾಗಬಾರದು.

ಅಹ್ಮದಿಯರಾದ ನಮ್ಮ ದೃಷ್ಟಿಯಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ಥಾನದ ಬಗ್ಗೆ ಹೇಳುವುದಾದರೆ, ಹಝ್ರತ್ ಮಸೀಹ್ ಮೌಊದ್‌ರ(ಅ) ಪದ್ಯಗಳಿಂದ ನಾವು ಅದನ್ನು ತಿಳಿದುಕೊಂಡಿದ್ದೇವೆ. ನಮಗೆ ಅದರ ಬಗ್ಗೆ ಅಂದಾಜು ಮಾಡಲು ಸಾಧ್ಯವಾಗಿದೆ. ಪ್ರತಿಯೊಬ್ಬ ಅಹ್ಮದಿಯ ಹೃದಯದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ಥಾನ ಏನು ಎಂಬುದನ್ನು ಪ್ರತಿಯೊಬ್ಬ ಅಹ್ಮದಿಗೆ ತಿಳಿದಿದೆ. ಕಳೆದ ಕೆಲವು ಖುತ್‌ಬಗಳಲ್ಲಿ ಅವುಗಳ ಬಗ್ಗೆ ನಾನು ಪ್ರಸ್ತಾಪಿಸಿದ್ದೇನೆ. ಅದರ ಬಗ್ಗೆ ಖುತ್‌ಬಗಳನ್ನು ನೀಡಿದ್ದೇನೆ. ನಾವು ನಮಗುಂಟಾದ ನೋವಿನ ಬಗ್ಗೆ ಪ್ರಕಟಿಸಿದ್ದೇವೆ. ಮುಂದೆ ಸಹ ಪ್ರಕಟಿಸುವೆವು. ಲೋಕದ ಎಲ್ಲ ಕಡೆಗಳಲ್ಲೂ ನಮ್ಮ ಕಡೆಯಿಂದ ಪ್ರತಿಭಟನೆಯ ಪತ್ರಿಕಾ ಹೇಳಿಕೆಗಳನ್ನು ಪ್ರಕಟಿಸಿದ್ದೇವೆ. ನಾವು ಇದನ್ನು ಮಾಡಿದುದು ಯಾರಿಗಾದರೂ ತೋರಿಸಲಿಕ್ಕೋಸ್ಕರ ಅಥವಾ ಯಾರನ್ನಾದರೂ ಪರಿಗಣಿಸಿ, ಅಥವಾ ಮುಸ್ಲಿಮರ ಬಗ್ಗೆ ಭಯ ಹೊಂದಿದುದರಿಂದ ಅಲ್ಲ. ಬದಲಾಗಿ, ಇದು ನಮ್ಮ ವಿಶ್ವಾಸದ ಒಂದು ಭಾಗವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರಿಂದ(ಸ) ಸಂಬಂಧ ವಿಚ್ಛೇದಿಸಿದರೆ ನಮ್ಮ ಜೀವಿತಕ್ಕೆ ಯಾವ ಸ್ಥಾನವೂ ಇಲ್ಲ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್‌ರ(ಅ) ಕೆಲವು ಉಲ್ಲೇಖಗಳನ್ನು ಓದಿ ಹೇಳುತ್ತೇನೆ. ಅವುಗಳಿಂದ ಈ ವಿಷಯ ಸ್ಪಷ್ಟವಾಗುವುದು.

## ಹಝ್ರತ್ ಮಸೀಹ್ ಮೌಊದ್‌ರ(ಅ) ಉಪದೇಶಗಳ ಸಾರಾಂಶ

ಅವರು ಹೀಗೆ ಹೇಳುತ್ತಾರೆ: "ನಮ್ಮ ಧಾರ್ಮಿಕ ವಿಶ್ವಾಸದ ಸಾರಾಂಶ – ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್‌ರಸೂಲುಲ್ಲಾಹ್ (ಅಲ್ಲಾಹನ ಹೊರತು ಬೇರೆ ದೇವನಿಲ್ಲ, ಮುಹಮ್ಮದ್ ಅಲ್ಲಾಹನ ಸಂದೇಶವಾಹಕ) ಎಂದು ಮಾತ್ರವಾಗಿದೆ. ನಮ್ಮ ಇಹಲೋಕ

ಜೀವಿತದಲ್ಲಿ ನಾವು ಇದೇ ವಿಶ್ವಾಸವನ್ನು ಹೊಂದಿರುತ್ತೇವೆ. ಅಲ್ಲಾಹನ ಅನುಗ್ರಹದಿಂದ ಇದೇ ವಿಶ್ವಾಸದೊಂದಿಗೆ ಶಾಶ್ವತವಲ್ಲದ ಈ ಲೋಕದಿಂದ ಹೊರಟು ಹೋಗುವೆವು. ಹಝ್ರತ್ ಮುಹಮ್ಮದ್ ರಸೂಲ್[ಸ] ಖಾತಮುನ್ನಬಿಯ್ಯೀನ್ (ಪ್ರವಾದಿಗಳ ಮುದ್ರೆ) ಮತ್ತು ಖೈರುಲ್ ಮುರ್ಸಲೀನ್ (ಸಂದೇಶವಾಹಕರಲ್ಲಿ ಅತ್ಯಂತ ಶ್ರೇಷ್ಠ) ಆಗಿರುವರು. ಅವರ ಮೂಲಕ ಧರ್ಮವು ಪರಿಪೂರ್ಣಗೊಂಡಿತು. ಆ ಅನುಗ್ರಹ ಪರಿಪೂರ್ಣವಾಗಿ ಅವರಿಗೆ ಲಭಿಸಿದೆ. ಅದರ ಮೂಲಕ ಮನುಷ್ಯನು ನೇರಮಾರ್ಗದಲ್ಲಿ ಚಲಿಸಿ ಅಲ್ಲಾಹನ ಸಮೀಪಕ್ಕೆ ತಲಪಬಹುದಾಗಿದೆ."

**(ಇಝಾಲಃ ಔಹಾಮ್– ರೂಹಾನೀ ಖಝಾಇನ್. ಸಂಪುಟ–3 ಪುಟ 169–170)**

ಮೇಲೆ ವಿವರಿಸಿದುದೇ ನಮ್ಮ ವಿಶ್ವಾಸದ ಭಾಗವಾಗಿದೆ. ಹಝ್ರತ್ ಮಸೀಹ್ ಮೌಊದ್[ಅ] ಈ ಉಪದೇಶವನ್ನು ನಮಗೆ ನೀಡಿದರು. ಇಂತಹ ವಿಶ್ವಾಸವನ್ನು ಹೊಂದಿದವರ ಬಗ್ಗೆ, ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮೂಲಕ ಹೊರತು ಅಲ್ಲಾಹನ ಸಮೀಪ ತಲಪಬಹುದೆಂದು ಮತ್ತು ನುಬುವ್ವತ್ (ಪ್ರವಾದಿತ್ವ) ಲಭಿಸಿದೆ ಎಂದು ಅವರು ನಂಬುತ್ತಾರೆಂದು ಹೇಗೆ ತಾನೆ ಹೇಳಲು ಸಾಧ್ಯ?.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಸಿರಾತೆ ಮುಸ್ತಖೀಮ್ (ನೇರಮಾರ್ಗ) ಎಂದರೆ ಇಸ್ಲಾಮ್ ಧರ್ಮವಾಗಿದೆ. ಈಗ ಆಕಾಶದ ಕೆಳಗೆ ಒಬ್ಬರೇ ಪ್ರವಾದಿ ಮತ್ತು ಒಂದೇ ದಿವ್ಯ ಧಾರ್ಮಿಕ ಗ್ರಂಥವಿದೆ. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಎಲ್ಲ ಪ್ರವಾದಿಗಳಿಗಿಂತ ಉನ್ನತ ಸ್ಥಾನ ಪಡೆದವರೂ ಎಲ್ಲ ಪ್ರವಾದಿಗಳಿಗಿಂತಲೂ ಶ್ರೇಷ್ಠರೂ ಆಗಿದ್ದಾರೆ. ಎಲ್ಲ ಸಂದೇಶವಾಹಕರಿಗಿಂತ ಪರಿಪೂರ್ಣರೂ ಆಗಿದ್ದಾರೆ. ಅವರು ಖಾತಮುಲ್ ಅಂಬಿಯಾ (ಎಲ್ಲ ಪ್ರವಾದಿಗಳ ಮುದ್ರೆ) ಮತ್ತು ಖೈರುನ್ನಾಸ್(ಎಲ್ಲ ಮನುಷ್ಯರಿಗಿಂತ ಶ್ರೇಷ್ಠ) ಆಗಿದ್ದಾರೆ. ಅವರನ್ನು ಅನುಸರಿಸುವ ಮೂಲಕ ಅಲ್ಲಾಹನ ಸಾಮೀಪ್ಯ ಸಿಗುತ್ತದೆ. ಎಲ್ಲ ಅಂಧಕಾರಗಳ ಪರದೆಗಳು ನೀಗಲ್ಪಡುತ್ತವೆ ಮತ್ತು ಮೋಕ್ಷ ಲಭಿಸುವ ಚಿಹ್ನೆಗಳು ಇಹಲೋಕದಲ್ಲಿಯೇ ಕಾಣಿಸಿಕೊಳ್ಳುತ್ತವೆ. ಪವಿತ್ರ ಖುರ್ಆನ್ ಸತ್ಯವೂ ಪರಿಪೂರ್ಣವೂ ಆಗಿರುವ ಮಾರ್ಗದರ್ಶನದಿಂದಲೂ ಪ್ರಭಾವಗಳಿಂದಲೂ ತುಂಬಿರುತ್ತದೆ. ಅದರ ಮೂಲಕ ಸತ್ಯವಾದ ಜ್ಞಾನವು ಲಭಿಸುತ್ತದೆ. ಮನುಷ್ಯ ಸಹಜವಾದ ಕೊಳೆಗಳಿಂದ ಮುಕ್ತವಾಗಿ ಹೃದಯ ಪರಿಶುದ್ಧವಾಗುತ್ತದೆ. ಮನುಷ್ಯನು ಅಜ್ಞಾನ, ನಿಷ್ಕಾಳಜಿ ಮತ್ತು ಸಂಶಯಗಳ ಪರದೆಗಳಿಂದ ಮುಕ್ತನಾಗುತ್ತಾನೆ. ಅನುಭವ ಜ್ಞಾನದ ಸ್ಥಾನವನ್ನು ತಲಪುತ್ತಾನೆ."

**(ಬರಾಹೀನೆ ಅಹ್ಮದಿಯಾ – ಹಾಶಿಯದರ್ಹಾಶಿಯ–3 ರೂಹಾನೀ ಖಝಾಇನ್ ಸಂಪುಟ–1 ಪುಟ 557–558)**

ಅಂದರೆ, ಈಗ ಅಲ್ಲಾಹನಿಂದ ಸಿಗುವ ಅನುಗ್ರಹಗಳೆಲ್ಲವೂ ಹಝ್ರತ್ ಮುಹಮ್ಮದ್ ರಸೂಲರ[ಸ] ಕಾರಣದಿಂದಲೇ ಸಿಗುವುದು. ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮೂಲಕ ನುಬುವ್ವತ್ ಪರಿಪೂರ್ಣಗೊಂಡಿತು. ಅವರ ಉಪದೇಶಗಳ ಮೂಲಕವೇ ಅಂಧಕಾರಗಳು ದೂರ ಸರಿಯುವುವು ಮತ್ತು ಪ್ರಕಾಶ ಲಭಿಸುವುದು ಹಾಗೂ ಅಲ್ಲಾಹನ ಸಾಮೀಪ್ಯ ಸಹ ಅದರ ಮೂಲಕವೇ ಲಭಿಸುವುದು. ವಾಸ್ತವಿಕ ಮೋಕ್ಷವು ಅದರ ಮೂಲಕವೇ ಲಭಿಸಲಿದೆ. ಹೃದಯದ ಕೊಳೆಗಳು ಸಹ ಅದರಿಂದಲೇ ಶುದ್ಧೀಕರಿಸಲ್ಪಡುವುವು. ಇಂತಹ ಉಪದೇಶಗಳನ್ನೇ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಲೋಕಕ್ಕೆ ತಂದರು.

ಪುನಃ ಹಝ್‌ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ನಮ್ಮ ಪ್ರವಾದಿ ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ಸತ್ಯವನ್ನು ಬಹಿರಂಗಪಡಿಸಿದ ಮುಜದ್ದಿದೆ ಅಅ್‌ಝುಮ್ (ಅತ್ಯಂತ ಶ್ರೇಷ್ಠ ಸುಧಾರಕ) ಆಗಿದ್ದರು. ಕಣ್ಮರೆಯಾಗಿದ್ದ ಸತ್ಯವನ್ನು ಅವರು ಪುನಃ ಲೋಕಕ್ಕೆ ತಂದರು. ಇಂತಹ ಅಭಿಮಾನಾರ್ಹ ಕೃತ್ಯದಲ್ಲಿ ನಮ್ಮ ಪೈಗಂಬರರೊಂದಿಗೆ[ಸ] ಬೇರೆ ಯಾವ ಪ್ರವಾದಿಯೂ ಭಾಗೀದಾರನಾಗಿಲ್ಲ. ಹಝ್‌ರತ್ ಪೈಗಂಬರ್[ಸ] ಲೋಕವನ್ನು ಒಂದು ಅಂಧಕಾರದಲ್ಲಿರುವುದಾಗಿ ಕಂಡರು. ಅವರ ಆಗಮನದಿಂದ ಅಂಧಕಾರವು ಪ್ರಕಾಶವಾಗಿ ಪರಿವರ್ತನೆಗೊಂಡಿತು. ಯಾವ ಜನಾಂಗದಲ್ಲಿ ಅವರು ಜನಿಸಿದರೋ ಆ ಜನಾಂಗವು ಬಹುದೇವಾರಾಧನೆಯ ನಿಲುವಂಗಿಯನ್ನು ತೆಗೆದುಬಿಟ್ಟು ಏಕ ದೇವಾರಾಧನೆಯ ಉಡುಪನ್ನು ಧರಿಸಲು ತೊಡಗಿದ ನಂತರವೇ ಅವರು ಮೃತರಾದರು. ಇಷ್ಟು ಮಾತ್ರವಲ್ಲ, ಆ ಜನಾಂಗದ ಜನರು ಸತ್ಯವಿಶ್ವಾಸದ ಉನ್ನತ ಮಟ್ಟಗಳನ್ನು ತಲಪಿದರು. ಅವರಿಂದ ಸತ್ಯ, ನಿಷ್ಠೆ ಮತ್ತು ದೃಢ ವಿಶ್ವಾಸದ ಎಂತೆಂತಹ ಕೆಲಸಗಳು ಪ್ರಕಟಗೊಂಡವು ಎಂದರೆ ಅವುಗಳಿಗೆ ಸಮಾನವಾದವುಗಳನ್ನು ಲೋಕದ ಯಾವ ಭಾಗದಲ್ಲೂ ಕಾಣಸಿಗಲಾರದು. ಈ ವಿಜಯ ಮತ್ತು ಇಷ್ಟು ಮಹತ್ತಾದ ವಿಜಯ ಹಝ್‌ರತ್ ಮುಹಮ್ಮದ್ ಪೈಗಂಬರರನ್ನು[ಸ] ಹೊರತುಪಡಿಸಿ ಯಾವುದೇ ಪ್ರವಾದಿಗೆ ಲಭಿಸಲಿಲ್ಲ. ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಸತ್ಯತೆ ಸಾಬೀತುಗೊಳಿಸುವ ಒಂದು ದೊಡ್ಡ ಸಾಕ್ಷ್ಯಾಧಾರವೇನೆಂದರೆ, ಅವರು ಆಗಮಿಸಿದ ಕಾಲಘಟ್ಟ ಅತ್ಯಂತ ಘೋರ ಅಂಧಕಾರದಲ್ಲಿ ಮುಳುಗಿತ್ತು. ಅದು ಒಬ್ಬ ವೈಭವಶಾಲಿ ಸುಧಾರಕನನ್ನು ಸಹಜವಾಗಿಯೇ ಆವಶ್ಯಪಡುತ್ತಿತ್ತು. ಲಕ್ಷಾಂತರ ಜನರು ಬಹುದೇವಾರಾಧನೆ ಮತ್ತು ಮೂರ್ತಿ ಪೂಜೆಗಳನ್ನು ಬಿಟ್ಟು ಏಕದೇವಾರಾಧನೆ ಮತ್ತು ನೇರಮಾರ್ಗವನ್ನು ಅವಲಂಬಿಸಿದ ಕಾಲದಲ್ಲಿ ಮುಹಮ್ಮದ್ ಪೈಗಂಬರ್[ಸ] ಲೋಕದಿಂದ ನಿರ್ಗಮಿಸಿದರು. ಈ ಪರಿಪೂರ್ಣ ಸುಧಾರಣೆ ಹಝ್‌ರತ್ ಪೈಗಂಬರರ[ಸ] ವೈಶಿಷ್ಟ್ಯವೇ ಆಗಿತ್ತು. ಅವರು ಕಾಡು ಮನುಷ್ಯರ ಮತ್ತು ಕಾಡು ಮೃಗಗಳ ಗುಣಗಳನ್ನು ಹೊಂದಿದವರಿಗೆ ಮಾನವೀಯ ಶಿಷ್ಟಾಚಾರಗಳನ್ನು ಕಲಿಸಿದರು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಮೃಗ ಸಮಾನರಾದವರನ್ನು ಮನುಷ್ಯರನ್ನಾಗಿ ಮಾಡಿದರು. ಆ ಮನುಷ್ಯರನ್ನು ವಿದ್ಯಾಭ್ಯಾಸ ಗಳಿಸಿದ ಮನುಷ್ಯರನ್ನಾಗಿ ಮಾಡಿದರು. ವಿದ್ಯಾಸಂಪನ್ನ ಮನುಷ್ಯರನ್ನು ದೇವ ಸಾಮೀಪ್ಯ ಗಳಿಸಿದ ಮನುಷ್ಯರನ್ನಾಗಿ ಮಾಡಿದರು. ಆಧ್ಯಾತ್ಮಿಕತೆಯನ್ನು ಅವರೊಳಗೆ ಊದಿದರು ಮತ್ತು ಸತ್ಯವಾದ ದೇವನೊಂದಿಗೆ ಅವರ ಸಂಬಂಧ ಜೋಡಿಸಿದರು. ಆ ಜನರು ಅಲ್ಲಾಹನ ಮಾರ್ಗದಲ್ಲಿ ಕುರಿಗಳ ಹಾಗೆ ವಧಿಸಲ್ಪಟ್ಟರು, ಇರುವೆಗಳ ಹಾಗೆ ಪಾದಗಳ ಕೆಳಗೆ ತುಳಿಯಲ್ಪಟ್ಟರು. ಆದರೆ ಸತ್ಯವಿಶ್ವಾಸವನ್ನು ಅವರು ಕೈಬಿಡದೆ ಎಲ್ಲ ಕಷ್ಟಕಾಲಗಳಲ್ಲೂ ಹೆಜ್ಜೆ ಮುಂದೆ ಹಾಕುತ್ತಾ ಸಾಗಿದರು. ನಿಶ್ಚಯವಾಗಿಯೂ ನಮ್ಮ ಪೈಗಂಬರ್[ಸ] ಆಧ್ಯಾತ್ಮಿಕತೆಯನ್ನು ಸ್ಥಾಪಿಸುವುದರಲ್ಲಿ ದ್ವಿತೀಯ ಆದಮ್ ಆಗಿದ್ದರು. ವಾಸ್ತವಿಕವಾಗಿ ನಿಜವಾದ ಆದಮ್ ಅವರೇ ಆಗಿದ್ದರು. ಅವರ ಮೂಲಕ ಮತ್ತು ಅವರ ಕಾರಣದಿಂದ ಮನುಷ್ಯನಿಗೆ ಲಭಿಸುವ ಎಲ್ಲ ಅನುಗ್ರಹಗಳು ಪರಿಪೂರ್ಣಗೊಂಡವು. ಎಲ್ಲ ಒಳ್ಳೆಯ ಶಕ್ತಿಗಳು ತಮ್ಮ ತಮ್ಮ ಕೆಲಸಗಳನ್ನು ಮಾಡಲು ತೊಡಗಿದುವು. ಮನುಷ್ಯನ ಪ್ರಕೃತಿಯ ಯಾವುದೇ ಭಾಗ ನಿಷ್ಕ್ರಿಯವಾಗಲಿಲ್ಲ. ನುಬುವ್ವತ್ ಅವರಲ್ಲಿ ಕೊನೆಗೊಂಡದ್ದು ಕಾಲದ ದೃಷ್ಟಿಯಿಂದ ಮಾತ್ರವಲ್ಲ ನುಬುವ್ವತ್ ಅದರ ಎಲ್ಲ ಪರಿಪೂರ್ಣತೆ ಅವರಲ್ಲಿ ಕೊನೆಗೊಂಡಿತು

ಎಂಬ ಕಾರಣದಿಂದಲೂ ಆಗಿದೆ. ಅವರು ತಂದ ಶರೀಅತ್ ದೇವಗುಣಗಳನ್ನು ಪರಿಪೂರ್ಣವಾಗಿ ಪ್ರಕಟಿಸುವುದಾದುದರಿಂದ ಅವರ ಶರೀಅತ್ ಅಲ್ಲಾಹನ ಉಗ್ರ ಗುಣಗಳನ್ನೂ ಸೌಮ್ಯಗುಣಗಳನ್ನೂ ಪ್ರಕಟಿಸುವುದಾಗಿತ್ತು. ಅವರ ಎರಡು ಹೆಸರು ಮುಹಮ್ಮದ್ ಮತ್ತು ಅಹ್ಮದ್ ಎಂಬುದು ಇದೇ ಉದ್ದೇಶದಿಂದಾಗಿದೆ. ಅವರ ನುಬುವ್ವತ್ ಸಾರ್ವತ್ರಿಕವಾಗಿದ್ದು ಅದರಲ್ಲಿ ಯಾವುದೇ ಜಿಪುಣತೆಯ ಅಂಶವಿಲ್ಲ. ಆ ನುಬುವ್ವತ್ ಆರಂಭದಿಂದಲೇ ಸರ್ವ ಲೋಕಕ್ಕೆ ಆಗಿತ್ತು."

**(ಲೆಕ್ಚರ್ ಸಿಯಾಲ್‌ಕೋಟ್– ರೂಹಾನೀ ಖಝಾಇನ್, ಸಂಪುಟ–20, ಪುಟ–206–207)**

## ಅಹ್ಮದಿಯಾ ಜಮಾಅತ್ ಪ್ರಕಾರ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಗ್ರಹಗಳು ಈಗಲೂ ಜಾರಿಯಲ್ಲಿವೆ

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಹಝ್ರತ್ ಮುಹಮ್ಮದ್ ರಸೂಲ್(ಸ) ಖಾತಮುಲ್ ಅಂಬಿಯಾ ಆಗಿರುವರು. ಎಂದರೆ ನಮ್ಮ ಪೈಗಂಬರರ(ಸ) ನಂತರ ಯಾವುದೇ ಹೊಸ ಶರೀಅತ್, ಹೊಸ ಗ್ರಂಥ ಅವತೀರ್ಣಗೊಳ್ಳಲಾರದು. ಹೊಸ ಆಜ್ಞೆಗಳು ಸಹ ಜಾರಿಯಾಗಲಾರವು. ಇದೇ ಗ್ರಂಥ, ಇವೇ ಆಜ್ಞೆಗಳು ಬಾಕಿಯಾಗಿ ಉಳಿಯುವುವು. ನನ್ನ ಗ್ರಂಥದಲ್ಲಿ ನನ್ನ ಬಗ್ಗೆ ನಬಿ ಎಂದೂ ರಸೂಲ್ ಎಂದೂ ಬಳಸಿದುದರಿಂದ ಅದರ ಅರ್ಥ ಹೊಸ ಶರೀಅತ್ ಅಥವಾ ಹೊಸ ಆಜ್ಞೆಗಳು ಕಲಿಸಲ್ಪಡುವುವು ಎಂದು ಖಂಡಿತವಾಗಿಯೂ ಅಲ್ಲ. ಅಲ್ಲಾಹನು ಯಾವುದಾದರೂ ಆವಶ್ಯಕ ಸಂದರ್ಭದಲ್ಲಿ ಯಾರನ್ನಾದರೂ ನೇಮಿಸಿ ತನ್ನ ಸಂದೇಶವಾಣಿಯನ್ನು ಗಳಿಸುವ ಭಾಗ್ಯ ಅವನಿಗೆ ನೀಡುತ್ತಾನೆ ಮತ್ತು ಅದೃಶ್ಯ ಕಾರ್ಯಗಳ ಬಗ್ಗೆ ಸಮಾಚಾರ ನೀಡುತ್ತಾನೆ. ಅಂತಹ ವ್ಯಕ್ತಿಯನ್ನು ನಬಿ ಎಂದು ಕರೆಯಲಾಗುತ್ತದೆ. ಅಲ್ಲಾಹನಿಂದ ನೇಮಿಸಲ್ಪಟ್ಟವನು ನಬಿ ಎಂಬ ಪದವಿಯನ್ನು ಪಡೆಯುವನು. ನಬಿ ಎಂದು ಹೇಳಿದುದರಿಂದ ಅದರ ಅರ್ಥ ಹೊಸ ಶರೀಅತ್ ತರುವ ಅಥವಾ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಶರೀಅತನ್ನು ರದ್ದುಗೊಳಿಸುವವ ಎಂದಲ್ಲ (ನಊದ್ಧುಬಿಲ್ಲಾಹ್). ಬದಲಾಗಿ, ಆ ವ್ಯಕ್ತಿಗೆ ದೊರಕುವ ಅನುಗ್ರಹಗಳು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಸತ್ಯನಿಷ್ಠೆಯಿಂದಲೂ ಪರಿಪೂರ್ಣವಾಗಿಯೂ ಅನುಸರಿಸಿದುದರಿಂದ ಮಾತ್ರ ಲಭಿಸುತ್ತದೆ ಮತ್ತು ಈ ಅನುಸರಣೆ ಮಾಡದಿದ್ದರೆ ಸಿಗಲು ಸಾಧ್ಯವೇ ಇಲ್ಲ ಎಂದಾಗಿದೆ."

**(ಅಲ್‌ಹಕಮ್ 10–1–1904 ಪುಟ–2)**

ವಾದಿಸುವ ವ್ಯಕ್ತಿ ಸ್ಪಷ್ಟವಾಗಿ, ತಾನು ಎಲ್ಲವನ್ನೂ ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಅನುಸರಿಸಿದುದರಿಂದ ಪಡೆದೆನು ಎಂದೂ ಅನುಸರಣೆ ಮಾಡದೆ ಇರುತ್ತಿದ್ದರೆ ಏನೂ ಸಿಗುತ್ತಿರಲಿಲ್ಲ ಎಂದೂ ಹೇಳುತ್ತಾರೆ. ಅವರನ್ನು ನಂಬುವವರು ಸಹ ಇದೇ ವಿಶ್ವಾಸದಲ್ಲಿ ಸ್ಥಿರವಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸತ್ಯಸಂಧರಾದ ದಾಸರೆಂದು ಅಹ್ಮದಿಯರೆಲ್ಲರೂ ನಂಬುತ್ತಾರೆ. ಹೀಗಿರುವಾಗ ವಿರೋಧಿಗಳು ಮಾಡುವ ಸುಳ್ಳು ಪ್ರಚಾರದ ಉದ್ದೇಶ ಮುಸ್ಲಿಮರಲ್ಲಿ ಆತಂಕ ಉಂಟುಮಾಡುವುದಾಗಿದೆ. ಇಂತಹ ಜನರು ಯಾವಾಗಲೂ

ಹೀಗೆಯೇ ಮಾಡುತ್ತಾ ಇರುತ್ತಾರೆ. ಈ ಜನರು ಕಲಹ ಗೊಂದಲಗಳನ್ನು ಉಂಟುಮಾಡುತ್ತಾರಲ್ಲದೆ ಈ ಶೈತಾನೀ ಶಕ್ತಿಗಳನ್ನು ತಮ್ಮ ಜೊತೆಗೆ ಸೇರಿಸುತ್ತಾರೆ. (ಶೈತಾನ್ ಅವರ ಜೊತೆಗೆಯೇ ಇರುತ್ತಾನೆ.) ಅಸೂಯೆಯ ಬೆಂಕಿ ಅವರನ್ನು ಸುಡುತ್ತಾ ಇರುತ್ತದೆ. ಈ ಜನರು ಜಮಾಅತ್ ಗಳಿಸಿದ ಅಭಿವೃದ್ಧಿಯನ್ನು ಸಹಿಸಲಾರರು. ಅವರ ಕಣ್ಣುಗಳಲ್ಲಿ ಅಹ್ಮದಿಯಾ ಜಮಾಅತಿನ ಅಭಿವೃದ್ಧಿ ಚುಚ್ಚುತ್ತದೆ. ಈ ಜನರು ತಮ್ಮ ಇಷ್ಟಪ್ರಕಾರ ಜಮಾಅತಿನ ವಿರುದ್ಧ ಕೀಳು ಕೆಲಸಗಳನ್ನು ಹಿಂದೆ ಸಹ ಮಾಡುತ್ತಿದ್ದರು; ಈಗ ಸಹ ಮಾಡುತ್ತಿದ್ದಾರೆ. ಮುಂದೆ ಸಹ ಪ್ರಾಯಶಃ ಮಾಡುವರು. ಇಂತಹ ಜನರು ಹುಟ್ಟುತ್ತಲೇ ಇರುವರು. ಶೈತಾನ್‌ನಂತೂ ಇರಲೇಬೇಕಾಗಿದೆ. ಆದರೆ ಈ ಜನರ ಕೀಳು ಕೆಲಸಗಳಿಂದ ಜಮಾಅತಿನ ಅಭಿವೃದ್ಧಿ ತಡೆಗಟ್ಟಲ್ಪಡಲಾರದು–

## ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವೈಭವಶಾಲಿ ಸ್ಥಾನ– ಹಝ್ರತ್ ಮಸೀಹ್ ಮೌಊದ್‌ರ(ಅ) ದೃಷ್ಟಿಯಲ್ಲಿ

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ಥಾನದ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು: "ಪರಿಪೂರ್ಣನಾದ ಮನುಷ್ಯನಿಗೆ ಮಹೋನ್ನತ ಸ್ಥಾನದ ಯಾವ ಪ್ರಕಾಶವನ್ನು ನೀಡಲಾಯಿತೋ ಅದು ದೇವದೂತರಲ್ಲಿ ಇರಲಿಲ್ಲ; ನಕ್ಷತ್ರಗಳಲ್ಲಿ ಇರಲಿಲ್ಲ; ಚಂದ್ರನಲ್ಲಿ ಇರಲಿಲ್ಲ; ಸೂರ್ಯನಲ್ಲಿ ಇರಲಿಲ್ಲ; ಭೂಮಿಯಲ್ಲೂ ಸಮುದ್ರಗಳಲ್ಲೂ ನದಿಗಳಲ್ಲೂ ಇರಲಿಲ್ಲ. ಮಾಣಿಕ್ಯದಲ್ಲಾಗಲೀ ಪಚ್ಚೆ ಮತ್ತಿತ್ತರ ವಜ್ರಗಳಲ್ಲಾಗಲೀ ಮುತ್ತುರತ್ನಗಳಲ್ಲಾಗಲೀ ಇರಲಿಲ್ಲ. ಒಟ್ಟಾರೆ ಹೇಳುವುದಾದರೆ, ಭೂಮ್ಯಾಕಾಶಗಳ ಯಾವ ವಸ್ತುವಿನಲ್ಲೂ ಇರಲಿಲ್ಲ. ಅದು ಪರಿಪೂರ್ಣ ಮನುಷ್ಯನಲ್ಲಿ ಮಾತ್ರ ಅಡಕವಾಗಿತ್ತು. ಅದು ಮನುಷ್ಯರಲ್ಲಿ ಪರಿಪೂರ್ಣನೂ ಉನ್ನತನೂ ಆಗಿರುವ ನಮ್ಮ ನಾಯಕರಾದ ಸಯ್ಯಿದುಲ್ ಅಂಬಿಯಾ (ಪ್ರವಾದಿಗಳ ನಾಯಕ) ಸಯ್ಯಿದುಲ್ ಅಹ್‌ಯಾ (ಜೀವಿಸಿರುವವರ ನಾಯಕ) ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಆಗಿರುವರು. ಆ ಪ್ರಕಾಶ ಆ ಪರಿಪೂರ್ಣ ಮನುಷ್ಯನಿಗೆ ನೀಡಲಾಯಿತು ಮತ್ತು ಅವರನ್ನು ಅನುಸರಿಸುವವರಿಗೆ ಅವರ ಅನುಸರಣೆಯ ಮಟ್ಟವನ್ನು ಅನುಸರಿಸಿ ನೀಡಲಾಯಿತು.

"ಪವಿತ್ರ ಖುರ್‌ಆನ್‌ನಲ್ಲಿ ಅಮಾನತ್ ಎಂದು ಹೇಳಿದುದು ಪರಿಪೂರ್ಣ ಮನುಷ್ಯನ ಎಲ್ಲ ಶಕ್ತಿ ಸಾಮರ್ಥ್ಯಗಳು, ಬುದ್ಧಿ, ಹೃದಯ, ಜ್ಞಾನ, ಜೀವ ಮತ್ತು ಪಂಚೇಂದ್ರಿಯಗಳು, ಭಯ, ಪ್ರೇಮ, ಗೌರವ, ಘನತೆ ಮತ್ತು ಎಲ್ಲ ವಿಧಗಳ ಶಾರೀರಿಕ ಮತ್ತು ಆಧ್ಯಾತ್ಮಿಕ ಅನುಗ್ರಹಗಳಾಗಿವೆ. ಅವುಗಳನ್ನು ಅಲ್ಲಾಹನು ಪರಿಪೂರ್ಣ ಮನುಷ್ಯನಿಗೆ ದಯಪಾಲಿಸಿದನು. (ಎಲ್ಲ ಮನುಷ್ಯರಿಗೆ ಬುದ್ಧಿ, ಜ್ಞಾನ ಮತ್ತು ಇತರ ಪಂಚೇಂದ್ರಿಯಗಳು ಲಭಿಸಿವೆ. ಆದರೆ ಅವುಗಳ ಉನ್ನತವಾದ ಶಕ್ತಿ ಮತ್ತು ಉನ್ನತ ಮಟ್ಟ ಪರಿಪೂರ್ಣ ಮನುಷ್ಯನಿಗೆ ದೊರಕಿತು.) ಪರಿಪೂರ್ಣ ಮನುಷ್ಯ ಪವಿತ್ರ ಖುರ್‌ಆನಿನ 'ಖಂಡಿತವಾಗಿಯೂ ಅಮಾನತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದು ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ' (ಪವಿತ್ರ ಖುರ್‌ಆನ್ 4:59) ಎಂಬ ವಚನ ಪ್ರಕಾರ ತನಗೆ ದೊರೆತ ಎಲ್ಲ ಅಮಾನತುಗಳನ್ನು ಅಲ್ಲಾಹನಿಗೆ ಮರಳಿಸುತ್ತಾನೆ. ಎಂದರೆ ಅಲ್ಲಾಹನಿಗೆ ತನ್ನನ್ನು ಅರ್ಪಿಸಿಕೊಂಡು ಅವನ ಮಾರ್ಗದಲ್ಲಿ ಅದನ್ನು ವಿನಿಯೋಗಿಸುತ್ತಾನೆ....

ಈ ಮಹತ್ವಪೂರ್ಣವಾದ ವೈಭವ ಅತ್ಯುನ್ನತವಾಗಿಯೂ ಪರಿಪೂರ್ಣವಾಗಿಯೂ ನಮ್ಮ ನೇತಾರ, ಮಾರ್ಗದರ್ಶಕ, ಪೈಗಂಬರ್, ನಿರಕ್ಷರಿ, ಸತ್ಯಸಂಧ, ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಕಾಣುತ್ತೇವೆ."

**(ಆಯಿನಃ ಕಮಾಲಾತೆ ಇಸ್ಲಾಮ್ – ರೂಹಾನೀ ಖಝಾಇನ್ – ಭಾಗ 5, ಪುಟ 160–162)**

ತಮ್ಮನ್ನು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಪ್ರೀತಿಸುವವರೆಂದು ಭಾವಿಸುವವರು ನಮ್ಮ ವಿರುದ್ಧ, ನಾವು ಹಝ್ರತ್ ಮಸೀಹ್ ಮೌಊದ್‌ರನ್ನು(ಅ) ಹಝ್ರತ್ ಪೈಗಂಬರರಿಗಿಂತ(ಸ) ಮೇಲಿನ ಸ್ಥಾನ ಪಡೆದವರೆಂದು (ನಊದುಬಿಲ್ಲಾಹ್) ಭಾವಿಸುತ್ತೇವೆಂದು ಸುಳ್ಳು ಆರೋಪ ಮಾಡುತ್ತಾರೆ. ಈ ಜನರ ಉದ್ದೇಶಲಕ್ಷ್ಯ ವೈಯಕ್ತಿಕ ಲಾಭ ಗಳಿಸುವುದಾಗಿದೆ. ಇದರ ಹೊರತು ಬೇರೇನೂ ಇಲ್ಲ. ಈ ಜನರು ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಶ್ಲಾಘಿಸಿ ಬರೆದ ವೈಭವಶಾಲಿ ವಿಚಾರಗಳನ್ನು ಅಥವಾ ಅದರ ಲಕ್ಷದಲ್ಲಿ ಒಂದು ಪಾಲಷ್ಟನ್ನಾದರೂ ತಮ್ಮ ಯಾವುದೇ ಮೌಲವಿಯ ಬಾಯಿಯಿಂದ ಹೊರಬಂದುದಾಗಿ ತೋರಿಸಿಕೊಡಲಿ. ನೀವು ಯಾರನ್ನು ಸುಳ್ಳುವಾದಿ ಎಂದು ಹೇಳುತ್ತೀರೋ ಆ ಸತ್ಯಸಂಧ ಪ್ರೇಮಿ ತಾನು ಪ್ರೀತಿಸುತ್ತಿದ್ದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಗ್ರಹಭರಿತ ವ್ಯಕ್ತಿತ್ವದ ಬಗ್ಗೆ ಬರೆದ ಮಾತುಗಳು ಮೇಲೆ ಉಲ್ಲೇಖಿಸಿದವುಗಳಾಗಿವೆ. ಆ ಮಹಾನುಭಾವರ ಪ್ರತಿಯೊಂದು ನಡೆನುಡಿ ತನ್ನ ನೇತಾರ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರನ್ನು ಅನುಸರಿಸುವ ಪ್ರಕಾರವಾಗಿತ್ತು. ಹಝ್ರತ್ ಪೈಗಂಬರರ(ಸ) ವ್ಯಕ್ತಿತ್ವದ ಬಗ್ಗೆ ಎಂತಹ ತಳಸ್ಪರ್ಶಿ ಜ್ಞಾನ, ತಿಳುವಳಿಕೆ ಹಝ್ರತ್ ಮಸೀಹ್ ಮೌಊದ್‌ರ(ಅ) ಲೇಖನದಲ್ಲಿ ಪ್ರಕಟವಾಗಿದೆ ಎಂದು ನೋಡಿರಿ. ಈ ರೀತಿಯ ಉಲ್ಲೇಖಗಳನ್ನು ನಮ್ಮ ವಿರೋಧಿಗಳು ತಮ್ಮ ಸಾಹಿತ್ಯದಲ್ಲಿ ತೋರಿಸಲಿ.

ಹಝ್ರತ್ ಮಸೀಹ್ ಮೌಊದ್(ಅ) ಉಪದೇಶಿಸಿದ ಹಾಗೆ ನಮ್ಮ ಜಮಾಅತಿನ ಜನರು ಯಾವಾಗಲೂ ವರ್ತಿಸುತ್ತಾರೆ. ನಾವು ದೇಶದ ನಿಯಮಗಳನ್ನು ಪಾಲಿಸುತ್ತಾ ಸಹಿಷ್ಣುತೆಯಿಂದ ವರ್ತಿಸುತ್ತೇವೆ.

ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದ್ದಾರೆ: "ಎಲ್ಲ ಮನುಷ್ಯರೊಂದಿಗೆ ದಯಾಪರತೆಯಿಂದ ವರ್ತಿಸುವುದೇ ನಮ್ಮ ಧರ್ಮದ ಸಂಕ್ಷಿಪ್ತ ರೂಪವಾಗಿದೆ. ಆದರೆ ದೇವಭಯವಿಲ್ಲದೆ ನಮ್ಮ ಪವಿತ್ರ ಪೈಗಂಬರರನ್ನು(ಸ) ಕೆಟ್ಟ ಶಬ್ದಗಳನ್ನು ಬಳಸಿ ಅನ್ಯಾಯದಿಂದ ನಿಂದಿಸುವವರೊಂದಿಗೆ ಮತ್ತು ಕೊಳಕು ಸುಳ್ಳು ಆರೋಪಗಳನ್ನು ಮಾಡುತ್ತಾ ಬೈಯ್ಯುತ್ತಾ ಇರುವುದನ್ನು ಬಿಟ್ಟು ಬಿಡದವರೊಂದಿಗೆ ನಾವು ಹೇಗೆ ತಾನೆ ಮೈತ್ರಿ ಸಂಬಂಧ ಸ್ಥಾಪಿಸಲು ಸಾಧ್ಯ? ನಾನು ಸತ್ಯವಾಗಿ ಹೇಳುತ್ತೇನೆ – ನಾವು ಮರುಭೂಮಿಯ ಸರ್ಪಗಳೊಂದಿಗೂ ಕಾಡಿನ ತೋಳಗಳೊಂದಿಗೂ ಸೌಹಾರ್ದದಿಂದ ವರ್ತಿಸಲು ಸಾಧ್ಯವಿದ್ದರೂ ನಮ್ಮ ಜೀವಕ್ಕಿಂತಲೂ ಮಾತಾಪಿತರಿಗಿಂತಲೂ ಹೆಚ್ಚು ನಮಗೆ ಪ್ರಿಯರಾದ ನಮ್ಮ ಪೈಗಂಬರರ ಮೇಲೆ ಕೊಳಕು ದೂಷಣೆ ಮಾಡುವವರೊಂದಿಗೆ ಸೌಹಾರ್ದದಿಂದಿರಲು ಸಾಧ್ಯವಿಲ್ಲ. ಅಲ್ಲಾಹನು ನಮ್ಮನ್ನು ಇಸ್ಲಾಮ್‌ನಲ್ಲಿಯೇ ಮೃತಪಡಿಸಲಿ. ನಮ್ಮ ವಿಶ್ವಾಸಕ್ಕೆ ಕುಂದುಂಟಾಗುವ ಯಾವ ಕೆಲಸವನ್ನೂ ನಾವು ಮಾಡಲು ಬಯಸುವುದಿಲ್ಲ."

**(ಪೈಗಾಮೆ ಸುಲ್‌ಹ್– ರೂಹಾನೀ ಖಝಾಇನ್ – ಸಂಪುಟ 23, ಪುಟ 459)**

ಇದಾಗಿದೆ ನಮ್ಮ ಅಧ್ಯಾಪನೆ. ಇದು ಹಝ್ರತ್ ಮಸೀಹ್ ಮೌಊದ್(ಅ) ನಮಗೆ ನೀಡಿದ ಉಪದೇಶವಾಗಿದೆ. ನಮ್ಮ ಹೃದಯಗಳಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಪ್ರಜ್ವಲಿಸಲಾದ ಪ್ರೇಮದ ಅಗ್ನಿ, ಅದರ ಸರಿಯಾದ ಜ್ಞಾನ ನಮಗೆ ನೀಡಿದುದು ಹಝ್ರತ್ ಮಸೀಹ್ ಮೌಊದ್(ಅ) ಆಗಿದ್ದಾರೆ. ನಮ್ಮ ಪ್ರೇಮದ ಬಗ್ಗೆ ಇಷ್ಟೆಲ್ಲ ಸಾಕ್ಷ್ಯಾಧಾರಗಳಿರುವಾಗ ವ್ಯಂಗ್ಯಚಿತ್ರ ಪ್ರಕಟಿಸಲು ಪತ್ರಿಕೆಗೂ ಡೆನ್ಮಾರ್ಕ್ ಸರಕಾರಕ್ಕೂ ಅಹ್ಮದಿಯರು ಧೈರ್ಯ ನೀಡಿದ ನಂತರ ಪತ್ರಿಕೆ ವ್ಯಂಗ್ಯಚಿತ್ರ ಪ್ರಕಟಿಸಿತು ಎಂದು ನಮ್ಮ ಬಗ್ಗೆ ಸುಳ್ಳು ಆರೋಪ ಮಾಡುತ್ತಾರೆ. ಇಂತಹ ಸುಳ್ಳು ಆರೋಪ ಮಾಡುವವರ ಮೇಲೆ ಅಲ್ಲಾಹನ ಶಾಪ ಬಂದೆರಗಲಿ ಎಂದು ಪ್ರಾರ್ಥಿಸುವುದರ ಹೊರತು ನಾವು ಬೇರೇನೂ ಮಾಡಲಾರೆವು.

## ಜಿಹಾದ್ ಬಿಸ್ಸೈಫ್ (ಖಡ್ಗ ಬಳಸಿದ ಜಿಹಾದ್) ಇದರ ವಾಸ್ತವಿಕತೆ

ಇನ್ನೊಂದು ವಿಷಯ ಜಿಹಾದ್ ರದ್ದುಗೊಳಿಸಿದ ಬಗ್ಗೆಯಾಗಿದೆ. ವರದಿಗಾರ ಮೊದಲನೆಯ ವಿಷಯವಾಗಿ ಇದರ ಬಗ್ಗೆ ಬರೆದಿದ್ದನು. ನಾವು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) (ನಊಧು ಬಿಲ್ಲಾಹ್) ನಬಿ ಎಂದು ನಂಬುವುದಿಲ್ಲ, ಅವರ ಉಪದೇಶಗಳು ರದ್ದುಗೊಂಡಿವೆ ಎಂದು ನಾವು ನಂಬುತ್ತೇವೆ ಎಂದು ವರದಿಗಾರನು ಸುಳ್ಳು ಆರೋಪ ಮಾಡಿದ್ದರಿಂದ ಅದರ ಬಗ್ಗೆ ನಾನು ಮೊದಲು ವಿವರಣೆ ನೀಡಿದೆ.

ವರದಿಗಾರ ಬರೆದ  ಇನ್ನೊಂದು ವಿಷಯ ಜಿಹಾದ್ ರದ್ದು ಗೊಳಿಸಿದ ಬಗ್ಗೆಯಾಗಿದೆ. ಕೆಲವು ದಿನಗಳ ಹಿಂದೆ ಮುಸ್ಲಿಮ್ ನಾಯಕರು ಜಿಹಾದ್ ಬಗ್ಗೆ ಹೇಳಿಕೆ ನೀಡಿದ್ದಾರೆ. ಇದರ ಬಗ್ಗೆ ಈ ಮುಸ್ಲಿಮ್ ನಾಯಕರು ಯಾರಿಂದ ನೆರವು ಪಡೆದು ತಿನ್ನುತ್ತಾರೋ, ಅವರು ಈ ಮುಸ್ಲಿಮ್ ನಾಯಕರ ಮೇಲೆ ಒತ್ತಡ ಹೇರಿದಾಗ, ಅವರು ತಮ್ಮ ಮೇಲೆ ಒತ್ತಡ ಹೇರಿದವರು ಆದೇಶಿಸಿದ ಪ್ರಕಾರ ಹೀಗೆ ಹೇಳಿದರು: "ಇಂದಿನ ದಿನಗಳಲ್ಲಿ ಜಿಹಾದಿಗೆ ಕೊಡಲಾಗುವ ಅರ್ಥ ಅಥವಾ ಕೆಲವು ಮುಸ್ಲಿಮ್ ಸಂಘಟನೆಗಳು ಆಗಾಗ ಮಾಡುತ್ತಿರುವ ಕೃತ್ಯಗಳು ಜಿಹಾದ್ ಅಲ್ಲ. ಅವು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿವೆ." ಈ ಮುಸ್ಲಿಮ್ ನಾಯಕರ ಹೇಳಿಕೆ ಪತ್ರಿಕೆಗಳಲ್ಲಿ ಮುದ್ರಿತವಾಗಿವೆ.

ಅಹ್ಮದಿಯಾ ಜಮಾಅತ್ ಅದರ ಸ್ಥಾಪನೆಯ ಮೊದಲನೆಯ ದಿನದಿಂದಲೇ ಈ ನಿಲುವನ್ನು, ಈ ಉಪದೇಶವನ್ನು ಹೊಂದಿದೆ. ಈ ಕಾಲಘಟ್ಟದ  ಪರಿಸ್ಥಿತಿಯಲ್ಲಿ ಜಿಹಾದ್ ಸ್ಥಗಿತಗೊಳಿಸುವುದು ಇಸ್ಲಾಮೀ ಧರ್ಮ ತತ್ವಗಳಿಗೆ ಅನುಸಾರವಾಗಿದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು:

"ನಮ್ಮ ಪೈಗಂಬರ್(ಸ) ಮತ್ತು ಅವರ ಹಿರಿಯ ಶಿಷ್ಯರು ಮಾಡಿದ ಯುದ್ಧಗಳು ಅವಿಶ್ವಾಸಿಗಳ ಆಕ್ರಮಣದಿಂದ ತಮ್ಮನ್ನು ರಕ್ಷಿಸಿಕೊಳ್ಳಲಿಕ್ಕಾಗಿತ್ತು ಅಥವಾ ಶಾಂತಿಯನ್ನು ಕಾಪಾಡಲು ಆಗಿತ್ತು. ಯಾರು ಖಡ್ಗ ಬಳಸಿ ಧರ್ಮವನ್ನು ತಡೆಯಲು ಬಯಸುತ್ತಾರೋ ಅವರನ್ನು ಖಡ್ಗ ಬಳಸಿಯೇ ಹಿಂದೆ ಸರಿಸಬೇಕಿತ್ತು. ಆದರೆ ಈಗ ವಿರೋಧಿಗಳಲ್ಲಿ

ಯಾರು ಧರ್ಮಕ್ಕೋಸ್ಕರ ಖಡ್ಗ ಎತ್ತಿಕೊಳ್ಳುತ್ತಾರೆ? ಮುಸ್ಲಿಮರಾಗುವವರನ್ನು ಯಾರು ತಡೆಯುತ್ತಾರೆ? ಮಸ್‌ಜಿದ್‌ಗಳಲ್ಲಿ ನಮಾಝ್ ಮಾಡುವುದನ್ನು ಯಾರು ತಡೆಯುತ್ತಾರೆ? ಅಝಾನ್ ಕರೆ ನೀಡುವುದನ್ನು ಯಾರು ತಡೆಯುತ್ತಾರೆ?"

**(ತಿರ್‌ಯಾಖುಲ್ ಖುಲೂಬ್ – ರೂಹಾನೀ ಖಝಾಇನ್ – ಸಂಪುಟ 15 ಪುಟ 159–160)**

ಪಾಕಿಸ್ತಾನದಲ್ಲಿ ಅಹ್ಮದಿಯರು ಅಝಾನ್ ಕರೆ ನೀಡುವುದನ್ನು ತಡೆಯಲಾಗುತ್ತದೆ. ಹೀಗಿದ್ದರೂ ನಾವು ಮೌನವಾಗಿದ್ದೇವೆ. ಯಾವುದೇ ರೀತಿಯ ಗದ್ದಲ ಮಾಡಿಲ್ಲ. ಅಝಾನ್ ಕರೆ ನೀಡದೆ ನಾವು ನಮಾಝ್ ಅನುಷ್ಠಿಸುತ್ತಿದ್ದೇವೆ.

ಪುನಃ ಹಝ್‌ರತ್ ಮಸೀಹ್ ಮೌಊದ್[ಅ] ಹೀಗೆ ಬರೆದಿದ್ದಾರೆ: "ಬುಖಾರಿಯ ಹದೀಸು ಗ್ರಂಥದಲ್ಲಿ ವಾಗ್ದತ್ತ ಮಸೀಹರ ಬಗ್ಗೆ ಸ್ಪಷ್ಟವಾಗಿ 'ಯಝಉಲ್ ಹರ್‌ಬ' – ವಾಗ್ದತ್ತ ಮಸೀಹ್ ಯುದ್ಧ ಮಾಡಲಾರರು, ಯುದ್ಧವನ್ನು ಸ್ಥಗಿತಗೊಳಿಸುವರು ಎಂದು ಬರೆದಿದೆ. ಆಶ್ಚರ್ಯದ ವಿಷಯವೇನೆಂದರೆ, ಪವಿತ್ರ ಖುರ್‌ಆನಿನ ನಂತರ ಸಹೀಹ್ ಬುಖಾರಿ ಅತ್ಯಂತ ಸತ್ಯಸಂಧ ಗ್ರಂಥವೆಂದು ನೀವು ಒಂದು ಕಡೆ ಹೇಳುತ್ತಿರುವಿರಿ. ಇನ್ನೊಂದು ಕಡೆ ಸಹೀಹ್ ಬುಖಾರಿಗೆ ವಿರುದ್ಧವಾದ ಹದೀಸುಗಳನ್ನು ನಂಬುತ್ತೀರಿ."

**(ತಿರ್‌ಯಾಖುಲ್ ಖುಲೂಬ್ – ರೂಹಾನೀ ಖಝಾಇನ್ – ಭಾಗ 15 ಪುಟ 159)**

ಅಹ್ಮದಿಯಾ ಜಮಾಅತಿನ ನಿಲುವು ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಗೆ ಅನುಸಾರವಾಗಿದೆ. ಈಗ ಜಿಹಾದ್, ಜಿಹಾದ್ ಎಂದು ಹೇಳುತ್ತಾ ಅಲೆದಾಡುವ ಈ ಜನರು ಜಿಹಾದ್ ನೆಪದಲ್ಲಿ ಭೀಕರ ಕೃತ್ಯಗಳನ್ನು ಹೊರತು ಇನ್ನೇನನ್ನೂ ಮಾಡುವುದಿಲ್ಲ. ಇದು ಜಿಹಾದ್ ಅಲ್ಲ. ಈ ಜನರು ಮಾಡುವುದು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣ ವಿರುದ್ಧವಾಗಿದೆ ಎಂದು ನಾವು ಸ್ಪಷ್ಟವಾಗಿ ಘೋಷಿಸುತ್ತೇವೆ, ಹೇಳುತ್ತೇವೆ, ಹೇಳುತ್ತಾ ಹೋಗುವೆವು.

ನಿನ್ನೆ ಕರಾಚಿಯಲ್ಲಿ ಆತ್ಮಹತ್ಯಾತ್ಮಕ ಆಕ್ರಮಣ ನಡೆಯಿತು. ಇಂತಹ ಜನರೇ ಇಸ್ಲಾಮನ್ನು ಅಪಕೀರ್ತಿಗೆ ಗುರಿಪಡಿಸುತ್ತಾರೆ. ಇಂತಹ ಆಕ್ರಮಣಗಳಿಂದ ಸ್ವಂತ ದೇಶದ ನಿರಪರಾಧಿಗಳ ಜೀವವನ್ನೂ ಈ ಜನರು ಹರಣ ಮಾಡುತ್ತಾರೆ. ಇಂತಹ ತಪ್ಪು ಕೆಲಸಗಳನ್ನು ಮಾಡಿ ಈ ಜನರೇ ಇಸ್ಲಾಮ್ ಧರ್ಮ ತತ್ವಗಳನ್ನೂ ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಉಪದೇಶಗಳನ್ನೂ ತಿರಸ್ಕರಿಸುತ್ತಾರೆ. ಅಹ್ಮದಿಯರು ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಸಂದೇಶವನ್ನು ಲೋಕದಲ್ಲೆಡೆ ತಲಪಿಸಲು ಜಿಹಾದ್ ಮಾಡುತ್ತಾ ಇದ್ದಾರೆ. ಈ ಜನರಲ್ಲಿ ಯಾರು ಈ ರೀತಿ ಇಸ್ಲಾಮಿನ ಸಂದೇಶವನ್ನು ಲೋಕದ ಮೂಲೆ ಮೂಲೆಗಳಿಗೆ ಅಹ್ಮದಿಯರ ಹಾಗೆ ತಲಪಿಸುವ ಕೆಲಸದಲ್ಲಿ ನಿರತರಾಗಿದ್ದಾರೆ? ನಿಮ್ಮ ಭೀಕರ ಕೃತ್ಯಗಳಲ್ಲಿ ಮತ್ತು ಇಸ್ಲಾಮನ್ನು ಅಪಕೀರ್ತಿಗೆ ಗುರಿಪಡಿಸುವ ಕೆಲಸದಲ್ಲಿ ಅಹ್ಮದಿಯರು ಹಿಂದೆ ಎಂದೂ ಸೇರಿರಲಿಲ್ಲ ಮತ್ತು ಮುಂದೆ ಸಹ ಎಂದೂ ಸೇರಲಾರರು.

ಪ್ರಕಟವಾದ ವರದಿ ಅಹ್ಮದಿಯಾ ಜಮಾಅತನ್ನು ಅಪಕೀರ್ತಿಗೊಳಪಡಿಸಲು ಮಾಡಿದ ನಿಂದನೀಯ ಪ್ರಯತ್ನವಾಗಿದೆ. ಇಂತಹ ಪ್ರಯತ್ನಗಳು ಹಿಂದೆ ಸಹ ನಡೆದಿದ್ದುವು.

## ಅಹ್ಮದಿಯಾ ಜಮಾಅತ್ ವಿರುದ್ಧ ಸುಳ್ಳು ಸುದ್ದಿ ಮತ್ತು ನೀಚ ಗೂಢ ಕಾರಸ್ಥಾನದ ಬಗ್ಗೆ ಸಂಪೂರ್ಣವಾದ ಅನ್ವೇಷಣೆ ನಡೆಸಬೇಕು. ಆಗ ಅದರ ಮೂಲ ಉದ್ದೇಶವೇನೆಂದು ಬಹಿರಂಗವಾಗುವುದು

ನಾನು 'ಜಂಗ್' ಪತ್ರಿಕೆಗೂ ಹೇಳಲು ಬಯಸುತ್ತೇನೆ. ಇದು ಪಾಕಿಸ್ತಾನದ ಹಾಗೆ ನಿಯಮಗಳ ಆಧಿಪತ್ಯ ಇಲ್ಲದ ದೇಶವಲ್ಲ. ಪಾಕಿಸ್ತಾನದಲ್ಲಿ ಮುಲ್ಲಾಗಳ ಇಚ್ಛೆ ಪ್ರಕಾರ ನಿಯಮಗಳು ಜಾರಿಗೊಳ್ಳುತ್ತವೆ. ಅಲ್ಲಿ ನ್ಯಾಯಪಾಲನೆ ಇರುವುದಿಲ್ಲ. ಆದರೆ ಇಲ್ಲಿನ ದೇಶಗಳಲ್ಲಿ ಸ್ವಲ್ಪ ಮಟ್ಟಿಗಾದರೂ ನ್ಯಾಯಪಾಲನೆ ಇದೆ. ನಾವು ಎಲ್ಲ ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದೇವೆ. ವರದಿಗಳನ್ನು ತರಿಸುತ್ತಿದ್ದೇವೆ. 'ಜಂಗ್' ಪತ್ರಿಕೆಯ ವರದಿಗಾರನ ಪ್ರಕಾರ ಡೆನ್ಮಾರ್ಕ್ ದೇಶದ ಅಧಿಕಾರಿ ಆ ವರದಿಗಾರನೊಂದಿಗೆ, "ಹಝ್ರತ್ ಮುಹಮ್ಮದ್ ಪೈಗಂಬರರ(ಸ) ತತ್ವೋಪದೇಶಗಳು ರದ್ದುಗೊಳಿಸಲ್ಪಟ್ಟಿವೆ ಎಂದು ಅಹ್ಮದಿಯರು ನಮಗೆ ದೃಢಪಡಿಸಿ ಹೇಳಿದುದರಿಂದ ನಾವು ಈ ವ್ಯಂಗ್ಯಚಿತ್ರಗಳನ್ನು ಪ್ರಕಟಿಸಿದೆವು" ಎಂದು ಹೇಳಿದುದಾಗಿ ವರದಿಗಾರನು ಬರೆದಿದ್ದಾನೆ. ಇದರ ಮೂಲಕ ಅವನು ಡೆನ್ಮಾರ್ಕ್ ಸರಕಾರದ ಮೇಲೆಯೂ ದೋಷಾರೋಪ ಮಾಡುತ್ತಿದ್ದಾನೆ. ಡೆನ್ಮಾರ್ಕ್ ಸರಕಾರ ಸಹ ಈ ಕೆಲಸದಲ್ಲಿ ಭಾಗವಹಿಸಿದೆ ಎಂದು ಆರೋಪಿಸುತ್ತಿದ್ದಾನೆ. ಆದರೆ ಡೆನ್ಮಾರ್ಕ್ ಪ್ರಧಾನ ಮಂತ್ರಿ ಸ್ಪಷ್ಟವಾಗಿ ಅನೇಕ ಸಾರಿ ಹೀಗೆ ಹೇಳಿದ್ದಾರೆ: ಪತ್ರಿಕೆ ಮಾಡಿದ ಕೆಲಸವನ್ನು ನಾವು ಇಷ್ಟಪಡುವುದಿಲ್ಲ. ಆದರೆ ಪತ್ರಿಕೆಗಳಿಗಿರುವ ಸ್ವಾತಂತ್ರ್ಯದ ಕಾರಣ ನಾವು ಏನನ್ನೂ ಮಾಡಲಾರೆವು.

ಪತ್ರಿಕೆಗಳ ಸ್ವಾತಂತ್ರ್ಯ ಎಂದರೇನು ಎಂಬುದು ಒಂದು ಬೇರೆ ವಿಷಯವಾಗಿದೆ. ಜಂಗ್ ಪತ್ರಿಕೆಯ ವರದಿಗಾರ ಹೇಳಿದುದನ್ನು ಅಲ್ಲಿನ ಪ್ರಧಾನ ಮಂತ್ರಿಯೇ ನಿರಾಕರಿಸುತ್ತಾರೆ. ಆದರೆ ಜಂಗ್ ಪತ್ರಿಕೆ ಹೇಳುವುದು ಡೆನ್ಮಾರ್ಕ್ ಸರಕಾರ ಅದರಲ್ಲಿ ಜೊತೆಸೇರಿದೆ ಎಂದಾಗಿದೆ. ಆದುದರಿಂದ ಡೆನ್ಮಾರ್ಕ್ ಸರಕಾರ ಸಹ ಈ ವರದಿ ಬಗ್ಗೆ ಕ್ರಮ ಕೈಗೊಳ್ಳಬಹುದಾಗಿದೆ. ಈಗಾಗಲೇ ಡೆನ್ಮಾರ್ಕ್ ಸರಕಾರದ ವಿರುದ್ಧ ಮುಸ್ಲಿಮ್ ದೇಶಗಳಲ್ಲಿ ಅಗ್ನಿಯನ್ನು ಪ್ರಜ್ವಲಿಸಲಾಗಿದೆ. 'ಜಂಗ್' ಪತ್ರಿಕೆ ಒಂದು ನಿರಾಧಾರ ವರದಿ ಪ್ರಕಟಿಸಿ ಈ ಬೆಂಕಿಗೆ ಎಣ್ಣೆ ಹೊಯ್ದು ಅಗ್ನಿಯನ್ನು ಇನ್ನಷ್ಟು ಪ್ರಜ್ವಲಿಸುವಂತೆ ಮಾಡಿದೆ. ನಾವು ಡೆನ್ಮಾರ್ಕ್ ದೇಶದ ಉನ್ನತ ಭದ್ರತಾ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಅವರು ಸ್ಪಷ್ಟವಾಗಿ ಪತ್ರಿಕೆಯ ವರದಿಯನ್ನು ಅಲ್ಲಗಳೆದರು. ಇಂತಹ ಭೇಟಿ ನಡೆದಿಲ್ಲ ಮತ್ತು ಅಂತಹ ವರದಿ ನಮಗೆ ತಲಪಿಲ್ಲ ಎಂದು ಹೇಳಿದರು. ಇದರ ಬಗ್ಗೆ ಇನ್ನಷ್ಟು ಅನ್ವೇಷಣೆ ನಡೆಸುವೆವು ಎಂದು ಅವರು ಹೇಳಿದ್ದಾರೆ. ಆಗ ಇನ್ನಷ್ಟು ಹೆಚ್ಚು ವಿವರಗಳು ಬಹಿರಂಗವಾಗುವುವು. ಜಂಗ್ ಪತ್ರಿಕೆಯಲ್ಲಿ ವೀಡಿಯೋ ಟೇಪ್ ಇದೆ ಎಂದು ಬರೆಯಲಾಗಿತ್ತು. ನಾವು ಅದರ ಬಗ್ಗೆ ವಿಚಾರಿಸಿದಾಗ ಪತ್ರಿಕೆಯವರು ವೀಡಿಯೋ ಟೇಪ್ ಅಲ್ಲ, ಆಡಿಯೋ ಟೇಪ್ ಇದೆ ಎಂದು ಹೇಳುತ್ತಾರೆ. ನಾನು ಹೇಳಿದ ಹಾಗೆ ಸುಳ್ಳಿಗೆ ಅಡಿಪಾಯವಿರುವುದಿಲ್ಲ. ಅವರು ತಮ್ಮ ಹೇಳಿಕೆ ಬದಲಾಯಿಸುತ್ತಾ ಇರುತ್ತಾರೆ. ಇದು ಪಾಕಿಸ್ತಾನಿ ಪತ್ರಿಕೆಗಳ ಅಥವಾ ಪಾಕಿಸ್ತಾನದ ಪ್ರಭಾವ ಇರುವ ಪತ್ರಿಕೆಗಳ ಸ್ಥಿತಿಯಾಗಿದೆ.

ನಾನು ಹೇಳಲು ಬಯಸುವುದೇನೆಂದರೆ, ಈ ವಿಷಯ ಇಲ್ಲಿಗೆ ಮುಗಿತಾಯವಾಗಲಾರದು. ನಮ್ಮ ಮೇಲೆ ಮಾಡಲಾದ ನೀಚ ದೋಷಾರೋಪಗಳು

ಮತ್ತು ಅಹ್ಮದಿಯರ ವಿರುದ್ಧ ರಚಿಸಲಾದ ಗೂಢ ಕಾರಸ್ಥಾನಗಳ ಬಗ್ಗೆ ಇಲ್ಲಿನ ಕಾನೂನು ಕಾಯಿದೆಗಳ ಪ್ರಕಾರ ಕ್ರಮ ಕೈಗೊಳ್ಳುವೆವು. ಮುಸ್ಲಿಮರಿಗೆ ಮತ್ತು ವಿಶಿಷ್ಟವಾಗಿ ಸಾತ್ವಿಕ ಪ್ರಕೃತಿಯ ಮುಸ್ಲಿಮರಿಗೆ ಈ ತಥಾಕಥಿತ ವಿದ್ಯಾವಂತರಾದ ಜನರ ನೈತಿಕ ಮಟ್ಟ ಹೇಗಿದೆ ಎಂದು ತಿಳಿಯಲಿ. ನಾನು ಹಿಂದೆ ಹೇಳಿದ ಹಾಗೆ ನಮ್ಮ ವಿರುದ್ಧ ನೀಚ ದೋಷಾರೋಪಗಳನ್ನು ಮಾಡುತ್ತಾ ಇರುತ್ತಾರೆ. ಆದರೆ ನಾವು ಸಹನೆಯಿಂದ ಹಝ್ರತ್ ಮಸೀಹ್ ಮೌಊದ್‌ರ[ಅ] ಆದೇಶಗಳನ್ನೂ ಉಪದೇಶಗಳನ್ನೂ ಮುಂದಿರಿಸುತ್ತೇವೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ನಮ್ಮ ಜಮಾಅತ್ ಮತ್ತು ನಾವು ಯಾವ ಸ್ಥಿತಿಯಲ್ಲಿ ಇರುವೆವು ಎಂದು ನನಗೆ ಚೆನ್ನಾಗಿ ತಿಳಿದಿದೆ. ಈ ಸ್ಥಿತಿಯಲ್ಲಿ ಅಲ್ಲಾಹನ ಬೆಂಬಲ ಮತ್ತು ಸಹಾಯ ನಮಗೆ ಲಭಿಸುತ್ತಾ ಇರುವುದು. ನಾವು ನೇರಮಾರ್ಗದಲ್ಲಿ ನಡೆಯಬೇಕು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಪೂರ್ಣವಾಗಿಯೂ ಸತ್ಯವಾಗಿಯೂ ಅನುಸರಿಸಬೇಕು. ಪವಿತ್ರ ಖುರ್‌ಆನಿನ ಪರಿಶುದ್ಧ ಉಪದೇಶಗಳನ್ನು ನಮ್ಮ ಜೀವಿತದ ಮಾರ್ಗದರ್ಶಿಯನ್ನಾಗಿ ಮಾಡಿಕೊಳ್ಳಬೇಕು. ನಾವು ಕೇವಲ ಬಾಯಿ ಮಾತುಗಳಿಂದಲ್ಲ, ನಮ್ಮ ಕೆಲಸಗಳ ಮೂಲಕ ಇವುಗಳನ್ನು ಸಾಬೀತುಗೊಳಿಸಬೇಕು. ನಾವು ಈ ರೀತಿ ವರ್ತಿಸುವುದಾದರೆ, ನೆನಪಿಡಿರಿ, ಲೋಕದ ಎಲ್ಲರೂ ಜೊತೆಗೂಡಿ ನಮ್ಮನ್ನು ನಾಶಮಾಡಲು ಬಯಸಿದರೂ ನಾವು ನಾಶವಾಗಲಾರೆವು. ಏಕೆಂದರೆ ಅಲ್ಲಾಹನು ನಮ್ಮ ಜೊತೆಗೆ ಇರುವವನು." 

**(ಅಲ್‌ಹಕಮ್ 24–9–1904 ಪುಟ–4)**

ಈ ಉಪದೇಶದ ಪ್ರಕಾರ ವರ್ತಿಸಲು ಅಲ್ಲಾಹನು ನಮಗೆ ಯಾವಾಗಲೂ ಭಾಗ್ಯ ನೀಡುವವನಾಗಲಿ. ಅಲ್ಲಾಹನು ಯಾವಾಗಲೂ ನಮ್ಮ ಜೊತೆಗಾರನಾಗಲಿ ಮತ್ತು ಈ ಕೆಟ್ಟ ಪ್ರಕೃತಿ ಹೊಂದಿದವರನ್ನು ನೀತಿ ಪಾಠದ ಚಿಹ್ನೆಗಳನ್ನಾಗಿ ಮಾಡುವವನಾಗಲಿ.

❖❖❖❖❖❖❖

# ಮುಸ್ಲಿಮರ ಕೆಲವು ಗುಂಪುಗಳು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿ ಮಾಡುವ ಕೃತ್ಯಗಳು ಇಸ್ಲಾಮ್ ಧರ್ಮದ ವಿರುದ್ಧ ಮುಸ್ಲಿಮೇತರರು ಆಕ್ರಮಣ ನಡೆಸಲು ಸಹಾಯ ಮಾಡುತ್ತವೆ

## ಜುಮುಅ ಖುತ್‌ಬ 10–3–2006

ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹುಝೂರ್ ಹೀಗೆ ಹೇಳಿದರು:

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಮುಸ್ಲಿಮೇತರರು ಹೀಗೆ ಆರೋಪಿಸುತ್ತಾರೆ: (ನಊಧುಬಿಲ್ಲಾಹ್ – ಅಲ್ಲಾಹನ ಅಭಯ ಯಾಚಿಸುತ್ತೇವೆ.) "ಹಝ್ರತ್ ಪೈಗಂಬರರು(ಸ) ತಂದ ಧರ್ಮದಲ್ಲಿ ಧಾರ್ಮಿಕ ಸೌಹಾರ್ದ, ಸಹಿಷ್ಣುತೆ ಮತ್ತು ಸ್ವಾತಂತ್ರ್ಯದ ಕಲ್ಪನೆಗಳೇ ಇಲ್ಲ. ಈ ಉಪದೇಶಗಳ ಪ್ರಭಾವ ಇಂದು ಸಹ ಮುಸ್ಲಿಮರ ಪ್ರಕೃತಿಯ ಭಾಗಗಳಾಗಿ ಇವೆ."

ಇದರ ಬಗ್ಗೆ ನಾನು ಅನೇಕ ಸಾರಿ ವಿವರಿಸಿದ್ದೇನೆ. ದುರದೃಷ್ಟಕರವಾಗಿ, ಮುಸ್ಲಿಮರ ಕೆಲವು ವಿಭಾಗಗಳು ಮತ್ತು ಗುಂಪುಗಳು ಮುಸ್ಲಿಮೇತರರಲ್ಲಿ ಇಂತಹ ಭಾವನೆ ಉಂಟು ಮಾಡಲು ಮತ್ತು ಅವುಗಳನ್ನು ಸ್ಥಾಪಿಸಲು ಸಹಾಯ ಮಾಡುತ್ತಿವೆ. ದೌರ್ಭಾಗ್ಯವಶಾತ್, ಈ ಗುಂಪುಗಳ ಇಂತಹ ನಿಲುವುಗಳು ಮತ್ತು ಕೃತ್ಯಗಳ ಕಾರಣದಿಂದ ಮುಸ್ಲಿಮೇತರ ಲೋಕದಲ್ಲಿ ಮತ್ತು ವಿಶಿಷ್ಟವಾಗಿ ಪಾಶ್ಚಾತ್ಯ ದೇಶಗಳಲ್ಲಿ ನಮ್ಮ ಪ್ರಿಯ ನೇತಾರ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಕೀಳು, ಅವಿವೇಕತನದ ಮತ್ತು ಅತ್ಯಂತ ಕೊಳಕು ಅಭಿಪ್ರಾಯಗಳನ್ನು ಜನರು ಪ್ರಕಟಿಸಲು ಸಂದರ್ಭಗಳನ್ನು ಒದಗಿಸಿ ಕೊಟ್ಟಿದೆ. ಕೆಲವು ವಿಭಾಗಗಳ ಮತ್ತು ಗುಂಪುಗಳ ಕೃತ್ಯಗಳು ಸಂಪೂರ್ಣವಾಗಿ ಇಸ್ಲಾಮೀ ತತ್ವೋಪದೇಶಗಳು ಮತ್ತು ನೈತಿಕ ನಿಯಮಗಳಿಗೆ ವಿರುದ್ಧವಾಗಿವೆ ಎಂದು ನಮಗೆ ತಿಳಿದಿದೆ. ಇಸ್ಲಾಮಿನ ಉಪದೇಶಗಳು ಎಷ್ಟು ಸುಂದರವಾಗಿವೆ ಎಂದರೆ ಅವುಗಳ ಸೌಂದರ್ಯದಿಂದ ಪ್ರತಿಯೊಬ್ಬ ಪಕ್ಷಪಾತ ರಹಿತ ವ್ಯಕ್ತಿ ಪ್ರಭಾವಿತನಾಗದೆ ಇರಲಾರನು.

### ಮುಸ್ಲಿಮೇತರರೊಂದಿಗೆ ಉತ್ತಮ ವರ್ತನೆ ಬಗ್ಗೆ ಇಸ್ಲಾಮ್ ಧರ್ಮದ ಸುಂದರ ಉಪದೇಶಗಳು

ಪವಿತ್ರ ಖುರ್‌ಆನ್‌ನಲ್ಲಿ ವಿವಿಧ ಸ್ಥಳಗಳಲ್ಲಿ ಇಸ್ಲಾಮ್ ಧರ್ಮದ ಸುಂದರ ತತ್ವಗಳ ಬಗ್ಗೆ ಪ್ರತಿಪಾದಿಸಲಾಗಿದೆ. ಅವುಗಳಲ್ಲಿ ಮುಸ್ಲಿಮೇತರರೊಂದಿಗೆ ಉತ್ತಮವಾಗಿ

ವರ್ತಿಸಬೇಕೆಂದೂ ಅವರ ಹಕ್ಕುಗಳ ಬಗ್ಗೆ ಕಾಳಜಿ ಹೊಂದಬೇಕೆಂದೂ ಅವರೊಂದಿಗೆ ನ್ಯಾಯಪೂರ್ಣವಾಗಿ ವರ್ತಿಸಬೇಕೆಂದೂ ಅವರ ಧರ್ಮದ ಮೇಲೆ ಯಾವ ಬಲಾತ್ಕಾರವನ್ನೂ ಮಾಡಬಾರದೆಂದೂ ಧರ್ಮಕ್ಕೆ ಸಂಬಂಧಿಸಿ ಯಾವ ಕಾಠಿಣ್ಯವನ್ನೂ ಮಾಡಬಾರದೆಂದೂ ಅನೇಕ ಆಜ್ಞೆಗಳನ್ನು ಮುಸ್ಲಿಮರಿಗೆ ಮುಸ್ಲಿಮೇತರರ ಬಗ್ಗೆ ನೀಡಲಾಗಿದೆ. ಕೆಲವು ಸಂದರ್ಭಗಳಲ್ಲಿ ಯುದ್ಧ ಮಾಡಲು ಅನುಮತಿಯನ್ನು ನೀಡಲಾಗಿದೆ. ಆದರೆ ಹಾಗೆ ಯುದ್ಧ ಮಾಡಬೇಕಾದುದು ಶತ್ರು ಯುದ್ಧವನ್ನು ಮೊದಲು ಪ್ರಾರಂಭಿಸಿದರೆ, ಒಪ್ಪಂದಗಳನ್ನು ಮುರಿದರೆ, ನ್ಯಾಯವನ್ನು ಹತ್ಯೆ ಮಾಡಿದರೆ ಮತ್ತು ದೌರ್ಜನ್ಯದಲ್ಲಿ ಮಿತಿ ಮೀರಿದರೆ ಮಾತ್ರವಾಗಿದೆ. ಇಂತಹ ಸಂದರ್ಭಗಳಲ್ಲಿಯೂ ಯಾವುದೇ ದೇಶದ ಯಾವುದೇ ಗುಂಪಿಗೆ ಯುದ್ಧ ಪ್ರಾರಂಭಿಸುವ ಹಕ್ಕು ಇರುವುದಿಲ್ಲ. ಸರಕಾರ ಅದರ ಬಗ್ಗೆ ಏನು ಮಾಡಬೇಕು ಎಂದು ನಿರ್ಧರಿಸಬೇಕು. ದೌರ್ಜನ್ಯವನ್ನು ಕೊನೆಗೊಳಿಸಲು ಸರಕಾರವೇ ನಿರ್ಧರಿಸಬೇಕು. ಪ್ರತಿಯೊಂದು ಜಿಹಾದಿ ಸಂಘಟನೆ ಎದ್ದು ನಿಂತು ಈ ಕೆಲಸ ಪ್ರಾರಂಭಿಸಬಾರದು.

## ಮಕ್ಕದ ಅವಿಶ್ವಾಸಿಗಳು ಮತ್ತು ಇಸ್ಲಾಮಿನ ಶತ್ರುಗಳು ಮಾಡಿದ ದೌರ್ಜನ್ಯಗಳ ವಿರುದ್ಧ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಪ್ರಕಟಿಸಿದ ವೈಭವಶಾಲಿ ಉತ್ತಮ ನಡೆವಳಿಕೆ

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದಲ್ಲಿ ಸಹ ಯುದ್ಧ ಪ್ರಾರಂಭ ಮಾಡುವ ವಿಶಿಷ್ಟ ಸಂದರ್ಭಗಳಲ್ಲಿ ಮುಸ್ಲಿಮರು ಪ್ರತಿರೋಧಾತ್ಮಕ ಯುದ್ಧ ಮಾಡಲು ನಿರ್ಬಂಧಿತರಾದರು. ಆದರೆ ಇಂದಿನ ಕಾಲದ ಜಿಹಾದಿ ಸಂಘಟನೆಗಳು ಯಾವುದೇ ನ್ಯಾಯಬದ್ಧ ಕಾರಣಗಳಿಲ್ಲದೆ, ಯಾವುದೇ ನ್ಯಾಯಬದ್ಧ ಅಧಿಕಾರವಿಲ್ಲದೆ ತಮ್ಮ ಯುದ್ಧ ಪ್ರೇಮಿ ಘೋಷಣೆಗಳಿಂದ ಮತ್ತು ಕೃತ್ಯಗಳಿಂದ ಮುಸ್ಲಿಮೇತರರಿಗೆ ಸಂದರ್ಭ ಒದಗಿಸಿ ಕೊಡುತ್ತವೆ ಮತ್ತು ಅವರು ಧೈರ್ಯದಿಂದಲೂ ಅತ್ಯಂತ ಹಟಮಾರಿತನದಿಂದಲೂ ನಿರ್ಲಜ್ಜೆಯಿಂದಲೂ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ವ್ಯಕ್ತಿತ್ವದ ಬಗ್ಗೆ ಅವಿವೇಕಭರಿತ ದೂಷಣೆ ಮಾಡುತ್ತಿರುತ್ತಾರೆ. ಆದರೆ ದಯಾನಿಧಿಯಾಗಿದ್ದ, ಮಾನವರೆಲ್ಲರ ಹಿತೈಷಿಯಾಗಿದ್ದ, ಮಾನವರ ಹಕ್ಕುಗಳ ಮಹತ್ವಶಾಲಿ ಸಂರಕ್ಷಕರಾಗಿದ್ದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ಥಿತಿ ಹೇಗಿತ್ತೆಂದರೆ, ಅವರು ಯುದ್ಧ ಕಾಲದಲ್ಲಿ ಕೂಡ ಶತ್ರುಗಳಿಗೆ ಅನುಕೂಲಕರವಾದ ಪರಿಸ್ಥಿತಿ ಉಂಟುಮಾಡುವ ಸಂದರ್ಭವನ್ನು ಬಿಟ್ಟು ಬಿಡುತ್ತಿರಲಿಲ್ಲ. ಅವರ ಜೀವಿತದ ಪ್ರತಿಯೊಂದು ಕೆಲಸ, ಅವರ ಜೀವಿತದ ಕ್ಷಣ ಕ್ಷಣಗಳು ಅವರು ದಯೆಯ ಸಾಕಾರ ರೂಪ ಎಂಬ ಬಗ್ಗೆ ಸಾಕ್ಷ್ಯ ನೀಡುತ್ತಿದ್ದುವು. ಅವರ ಎದೆಯಲ್ಲಿ ಎಂತಹ ಹೃದಯ ಮಿಡಿಯುತ್ತಿತ್ತೆಂದರೆ, ಅದಕ್ಕಿಂತ ಮಿಗಿಲಾಗಿ ಯಾವುದೇ ಹೃದಯ ದಯೆಯ ಉನ್ನತ ಮಟ್ಟ ಮತ್ತು ಆವಶ್ಯಕತೆಗಳನ್ನು ಈಡೇರಿಸಲು ಅವರ ಹಾಗೆ ಸಾಧ್ಯವಿರಲಿಲ್ಲ. ಶಾಂತಿ ಕಾಲದಲ್ಲೂ ಯುದ್ಧ ಕಾಲದಲ್ಲೂ ಮನೆಯಲ್ಲೂ ಮನೆಯ ಹೊರಗೆಯೂ ನಿತ್ಯ ವರ್ತನೆಗಳಲ್ಲೂ ಅನ್ಯ ಧರ್ಮದವರೊಂದಿಗೆ ಮಾಡಿದ ಒಪ್ಪಂದಗಳಲ್ಲೂ ಅವರು ಮನಸ್ಸಾಕ್ಷಿಯ ಸ್ವಾತಂತ್ರ್ಯ, ಧಾರ್ಮಿಕ ಸೌಹಾರ್ದದ ಉನ್ನತ ಮಟ್ಟದ ಉದಾಹರಣೆಗಳನ್ನು ಸ್ಥಾಪಿಸಿದರು. ಮಹಾ ಜಯಶಾಲಿಯಾಗಿ ಮಕ್ಕ ನಗರವನ್ನು ಪ್ರವೇಶಿಸಿದಾಗ ಅವರು ಸೋಲಿಸಿದ ಜನರೊಂದಿಗೆ ಕ್ಷಮೆ ಮತ್ತು ದಯೆಯೊಂದಿಗೆ

ವರ್ತಿಸಿದರು. ಅಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಸಹ ಪೂರ್ಣವಾಗಿ ನೀಡಲಾಯಿತು. لا إكراه في الدين – "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ" **(ಪವಿತ್ರ ಖುರ್‌ಆನ್ 2:257)** ಎಂಬ ಆಜ್ಞೆಯನ್ನು ಪಾಲಿಸುವ ಉನ್ನತ ಉತ್ತಮ ಉದಾಹರಣೆ ಪ್ರಕಟಿಸಿದರು. ಅವರು ಹೇಳಿದರು: "ಧರ್ಮ ನಿಮ್ಮ ಹೃದಯಕ್ಕೆ ಸಂಬಂಧಿಸಿದುದಾಗಿದೆ. ನೀವು ಸತ್ಯಧರ್ಮ ಅವಲಂಬಿಸಬೇಕೆಂದು ನಾನು ಇಚ್ಛಿಸುತ್ತೇನೆ. ನೀವು ನಿಮ್ಮ ಇಹಪರ ಜೀವಿತವನ್ನು ಸರಿಪಡಿಸಬೇಕು. ನೀವು ಕ್ಷಮಿಸಲ್ಪಡುವಂತಹ ಕೆಲಸ ಮಾಡಬೇಕು. ಆದರೆ ಅದರ ಬಗ್ಗೆ ಯಾವುದೇ ಬಲಾತ್ಕಾರವಿಲ್ಲ." ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಜೀವಿತ ಸೌಹಾರ್ದತೆ, ಧಾರ್ಮಿಕ ಸ್ವಾತಂತ್ರ್ಯ, ಮನಸ್ಸಾಕ್ಷಿ ಸ್ವಾತಂತ್ರ್ಯದ ಅಸಂಖ್ಯಾತ ಪ್ರಕಾಶಮಾನವಾದ ಉದಾಹರಣೆಗಳಿಂದ ತುಂಬಿವೆ. ಅವುಗಳಲ್ಲಿ ಕೆಲವನ್ನು ನಾನು ಪ್ರಸ್ತಾಪಿಸುತ್ತೇನೆ.

ಪ್ರವಾದಿ ಎಂದು ವಾದಿಸಿದ ನಂತರದ ಹದಿಮೂರು ವರ್ಷಗಳ ಕಾಲದ ಜೀವಿತದ ಬಗ್ಗೆ ಯಾರಿಗೆ ತಾನೆ ತಿಳಿದಿಲ್ಲ. ಅದೆಷ್ಟು ಕಷ್ಟಕರವಾದ ಕಾಲವಾಗಿತ್ತು! ಹಝ್ರತ್ ಪೈಗಂಬರರೂ[ಸ] ಅವರ ಶಿಷ್ಯರೂ ಎಷ್ಟು ದುಃಖಕರವಾದ, ಕಷ್ಟಕರವಾದ ರೀತಿಯಲ್ಲಿ ಜೀವಿಸಿದರು! ಮಧ್ಯಾಹ್ನದ ಹೊತ್ತು ಬಿಸಿಲಿನಿಂದ ಬೆಂದ ಮರಳಿನಲ್ಲಿ ಸತ್ಯವಿಶ್ವಾಸಿಗಳನ್ನು ಮಲಗಿಸಲಾಯಿತು. ಬಿಸಿ ಕಲ್ಲುಗಳನ್ನು ಅವರ ಎದೆಯ ಮೇಲಿರಿಸಲಾಯಿತು. ಕೊರಡೆಗಳಿಂದ ಹೊಡೆಯಲಾಯಿತು. ಮಹಿಳೆಯರ ಕಾಲುಗಳನ್ನು ಸೀಳಿ ಕೊಲ್ಲಲಾಯಿತು. ಅನೇಕರನ್ನು ಕೊಂದು ಹುತಾತ್ಮರನ್ನಾಗಿ ಮಾಡಲಾಯಿತು. ಹಝ್ರತ್ ಪೈಗಂಬರರ[ಸ] ಮೇಲೆ ಸಹ ವಿವಿಧ ರೀತಿಗಳಲ್ಲಿ ದೌರ್ಜನ್ಯ ಮಾಡಲಾಯಿತು. ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದಾಗ ಕೆಲವು ಸಾರಿ ಒಂಟೆಯ ಭಾರವಾದ ಜಠರವನ್ನೂ ಕರುಳುಗಳನ್ನೂ ಅವರ ಬೆನ್ನ ಮೇಲಿರಿಸಿದಾಗ ಅದರ ಭಾರದಿಂದ ಅವರಿಗೆ ಏಳಲು ಸಾಧ್ಯವಾಗುತ್ತಿರಲಿಲ್ಲ. ತಾಯಿಫ್‌ಗೆ ಹೋದಾಗ ಪುಂಡ ಹುಡುಗರು ಅವರಿಗೆ ಕಲ್ಲೆಸೆದು ಬೈದರು. ಹುಡುಗರ ನಾಯಕರು ಅವರನ್ನು ಉತ್ತೇಜಿಸುತ್ತಿದ್ದರು. ಹಝ್ರತ್ ಪೈಗಂಬರರು[ಸ] ಎಷ್ಟು ಗಾಯಗೊಂಡರೆಂದರೆ ಅವರು ತಲೆಯಿಂದ ಕಾಲಿನ ತನಕ ರಕ್ತಸಿಕ್ತರಾದರು. ತಲೆ ಮೇಲಿನಿಂದ ಹರಿದ ರಕ್ತ ಪಾದಗಳಿಗೂ ತಲಪಿತು. ಅನಂತರ ಶಅಬ್ ಅಬೀ ತಾಲಿಬ್‌ನಲ್ಲಿ ಹಝ್ರತ್ ಪೈಗಂಬರರನ್ನೂ[ಸ] ಅವರ ಕುಟುಂಬವನ್ನೂ ಅವರ ಅನುಯಾಯಿಗಳನ್ನೂ ಅನೇಕ ವರ್ಷ ದಿಗ್ಬಂಧನಾವಸ್ಥೆಯಲ್ಲಿ ಇಡಲಾಯಿತು. ತಿನ್ನಲು ಏನೂ ಸಿಗುತ್ತಿರಲಿಲ್ಲ. ಕುಡಿಯಲು ಸಹ ಏನೂ ಇರಲಿಲ್ಲ. ಮಕ್ಕಳು ಹಸಿವೆಯಿಂದಲೂ ಬಾಯಾರಿಕೆಯಿಂದಲೂ ಅಳುತ್ತಿದ್ದರು. ಒಬ್ಬ ಶಿಷ್ಯರಿಗೆ ರಾತ್ರಿ ಹೊತ್ತು ಅವರ ಪಾದದಡಿಯಲ್ಲಿ ಒಂದು ಮೃದು ವಸ್ತು ಇರುವುದಾಗಿ ತೋಚಿದಾಗ ಕೂಡಲೇ ಆ ಪದಾರ್ಥವನ್ನು ಎತ್ತಿಕೊಂಡು, ಪ್ರಾಯಶಃ ಅದು ತಿನ್ನುವ ವಸ್ತುವಾಗಿರಬಹುದೆಂದು ಭಾವಿಸಿ ತಿಂದರು. ಹಸಿವೆಯಿಂದ ಅವರೆಲ್ಲರೂ ಬಹಳ ಬಳಲಿ ಹೋದರು. ಈ ಪರಿಸ್ಥಿತಿಯಿಂದ ನಿರ್ಬಂಧಿತರಾಗಿ ಮದೀನಕ್ಕೆ ವಲಸೆ ಹೋದರು. ಮದೀನದಲ್ಲಿ ಸಹ ಶತ್ರುಗಳು ಬೆನ್ನಟ್ಟಿದರು. ಆಕ್ರಮಣ ನಡೆಸಿದರು. ಮದೀನದ ನಿವಾಸಿಗಳಾದ ಯಹೂದಿಯರನ್ನು ಹಝ್ರತ್ ಪೈಗಂಬರರ[ಸ] ವಿರುದ್ಧ ಉತ್ತೇಜಿಸಿದರು.

ನಾನು ಸಂಕ್ಷಿಪ್ತವಾಗಿ ವಿವರಿಸಿದ ದೌರ್ಜನ್ಯಗಳನ್ನು ಅನುಭವಿಸಿದವರು ಯುದ್ಧ ಮಾಡಿ ಜಯಿಸಿ ಪ್ರತೀಕಾರ ಮಾಡುವ ಸಂದರ್ಭ ದೊರಕಿದರೆ ತಾವು ಅನುಭವಿಸಿದ

ದೌರ್ಜನ್ಯಕ್ಕೆ ಸೇಡುತೀರಿಸಿಕೊಳ್ಳಲು ಮತ್ತು ದೌರ್ಜನ್ಯಕ್ಕೆ ಪ್ರತಿಯಾಗಿ ದೌರ್ಜನ್ಯ ಮಾಡಲು ಪ್ರಯತ್ನಿಸುತ್ತಾರೆ. ಯುದ್ಧದಲ್ಲಿ ಎಲ್ಲವೂ ಅನುಮತಿಸಲಾಗಿದೆ ಎಂದು ಸಹ ಹೇಳುತ್ತಾರೆ.

ಆದರೆ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ದಯೆ ಮತ್ತು ಮೃದು ವರ್ತನೆಯ ಉನ್ನತ ಉದಾಹರಣೆಯನ್ನು ಸ್ಥಾಪಿಸಿದರು. ಅವರು ಮಕ್ಕವನ್ನು ಬಿಟ್ಟು ಹೆಚ್ಚು ವರ್ಷಗಳಾಗಿರಲಿಲ್ಲ. ಎಲ್ಲ ಕಷ್ಟಗಳ ಗಾಯ ಈಗಲೂ ಒಣಗಿರಲಿಲ್ಲ. ಅವರಿಗೆ ತಮಗೆ ಉಂಟಾದ ತೊಂದರೆಗಳಿಗಿಂತ ತಮ್ಮ ಅನುಯಾಯಿಗಳಿಗೆ ಉಂಟಾದ ಕಷ್ಟಗಳ ಬಗ್ಗೆ ಹೆಚ್ಚು ಕಾಳಜಿ ಇತ್ತು. ಹೀಗಿದ್ದರೂ ಅವರು ಇಸ್ಲಾಮ್ ಧರ್ಮದ ಉಪದೇಶಗಳನ್ನೂ ಸಿದ್ಧಾಂತಗಳನ್ನೂ ಉಲ್ಲಂಘಿಸಿ ವರ್ತಿಸಲಿಲ್ಲ. ಅವರ ನೈತಿಕ ಗುಣಗಳ ಉನ್ನತ ಮಟ್ಟ ಇಸ್ಲಾಮ್ ಧರ್ಮ ತತ್ವಗಳಿಗೆ ಅನುಸಾರವಾಗಿತ್ತು. ಅದಕ್ಕೆ ಅವರು ಭಂಗಪಡಿಸಲಿಲ್ಲ. ಈಗ ನೀವು ನೋಡಿರಿ – ಕೆಲವು ಪಾಶ್ಚಾತ್ಯ ದೇಶಗಳು ಅನ್ಯ ದೇಶಗಳ ವಿರುದ್ಧ ಯುದ್ಧ ಮಾಡುವಾಗ ಅವರು ಏನೆಲ್ಲ ಮಾಡುತ್ತಾರೆ! ಆದರೆ ಇದರೆದುರಿಗೆ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ನಡೆವಳಿಕೆಗಳನ್ನು ನೋಡಿರಿ. ಚರಿತ್ರೆಯಲ್ಲಿ ಒಂದು ಘಟನೆಯನ್ನು ಹೀಗೆ ವಿವರಿಸಲಾಗಿದೆ:

ಬದ್ರ್ ಯುದ್ಧದ ಕಾಲದಲ್ಲಿ ಇಸ್ಲಾಮೀ ಸೈನ್ಯ ತಂಗುದಾಣವಾಗಿ ಆಯ್ಕೆ ಮಾಡಿದ ಸ್ಥಳ ಉತ್ತಮವಾಗಿರಲಿಲ್ಲ. ಆಗ ಒಬ್ಬ ಶಿಷ್ಯರಾದ ಹುಬಾಬ್ ಬಿನ್ ಮುನ್ಝಿರ್[ರ] ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ[ಸ] ಹೀಗೆ ನಿವೇದಿಸಿದರು: "ತಾವು ತಂಗುದಾಣವಾಗಿ ಆಯ್ಕೆ ಮಾಡಿದ ಸ್ಥಳ ತಮಗೆ ದೊರೆತ ದೇವಸಂದೇಶವಾಣಿಯ ಪ್ರಕಾರ ಅಲ್ಲಾಹನೇ ತಮಗೆ ತೋರಿಸಿಕೊಟ್ಟ ಸ್ಥಳವಾಗಿದೆಯೋ ಅಥವಾ ತಮ್ಮ ಸ್ವಂತ ಆಯ್ಕೆಯ ಸ್ಥಳ ಅದಾಗಿದೆಯೋ? ಸೈನಿಕ ಕಾರ್ಯನಿರ್ವಹಣೆಯ ದೃಷ್ಟಿಯಲ್ಲಿ ಈ ಸ್ಥಳ ಅನುಯೋಜ್ಯವಾಗಿದೆ ಎಂದು ತಾವು ಭಾವಿಸುತ್ತಿರುವಿರೋ?" ಆಗ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೀಗೆ ಉತ್ತರ ನೀಡಿದರು: "ಸೈನ್ಯ ಕಾರ್ಯಾಚರಣೆಗೋಸ್ಕರ ಈ ಸ್ಥಳ ಉತ್ತಮವೆಂದು ನಾನು ಭಾವಿಸುತ್ತೇನೆ. ಈ ಸ್ಥಳ ಎತ್ತರ ಪ್ರದೇಶದಲ್ಲಿದ್ದು ಉತ್ತಮವಾಗಿದೆ." ಆಗ ಹುಬಾಬ್[ರ] ಹೀಗೆ ನಿವೇದಿಸಿದರು: "ಈ ಸ್ಥಳ ಯುದ್ಧ ವ್ಯೂಹ ದೃಷ್ಟಿಯಿಂದ ಉತ್ತಮವಲ್ಲ. ನಾವು ಇಲ್ಲಿಂದ ಹೋಗಿ ನೀರಿನ ಝರಿ ಇರುವ ಸ್ಥಳವನ್ನು ಸ್ವಾಧೀನಪಡಿಸುವ. ಅಲ್ಲಿ ಒಂದು ಕೊಳ ನಿರ್ಮಿಸಿ ಅಲ್ಲಿ ನಾವು ಯುದ್ಧ ಮಾಡುವೆವು. ಆಗ ನಮಗೆ ನೀರು ದೊರಕುವುದು. ಶತ್ರುಗಳಿಗೆ ಕುಡಿಯಲು ನೀರು ಸಿಗಲಾರದು." ಆಗ ಹಝ್ರತ್ ಮುಹಮ್ಮದ್ ಪೈಗಂಬರ್[ಸ], "ನಾವು ನಿಮ್ಮ ಸಲಹೆ ಅಂಗೀಕರಿಸುತ್ತೇವೆ" ಎಂದು ಹೇಳಿ ಅಲ್ಲಿಂದ ಎಲ್ಲರೂ ಹೊರಟು ಹೊಸ ಸ್ಥಳದಲ್ಲಿ ತಂಗುದಾಣ ಸ್ಥಾಪಿಸಿದರು. ಸ್ವಲ್ಪ ಸಮಯದ ನಂತರ ಅಲ್ಲಿಗೆ ನೀರು ಕುಡಿಯಲು ಖುರೈಶಿಗಳ ಕೆಲವು ಜನರು ಬಂದಾಗ ಹಝ್ರತ್ ಪೈಗಂಬರರ[ಸ] ಶಿಷ್ಯರು ಅವರನ್ನು ತಡೆಯಲು ಪ್ರಯತ್ನಿಸಿದರು. ಆಗ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿದರು: "ನೀವು ಅವರನ್ನು ತಡೆಯಬೇಡಿರಿ. ನೀರು ತೆಗೆದುಕೊಂಡು ಹೋಗಲು ಬಿಡಿರಿ."

**(ಅಸ್ಸೀರತುನ್ನಬವಿಯ್ಯ ಲಿಇಬ್ನು ಹಿಶಾಮ್– ಸಂಪುಟ 2 ಪುಟ 284)**

## ಇಸ್ಲಾಮ್ ಖಡ್ಗಬಲದಿಂದಲ್ಲ, ಅದರ ಉತ್ತಮ ನೈತಿಕ ಗುಣಗಳು, ಮನಸ್ಸಾಕ್ಷಿ ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಉಪದೇಶಗಳ ಕಾರಣ ಹಬ್ಬಿತು

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನೈತಿಕ ಗುಣದ ಉನ್ನತ ಮಟ್ಟ ಮೇಲೆ ವಿವರಿಸಿದ ಹಾಗೆ ಇತ್ತು. ಶತ್ರುಗಳು ಸ್ವಲ್ಪ ಕಾಲದ ಹಿಂದೆ ಮುಸ್ಲಿಮರ ಮಕ್ಕಳಿಗೆ ಕೂಡ ಆಹಾರ ಮತ್ತು ನೀರು ನೀಡುವುದನ್ನು ತಡೆದಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಅದನ್ನು ಕಡೆಗಣಿಸಿ, ಶತ್ರು ಸೈನಿಕರು ಕೊಳದಿಂದ ನೀರು ತೆಗೆದುಕೊಂಡು ಹೋಗಲು ಬಂದಾಗ ಆ ಕೊಳದ ಮೇಲೆ ಅವರಿಗೆ ಸ್ವಾಧೀನವಿದ್ದರೂ ಅವರನ್ನು ನೀರು ಸೇದುವುದರಿಂದ ತಡೆಯಲಿಲ್ಲ. ಏಕೆಂದರೆ ಹಾಗೆ ಮಾಡುವುದು ನೈತಿಕ ಗುಣಗಳ ತತ್ವಗಳಿಗೆ ವಿರುದ್ಧವಾಗಿತ್ತು. ಇಸ್ಲಾಮ್ ವಿರುದ್ಧ ಮಾಡಲಾಗುವ ಅತ್ಯಂತ ದೊಡ್ಡ ದೋಷಾರೋಪ ಅದು ಖಡ್ಗಬಲದಿಂದ ಹಬ್ಬಿತೆಂದಾಗಿದೆ. ಅಲ್ಲಿ ನೀರಿಗೋಸ್ಕರ ಬಂದವರ ಮೇಲೆ ಬಲಪ್ರಯೋಗ ಮಾಡಬಹುದಿತ್ತು. ನೀರು ಬೇಕಾದರೆ ನಮ್ಮ ಷರತ್ತುಗಳಿಗೆ ಒಪ್ಪಿರಿ ಎಂದು ಹೇಳಬಹುದಾಗಿತ್ತು. ಅವಿಶ್ವಾಸಿಗಳು ಅನೇಕ ಯುದ್ಧಗಳಲ್ಲಿ ಹೀಗೆಯೇ ವರ್ತಿಸುತ್ತಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ತನ್ನ ಶತ್ರುಗಳು ಮಾಡಿದಂತೆ ವರ್ತಿಸಲಿಲ್ಲ. ಇಲ್ಲಿ ಹೀಗೆ ಸಹ ಹೇಳಬಹುದಾಗಿದೆ: "ಆ ಸಮಯದಲ್ಲಿ ಮುಸ್ಲಿಮರು ಶಕ್ತಿಶಾಲಿಗಳಾಗಿರಲಿಲ್ಲ; ಅವರು ಬಲಹೀನರಾಗಿದ್ದರು; ಪ್ರಾಯಶಃ ಯುದ್ಧದಿಂದ ರಕ್ಷಣೆ ಪಡೆಯಲು ಅವರಿಗೆ ಉಪಕಾರ ಮಾಡುವ ಪ್ರಯತ್ನ ಮಾಡಲಾಗಿತ್ತು." ಆದರೆ ಹೀಗೆ ಹೇಳುವುದು ತಪ್ಪಾಗಿದೆ. ಮುಸ್ಲಿಮರಲ್ಲಿ ಪ್ರತಿಯೊಬ್ಬರಿಗೆ ಅವಿಶ್ವಾಸಿಗಳು ತಮ್ಮ ರಕ್ತವನ್ನು ಕುಡಿಯುವ ದಾಹ ಹೊಂದಿದ್ದಾರೆಂದು ತಿಳಿದಿತ್ತು. ಮುಸ್ಲಿಮರನ್ನು ಕಂಡ ಕೂಡಲೆ ಅವರ ಕಣ್ಣುಗಳಿಗೆ ರಕ್ತ ಹರಿದು ಬರುತ್ತಿತ್ತು. ಆದುದರಿಂದ ಅವಿಶ್ವಾಸಿಗಳ ಬಗ್ಗೆ ಶುಭ ಪ್ರತೀಕ್ಷೆ ಮುಸ್ಲಿಮರಲ್ಲಿ ಯಾರಿಗೂ ಇರಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಇಂತಹ ಶುಭ ಆಕಾಂಕ್ಷೆಯ ಪ್ರಶ್ನೆಯೇ ಉದಿಸುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಎಲ್ಲವನ್ನೂ ಮಾಡಿದುದು, ಅವರು ಸಹಾನುಭೂತಿ ತೋರಿಸಿದುದು, ಅವರು ದಯೆಯಿಂದ ತುಂಬಿದವರಾದ ಕಾರಣದಿಂದಾಗಿದೆ. ಅವರು ಮಾನವೀಯ ಮೌಲ್ಯಗಳ ಸಂರಕ್ಷಕರಾಗಿದ್ದರು. ಅವರೇ ಇಂತಹ ಮೌಲ್ಯಗಳನ್ನು ಗುರುತಿಸಲು ಉಪದೇಶಿಸಿದ್ದರು.

ನೀವು ಇಸ್ಲಾಮಿನ ಒಬ್ಬ ಶತ್ರುವಿಗೆ ಸಂಬಂಧಿಸಿದ ಸಂಭವವನ್ನು ನೋಡಿರಿ. ಅವನನ್ನು ಕೊಲ್ಲಬೇಕೆಂದು ಆಜ್ಞಾಪಿಸಲಾಗಿತ್ತು. ಅವನನ್ನು ಹಝ್ರತ್ ಪೈಗಂಬರ್(ಸ) ಕ್ಷಮಿಸಿದರು. ಮಾತ್ರವಲ್ಲ, ಮುಸ್ಲಿಮರ ಜೊತೆಯಲ್ಲಿ ಜೀವಿಸುವಾಗ ತನ್ನ ಸ್ವಂತ ಧರ್ಮವನ್ನು ಅನುಷ್ಠಿಸಲು ಅನುಮತಿ ನೀಡಿದರು. ಈ ವಿಷಯಕ್ಕೆ ಸಂಬಂಧಿಸಿ ಹೀಗೆ ವರದಿಯಾಗಿದೆ:

ಅಬೂಜಹಲನ ಪುತ್ರ ಇಕ್ರಿಮ ತನ್ನ ಪಿತನ ಹಾಗೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ಯುದ್ಧ ಮಾಡುತ್ತಾ ಇದ್ದನು. ಮಕ್ಕವನ್ನು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಜಯಿಸಿದಾಗ ಎಲ್ಲರಿಗೂ ಕ್ಷಮೆ ನೀಡುವುದಾಗಿ ಘೋಷಿಸಿದ್ದರೂ ಇಕ್ರಿಮ ಕಅ್‌ಬದ ವಠಾರದಲ್ಲಿ ರಕ್ತಪಾತ ಮಾಡಿದ್ದನು. ಅವನು ತನ್ನ ಯುದ್ಧಾಪರಾಧದ ಕಾರಣ ಕೊಲ್ಲಲ್ಪಡಲು ವಿಧಿಸಲ್ಪಟ್ಟನು. ಮುಸ್ಲಿಮರನ್ನು ಎದುರಿಸಿ ಆಗ ಯಾರಿಗೂ ನಿಲ್ಲಲು ಸಾಧ್ಯವಿರಲಿಲ್ಲ. ಆದುದರಿಂದ ಅವನು ತನ್ನ ಜೀವರಕ್ಷಣೆಗೆ ಯಮನ್‌ಗೆ ಓಡಿ ಹೋದನು. ಅವನ ಪತ್ನಿ ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ(ಸ), ತನ್ನ ಪತಿಯನ್ನು

ಕ್ಷಮಿಸಬೇಕೆಂದು ಬೇಡಿಕೊಂಡಳು. ಆಗ ಹಝ್‌ರತ್ ಪೈಗಂಬರರು(ಸ) ದಯೆದೋರಿ ಅವನನ್ನು ಕ್ಷಮಿಸಿದರು. ಆಕೆ ತನ್ನ ಪತಿಯನ್ನು ಕರೆದುಕೊಂಡು ಬರಲು ಅವನ ಸಮೀಪಕ್ಕೆ ಹೋದಾಗ ತನ್ನನ್ನು ಕ್ಷಮಿಸಿದುದನ್ನು ನಂಬಲಿಲ್ಲ. ಅವನು ಹೇಳಿದನು: "ನಾನು ಎಷ್ಟೆಲ್ಲ ದೌರ್ಜನ್ಯ ಮಾಡಿದ್ದೇನೆ. ಎಷ್ಟೆಲ್ಲ ಮುಸ್ಲಿಮರನ್ನು ಕೊಂದಿದ್ದೇನೆ. ನಾನು ಕಡೆ ತನಕ ಯುದ್ಧ ಮಾಡುವುದನ್ನು ನಿಲ್ಲಿಸಿರಲಿಲ್ಲ. ನನಗೆ ಕ್ಷಮೆ ದೊರೆಯುವುದಾದರೂ ಹೇಗೆ?" ಅವನಿಗೆ ಧೈರ್ಯ ನೀಡಿ ಅವನ ಪತ್ನಿ ಅವನನ್ನು ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಸಮೀಪಕ್ಕೆ ಕರೆದು ತಂದಳು. ಅವನು ಆಗಮಿಸಿದಾಗ ಅವನೊಂದಿಗೆ ಹಝ್‌ರತ್ ಪೈಗಂಬರ್(ಸ) ಆಶ್ಚರ್ಯಕರವಾದ ರೀತಿಯಲ್ಲಿ ವರ್ತಿಸಿದರು. ಇಕ್ರಿಮ ವಿರೋಧಿಗಳ ನಾಯಕನಾದುದರಿಂದ ಅವನನ್ನು ಗೌರವಿಸಲು ಎದ್ದು ನಿಂತು ಸ್ವಾಗತಿಸಿದರು ಮತ್ತು ಇಕ್ರಿಮನೊಂದಿಗೆ, ನಾನು ನಿಜವಾಗಿಯೂ ನಿನ್ನನ್ನು ಕ್ಷಮಿಸಿರುವೆನು ಎಂದು ಹೇಳಿದರು.

**(ಮುಅತ್ತ ಇಮಾಮ್ ಮಾಲಿಕ್)**

ಅನಂತರ ಇಕ್ರಿಮ ಕೇಳಿದನು: ನಾನು ಮುಸ್ಲಿಮನಾಗದೆ ನನ್ನ ಪೂರ್ವ ಧರ್ಮದಲ್ಲಿದ್ದರೂ ನೀವು ನನ್ನನ್ನು ಕ್ಷಮಿಸಿದಿರೇನು? ಆಗ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: ಹೌದು, ನಾನು ಕ್ಷಮಿಸಿರುವೆನು. ಆಗ ಇಕ್ರಿಮನ ಹೃದಯ ಇಸ್ಲಾಮಿಗೋಸ್ಕರ ತೆರೆಯಲ್ಪಟ್ಟಿತು. ಅವನು ತಾನಾಗಿಯೇ ಹೇಳಿದನು: "ಓ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ತಾವು ಅತ್ಯಂತ ಸಹಿಷ್ಣುತೆಯುಳ್ಳವರೂ ಕರುಣೆಯಿಂದ ತುಂಬಿದವರೂ ಕುಟುಂಬ ಸಂಬಂಧಗಳನ್ನು ದೃಢಪಡಿಸುವವರೂ ಆಗಿರುವಿರಿ."

ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಉತ್ತಮ ಸ್ವಭಾವ ಗುಣಗಳ ಅದ್ಭುತ ದೃಶ್ಯವನ್ನು ಕಂಡು ಇಕ್ರಿಮ ಮುಸ್ಲಿಮನಾದನು.

**(ಅಸ್ಸೀರತುಲ್ ಹಲ್‌ಬಿಯ್ಯ – ಸಂಪುಟ 3 ಪುಟ 109)**

ಇಸ್ಲಾಮ್ ಧರ್ಮ ವ್ಯಾಪಕವಾಗಿ ಹಬ್ಬಿದುದು ಇಂತಹ ಸ್ವಭಾವ ಗುಣಗಳ ಪ್ರಕಟಣೆಗಳ ಮೂಲಕ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯ ಹಾಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಅನುಮತಿಸಿದುದರಿಂದಾಗಿದೆ. ಉತ್ತಮ ಸ್ವಭಾವಗುಣ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಬಾಣವು ಒಂದು ಕ್ಷಣದಲ್ಲಿ ಇಕ್ರಿಮನ ಹಾಗಿರುವವನನ್ನು ಗಾಯಗೊಳಿಸಿತು. ಹಝ್‌ರತ್ ಪೈಗಂಬರ್(ಸ) ಗುಲಾಮರಿಗೂ ಕೈದಿಗಳಿಗೂ ಅವರು ಇಚ್ಛಿಸುವ ಧರ್ಮವನ್ನು ಅಂಗೀಕರಿಸಲು ಅನುಮತಿ ನೀಡಿದ್ದರು. ಜನರಿಗೆ ಇಸ್ಲಾಮ್ ಧರ್ಮದ ಬಗ್ಗೆ ತಿಳುವಳಿಕೆ ಇಲ್ಲದ ಕಾರಣ ಇಸ್ಲಾಮ್ ಧರ್ಮದ ಬಗ್ಗೆ ಜನರಿಗೆ ತಿಳಿಸಲು ಅಲ್ಲಾಹನು ಆಜ್ಞಾಪಿಸಿದ್ದರಿಂದ ಇಸ್ಲಾಮ್ ಧರ್ಮದ ಪ್ರಚಾರ ಮಾಡಲಾಗಿತ್ತು. ಇದು ಸಹ ಅಲ್ಲಾಹನ ಸಾಮೀಪ್ಯ ಅವರಿಗೆ ಸಿಗುವಂತಾಗಲಿ ಎಂಬ ಅಭಿಲಾಷೆಯಿಂದ ಮತ್ತು ಸಹಾನುಭೂತಿಯಿಂದ ಆಗಿತ್ತು.

ಒಬ್ಬ ಕೈದಿಯ ಬಗ್ಗೆ ಹೀಗೆ ವರದಿಯಾಗಿದೆ: ಸಈದ್ ಬಿನ್ ಅಬೀ ಸಈದ್ ಹೀಗೆ ವರದಿ ಮಾಡುತ್ತಾರೆ – ಹಝ್‌ರತ್ ಅಬೂಹುರೈರ(ರ) ಹೀಗೆ ಹೇಳಿದರು: ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ನಜ್‌ದ್ ಕಡೆಗೆ ಸೈನ್ಯವನ್ನು ಕಳುಹಿಸಿದಾಗ ಬನೂ ಹನೀಫ ಗೋತ್ರದ ಒಬ್ಬ ವ್ಯಕ್ತಿಯನ್ನು ಸೆರೆ ಹಿಡಿದು ತಂದರು. ಅವನ ಹೆಸರು ಸುಮಾಮ ಬಿನ್ ಅಸಾಲ್ ಎಂದಾಗಿತ್ತು. ಸಹಾಬ (ಪೈಗಂಬರರ ಶಿಷ್ಯರು) ಅವನನ್ನು ಮಸ್‌ಜಿದ್ ನಬವಿಯ

ಕಂಬಕ್ಕೆ ಕಟ್ಟಿದರು. ಹಝ್ರತ್ ಪೈಗಂಬರ್(ಸ) ಅವನ ಸಮೀಪಕ್ಕೆ ಬಂದು ಕೇಳಿದರು: "ನಿನ್ನೊಂದಿಗೆ ಹೇಗೆ ವರ್ತಿಸಬೇಕೆಂದು ನೀನು ಬಯಸುವೆ?" ಅವನು ಹೇಳಿದನು: "ನಾನು ಶುಭ ಪ್ರತೀಕ್ಷೆ ಹೊಂದಿದ್ದೇನೆ. ನೀವು ನನ್ನನ್ನು ಕೊಂದರೆ ರಕ್ತಪಾತ ನಡೆಸಿದ ಒಬ್ಬನನ್ನು ಕೊಂದಂತೆ ಆಗುವುದು. ನೀವು ನನ್ನನ್ನು ಬಿಡುಗಡೆಗೊಳಿಸಿದರೆ ನಿಮ್ಮ ಉಪಕಾರವನ್ನು ಸ್ಮರಿಸುವವನಾಗಿ ನನ್ನನ್ನು ಕಾಣುವಿರಿ. ನಿಮಗೆ ಸಂಪತ್ತು ಬೇಕಾದರೆ ನೀವು ಇಚ್ಛಿಸುವಷ್ಟು ನೀಡಲು ನನ್ನ ಗೋತ್ರ ಸಿದ್ಧವಿದೆ."

ಮರುದಿನ ಹಝ್ರತ್ ಪೈಗಂಬರ್(ಸ) ಸುಮಾಮನನ್ನು, ತಾನು ಏನನ್ನು ಬಯಸುವೆ ಎಂದು ಪುನಃ ಪ್ರಶ್ನಿಸಿದರು. ಆಗ ಸುಮಾಮ ಹೇಳಿದನು: "ನಾನು ನಿನ್ನೆಯೇ ಹೇಳಿದ್ದೇನೆ. ನೀವು ನನ್ನನ್ನು ಬಿಡುಗಡೆಮಾಡುವುದಾದರೆ ನಿಮ್ಮ ಉಪಕಾರವನ್ನು ಸ್ಮರಿಸುವವನನ್ನು ನೀವು ಬಿಡುಗಡೆ ಮಾಡುವಿರಿ." ಅವನನ್ನು ಅಲ್ಲಿಯೇ ಬಿಟ್ಟು ಹಝ್ರತ್ ಪೈಗಂಬರರು(ಸ) ಹೋದರು.

ಮೂರನೆಯ ದಿನ ಹಝ್ರತ್ ಪೈಗಂಬರ್(ಸ) ಬಂದು ಸುಮಾಮನನ್ನು ಪ್ರಶ್ನಿಸಿದಾಗ ಅವನು ಹೇಳಿದನು: "ನಾನು ಹೇಳಬೇಕಾದುದನ್ನು ಹೇಳಿಯಾಗಿದೆ." ಆಗ ಹಝ್ರತ್ ಪೈಗಂಬರ್(ಸ) ಅವನನ್ನು ಬಂಧನದಿಂದ ಬಿಡುಗಡೆಗೊಳಿಸಲು ಹೇಳಿದರು. ಸುಮಾಮ ಬಿಡುಗಡೆಗೊಂಡ ನಂತರ ಮಸ್‌ಜಿದ್ ಸಮೀಪವಿದ್ದ ಖರ್ಜೂರದ ತೋಟಕ್ಕೆ ಹೋದನು ಮತ್ತು ಸ್ನಾನ ಮಾಡಿದನು. ಮಸ್‌ಜಿದನ್ನು ಪ್ರವೇಶಿಸಿ ಶಹಾದತ್ ಕಲಿಮ ಉಚ್ಚರಿಸಿ ಹೀಗೆ ಹೇಳಿದನು: "ಓ ಮುಹಮ್ಮದ್(ಸ), ಅಲ್ಲಾಹನಾಣೆ ನನಗೆ ಲೋಕದಲ್ಲಿ ಅತ್ಯಂತ ಅಪ್ರಿಯವಾದುದು ತಮ್ಮ ಮುಖವಾಗಿತ್ತು. ಈಗ ನನಗೆ ಅತ್ಯಂತ ಪ್ರಿಯವಾದ ಮುಖ ತಮ್ಮದಾಗಿದೆ. ಅಲ್ಲಾಹನಾಣೆ, ನನಗೆ ಅತ್ಯಂತ ಅಪ್ರಿಯವಾದ ಧರ್ಮ ತಮ್ಮ ಧರ್ಮವಾಗಿತ್ತು. ಆದರೆ ಈಗ ನನಗೆ ಅತ್ಯಂತ ಪ್ರಿಯವಾದುದು ತಾವು ತಂದ ಧರ್ಮವಾಗಿದೆ. ಅಲ್ಲಾಹನಾಣೆ, ನನಗೆ ಅತ್ಯಂತ ಅಪ್ರಿಯವಾದ ನಗರ ನಿಮ್ಮ ನಗರವಾಗಿತ್ತು. ಈಗ ಇದೇ ನಗರ ನನಗೆ ಅತ್ಯಂತ ಪ್ರಿಯವಾದ ನಗರವಾಗಿದೆ. ನಾನು ಉಮ್‌ರ ಮಾಡುವುದಕ್ಕೆ ಹೋಗುತ್ತಿದ್ದಾಗ ನಿಮ್ಮ ಕುದುರೆ ಸವಾರರು ನನ್ನನ್ನು ಬಂಧಿಸಿದರು. ಇವರ ಬಗ್ಗೆ ತಮ್ಮ ಅಪ್ಪಣೆ ಏನು? "ಆಗ ಹಝ್ರತ್ ಪೈಗಂಬರ್(ಸ) ಅವನು ಇಸ್ಲಾಮ್ ಧರ್ಮ ಸ್ವೀಕರಿಸಿದುದಕ್ಕೆ ಅವನಿಗೆ ಶುಭಾಶಯ ಕೋರಿದರು ಮತ್ತು ಉಮ್‌ರ ಮಾಡಲು ಅನುಮತಿ ನೀಡಿ ಹೇಳಿದರು: "ನೀನು ಉಮ್‌ರ ಮಾಡು. ಅಲ್ಲಾಹನು ಅದನ್ನು ಸ್ವೀಕರಿಸಲಿ." ಅವನು ಮಕ್ಕವನ್ನು ತಲಪಿದಾಗ ಯಾರೋ ಅವನೊಂದಿಗೆ ಕೇಳಿದನು: ನೀನು ಸಾಬಿ ಆಗಿರುವಿಯೋ? ಆಗ ಸುಮಾಮ ಹೇಳಿದನು: ನಾನು ಸಾಬಿಯಾಗಿಲ್ಲ. ನಾನು ಮುಹಮ್ಮದ್ ಪೈಗಂಬರರನ್ನು(ಸ) ನಂಬಿರುವೆನು. ಅಲ್ಲಾಹನಾಣೆ, ಮುಹಮ್ಮದ್ ಪೈಗಂಬರ್(ಸ) ಅನುಮತಿ ನೀಡುವ ತನಕ ನಿಮ್ಮ ಬಳಿಗೆ ಯಮಾಮದಿಂದ ಗೋದಿಯ ಒಂದು ಕಾಳು ಕೂಡ ಬರಲಾರದು.

**(ಬುಖಾರಿ ಕಿತಾಬುಲ್ ಮಗಾಝಿ)**

ಇನ್ನೊಂದು ವರದಿ ಹೀಗಿದೆ: ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಸುಮಾಮ ಉಮ್‌ರಕ್ಕೋಸ್ಕರ ಮಕ್ಕಕ್ಕೆ ಹೋದಾಗ ಮಕ್ಕದ ಅವಿಶ್ವಾಸಿಗಳು ಸುಮಾಮ ಮುಸ್ಲಿಮನಾದುದನ್ನು ತಿಳಿದು ಅವರಿಗೆ ಹೊಡೆಯಲು ಪ್ರಯತ್ನಿಸಿದರು ಅಥವಾ ಹೊಡೆದರು. ಆಗ ಅವರು ಹೇಳಿದರು: ನಿಮ್ಮ ಬಳಿಗೆ ಗೋದಿಯ ಒಂದು ಕಾಳು ಕೂಡ ಬರಲಾರದು

– ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ಅನುಮತಿ ನೀಡುವ ತನಕ. ಸುಮಾಮ ತನ್ನ ಗೋತ್ರದ ಬಳಿಗೆ ಹೋಗಿ ಹೇಳಿದಾಗ ಗೋದಿ ಪೂರೈಕೆ ನಿಂತು ಹೋಯಿತು. ಆಗ ಮಕ್ಕದವರ ಆಹಾರ ಪರಿಸ್ಥಿತಿ ಕೆಟ್ಟು ಹೋಯಿತು. ಅಬೂ ಸುಫ್‌ಯಾನ್ ಹಝ್‌ರತ್ ಮುಹಮ್ಮದ್ ಪೈಗಂಬರರನ್ನು[ಸ] ಕಂಡು "ನಿಮ್ಮವರಾದ ಜನರು ಹಸಿವೆಯಿಂದ ಸಾಯುತ್ತಿದ್ದಾರೆ. ನೀವು ಅವರ ಮೇಲೆ ದಯೆದೋರಿರಿ" ಎಂದು ಬೇಡಿಕೊಂಡರು. ಆಗ ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] "ನೀವು ಮುಸ್ಲಿಮರಾಗುವ ತನಕ ಗೋದಿ ನಿಮಗೆ ತಲಪಲಾರದು" ಎಂದು ಹೇಳಲಿಲ್ಲ. ಅವರು ಕೂಡಲೇ ಸುಮಾಮರಿಗೆ ಸಂದೇಶ ಕಳುಹಿಸಿದರು: "ಈ ನಿರ್ಬಂಧ ಕೊನೆಗೊಳಿಸಿರಿ. ಇದು ದೌರ್ಜನ್ಯವಾಗಿದೆ. ಮಕ್ಕಳಿಗೂ ದೊಡ್ಡವರಿಗೂ ರೋಗಿಗಳಿಗೂ ವೃದ್ಧರಿಗೂ ಆಹಾರದ ಆವಶ್ಯಕತೆ ಇದೆ. ಅದನ್ನು ಪೂರೈಸಬೇಕು." **(ಅಸ್ಸೀರತುನ್ನಬವಿಯ್ಯ ಇಬ್ನು ಹಿಶಾಮ್)**

ಇನ್ನೊಂದು ವಿಷಯವನ್ನು ಗಮನಿಸಿರಿ. ಬಂಧಿತನಾದ ಸುಮಾಮನೊಂದಿಗೆ, "ಈಗ ನೀನು ನಮ್ಮ ಸ್ವಾಧೀನದಲ್ಲಿ ಇರುವೆ. ನೀನು ಮುಸ್ಲಿಮನಾಗು" ಎಂದೇನೂ ಹೇಳಲಿಲ್ಲ. ಅವನೊಂದಿಗೆ ಮೂರು ದಿವಸಗಳ ಕಾಲ ಉತ್ತಮವಾಗಿ ವರ್ತಿಸಲಾಯಿತು. ಅನಂತರ ಬಿಡುಗಡೆಗೊಳಿಸಲಾಯಿತು. ನೀವು ಸುಮಾಮರನ್ನು ಸಹ ಗಮನಿಸಿರಿ. ಅವರು ಸಹ ಪ್ರಜ್ಞೆವುಳ್ಳವರಾಗಿದ್ದರು. ಅವರಿಗೆ ಸ್ವಾತಂತ್ರ್ಯ ನೀಡಿದ ಕೂಡಲೆ ಅವರು ತನ್ನನ್ನು ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ದಾಸನಾಗಿರಲು ಅರ್ಪಿಸಿದರು. ಇದೇ ದಾಸ್ಯದ ಮೂಲಕ ತನ್ನ ಲೌಕಿಕ ಮತ್ತು ಆಧ್ಯಾತ್ಮಿಕ ಒಳಿತಿದೆ ಎಂದು ಮನವರಿಕೆ ಮಾಡಿಕೊಂಡರು.

ಒಬ್ಬ ಯಹೂದಿ ಗುಲಾಮನಿಗೆ ಸಂಬಂಧಿಸಿ ನೋಡಿರಿ. ಅವನೊಂದಿಗೆ, "ನೀನು ನನ್ನ ಗುಲಾಮನಾಗಿರುವೆ. ನಾನು ಹೇಳಿದ ಹಾಗೆ ಮಾಡು" ಎಂದು ಹೇಳಲಿಲ್ಲ. ಆ ಗುಲಾಮನಿಗೆ ರೋಗ ಬಾಧಿಸಿತು. ಅವನ ಸ್ಥಿತಿ ಅಪಾಯಕರವಾಗಿದೆ ಎಂದು ತಿಳಿದಾಗ ಅವನ ಅಂತಿಮ ಗತಿಯ ಬಗ್ಗೆ ಹಝ್‌ರತ್ ಪೈಗಂಬರರಿಗೆ[ಸ] ಚಿಂತೆ ತಲೆದೋರಿತು. ಅವನು ಇಹಲೋಕ ಬಿಟ್ಟು ಹೋಗುವಾಗ ಅಲ್ಲಾಹನ ಅಂತಿಮ ಶರೀಅತನ್ನು ಅಂಗೀಕರಿಸದ ಸ್ಥಿತಿಯಲ್ಲಿ ಇರಬಾರದೆಂದೂ ಅವನು ಅದನ್ನು ಅಂಗೀಕರಿಸಿ ಮೃತನಾಗಲಿ ಎಂದೂ ಹಝ್‌ರತ್ ಪೈಗಂಬರ್[ಸ] ಇಚ್ಛಿಸಿದರು. ಅವನಿಗೆ ಅಲ್ಲಾಹನಿಂದ ಕ್ಷಮೆ ದೊರಕಲಿ ಎಂದು ಆಶಿಸಿದರು. ಅವರು ಅವನನ್ನು ಸಂದರ್ಶಿಸಿ ಬಹಳ ಪ್ರೀತಿಯಿಂದ "ಇಸ್ಲಾಮ್ ಧರ್ಮವನ್ನು ಸ್ವೀಕರಿಸು" ಎಂದು ಹೇಳಿದರು.

ಹಝ್‌ರತ್ ಅನಸ್[ರ] ಈ ಘಟನೆ ಬಗ್ಗೆ ಹೀಗೆ ವರದಿ ಮಾಡಿದ್ದಾರೆ: ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಒಬ್ಬ ಯಹೂದಿ ಗುಲಾಮ ಹುಡುಗ ರೋಗ ಬಾಧಿತನಾದನು. ಹಝ್‌ರತ್ ಪೈಗಂಬರ್[ಸ] ಅವನನ್ನು ಸಂದರ್ಶಿಸಲು ಹೋದರು. ಅವನ ತಲೆಯ ಸಮೀಪ ನಿಂತು ಹೇಳಿದರು: "ನೀನು ಇಸ್ಲಾಮ್ ಧರ್ಮವನ್ನು ಸ್ವೀಕರಿಸು."

ಇನ್ನೊಂದು ವರದಿ ಪ್ರಕಾರ ಅವನು ತನ್ನ ಹಿರಿಯರ ಕಡೆಗೆ ನೋಡಿದನು. ಅವರ ಅನುಮತಿ ಪಡೆದು ಅಥವಾ ಸ್ವಂತ ಇಷ್ಟ ಪ್ರಕಾರ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದನು. **(ಸಹೀಹ್ ಬುಖಾರಿ)**

ಆ ಹುಡುಗ ಇಸ್ಲಾಮ್ ಧರ್ಮ ಸ್ವೀಕರಿಸಿದುದು ಹಝ್ರತ್ ಪೈಗಂಬರ್(ಸ) ಅವನೊಂದಿಗೆ ಪ್ರೀತಿಯಿಂದ ವರ್ತಿಸಿದ ಕಾರಣ ಮತ್ತು ಅವನಿಗೆ ನೀಡಲಾದ ಸ್ವಾತಂತ್ರ್ಯದ ಪ್ರಭಾವದಿಂದಾಗಿತ್ತು. ಅವನು ಈ ಕಾರಣದಿಂದ ಇಸ್ಲಾಮ್ ಸತ್ಯ ಧರ್ಮವೆಂದೂ ಅದನ್ನು ಸ್ವೀಕರಿಸುವುದರಿಂದ ರಕ್ಷಣೆ ಸಿಗುವುದೆಂದೂ ಮನವರಿಕೆ ಮಾಡಿದ್ದನು. ವಾತ್ಸಲ್ಯಮಯರಾದ ತನ್ನ ಯಜಮಾನ ತನಗೆ ಕೆಡುಕನ್ನು ಬಯಸಲಾರರೆಂದು ಅವನು ಮನಗಂಡಿದ್ದನು. ಅವರು ಖಂಡಿತವಾಗಿಯೂ ಸತ್ಯದಲ್ಲಿದ್ದಾರೆ; ಅನ್ಯರನ್ನು ಅತ್ಯುತ್ತಮವಾದುದರ ಕಡೆಗೆ ಆಹ್ವಾನಿಸುತ್ತಾರೆ; ಅತ್ಯುತ್ತಮ ಕೆಲಸ ಮಾಡಲು ಆಹ್ವಾನಿಸುತ್ತಾರೆ; ಅದರ ಬಗ್ಗೆಯೇ ಉಪದೇಶಿಸುತ್ತಾರೆ ಎಂದೆಲ್ಲ ಅವನು ಯೋಚಿಸಿದನು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಇಂತಹ ಸ್ವಾತಂತ್ರ್ಯ ನೀಡಿದ್ದರು. ಲೋಕದಲ್ಲಿ ಇಂತಹ ಉದಾಹರಣೆ ಎಂದೂ ಎಲ್ಲಿಯೂ ಕಾಣಲು ಅಸಾಧ್ಯ.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತಾನು ಪ್ರವಾದಿ ಎಂದು ವಾದಿಸುವ ಮೊದಲು ಸಹ ಮನಸ್ಸಾಕ್ಷಿಯ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಜೀವಿತದ ಸ್ವಾತಂತ್ರ್ಯವನ್ನು ಇಷ್ಟಪಡುತ್ತಿದ್ದರು ಮತ್ತು ಗುಲಾಮಗಿರಿಯನ್ನು ಅಸಹ್ಯಪಡುತ್ತಿದ್ದರು. ಹಝ್ರತ್ ಖದೀಜ ರಝಿಯಲ್ಲಾಹು ಅನ್‌ಹಾ ವಿವಾಹವಾದ ನಂತರ ತನ್ನ ಸಂಪತ್ತನ್ನೂ ಗುಲಾಮರನ್ನೂ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ವಾಧೀನಕ್ಕೆ ನೀಡಿದರು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಖದೀಜರೊಂದಿಗೆ(ರ) ಹೇಳಿದರು: "ಈ ಎಲ್ಲ ವಸ್ತುಗಳನ್ನು ನನ್ನ ಸ್ವಾಧೀನಕ್ಕೆ ನೀನು ಕೊಡುತ್ತಿರುವೆ. ಆದುದರಿಂದ ಅದನ್ನು ನನ್ನ ಇಷ್ಟ ಪ್ರಕಾರ ವಿನಿಯೋಗಿಸುವೆನು." ಆಗ ಹಝ್ರತ್ ಖದೀಜ(ರ) ಹೇಳಿದರು: "ಅದಕ್ಕೋಸ್ಕರವೇ ನಾನು ನಿಮಗೆ ನೀಡಿದೆನು." ಹಝ್ರತ್ ಪೈಗಂಬರ್(ಸ) ಹೇಳಿದರು: "ನಾನು ಗುಲಾಮರನ್ನು ಸ್ವತಂತ್ರರನ್ನಾಗಿ ಬಿಟ್ಟು ಬಿಡುವೆನು." ಹಝ್ರತ್ ಖದೀಜ(ರ) ಹೇಳಿದರು: "ನೀವು ಏನು ಇಚ್ಛಿಸುತ್ತೀರೋ ಹಾಗೆ ಮಾಡಿರಿ. ನಾನು ನಿಮ್ಮ ಸ್ವಾಧೀನಕ್ಕೆ ಎಲ್ಲವನ್ನೂ ನೀಡಿದ್ದೇನೆ. ಈ ಸಂಪತ್ತು ಎಲ್ಲವೂ ನಿಮ್ಮದಾಗಿದೆ. ಈಗ ನನಗೆ ಅದರಲ್ಲೇನೂ ಹಕ್ಕಿಲ್ಲ." ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಖದೀಜರ(ರ) ಗುಲಾಮರನ್ನು ಕರೆದು ಹೇಳಿದರು– "ನೀವು ಇಂದಿನಿಂದ ಸ್ವತಂತ್ರರಾಗಿರುವಿರಿ."

ಪೈಗಂಬರ್(ಸ) ಸಂಪತ್ತಿನ ಬಹಳ ದೊಡ್ಡ ಭಾಗವನ್ನು ಬಡವರಿಗೆ ಹಂಚಿದರು. ಹಝ್ರತ್ ಪೈಗಂಬರ್(ಸ) ವಿಮೋಚಿಸಿದ ಗುಲಾಮರಲ್ಲಿ ಒಬ್ಬ ಝೈದ್ ಎಂಬವರಾಗಿದ್ದರು. ಅವರು ಇತರ ಗುಲಾಮರಿಗಿಂತ ಹೆಚ್ಚು ಚುರುಕು ಮತ್ತು ಬುದ್ಧಿಶಾಲಿಯಾಗಿ ಕಂಡುಬರುತ್ತಿದ್ದರು. ಅವರು ಹೀಗೆ ಯೋಚಿಸಿದರು: "ನನಗೆ ಗುಲಾಮಗಿರಿಯಿಂದ ವಿಮೋಚನೆ ಲಭಿಸಿದೆ. ಆದರೆ ನಾನು ಸದಾ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ದಾಸನಾಗಿ ಇರುವುದೇ ನನಗೆ ಉತ್ತಮವಾಗಿದೆ." ಝೈದ್ ಹೇಳಿದರು: "ನೀವು ನನ್ನನ್ನು ಸ್ವತಂತ್ರನನ್ನಾಗಿ ಮಾಡಿರುವಿರಿ. ಆದರೆ ನಾನು ಸ್ವತಂತ್ರನಾಗಿರಲು ಇಚ್ಛಿಸುವುದಿಲ್ಲ. ನಾನು ನಿಮ್ಮ ಜೊತೆಗೆ ನಿಮ್ಮ ಗುಲಾಮನಾಗಿ ಜೀವಿಸುವೆನು." ಝೈದ್ ಹಝ್ರತ್ ಪೈಗಂಬರರನ್ನು(ಸ) ಬಿಟ್ಟು ಹೋಗದೆ ಅವರ ಜೊತೆಗೆ ನಿಂತರು. ಪರಸ್ಪರ ಪ್ರೀತಿಯು ವರ್ಧಿಸುತ್ತಾ ಇದ್ದಿತ್ತು. ಝೈದ್ ಶ್ರೀಮಂತ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ತಿನ್ನಲು ಕುಡಿಯಲು ಕೊರತೆಯಿಲ್ಲದ ಕುಟುಂಬಕ್ಕೆ ಸೇರಿದವರಾಗಿದ್ದರು. ಡಕಾಯಿತರು

ಅವರನ್ನು ಅಪಹರಿಸಿ ಮಾರಾಟ ಮಾಡಿದ್ದರು. ಅವರ ತಂದೆ ತಾಯಂದಿರು ಮತ್ತು ಸಂಬಂಧಿಕರು ಅವರನ್ನು ಹುಡುಕುತ್ತಿದ್ದರು. ತಮ್ಮ ಹುಡುಗ ಮಕ್ಕದಲ್ಲಿರುವುದಾಗಿ ಅವರಿಗೆ ತಿಳಿಯಿತು. ಅವನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮನೆಯಲ್ಲಿರುವುದಾಗಿ ತಿಳಿದಾಗ ಅವರ ಸಮೀಪಕ್ಕೆ ಹೋಗಿ ಹೇಳಿದರು: "ನೀವು ನಿಮಗಿಷ್ಟವಿರುವಷ್ಟು ಹಣವನ್ನು ನಮ್ಮಿಂದ ಪಡೆದು ನಮ್ಮ ಪುತ್ರನನ್ನು ಬಿಡುಗಡೆಗೊಳಿಸಿರಿ. ಅವನ ತಾಯಿ ಅಳುತ್ತಿದ್ದಾಳೆ. ಅವಳ ಸ್ಥಿತಿ ಬಹಳ ಹಾಳಾಗಿದೆ." ಹಝ್ರತ್ ಪೈಗಂಬರ್(ಸ) ಹೇಳಿದರು: "ನಾನು ಅವನನ್ನು ಇದರ ಮೊದಲೇ ಸ್ವತಂತ್ರನನ್ನಾಗಿ ಮಾಡಿರುವೆನು. ಅವನು ಸ್ವತಂತ್ರನಾಗಿದ್ದಾನೆ. ಅವನು ಹೋಗಲು ಬಯಸುವುದಾದರೆ ಹೋಗಲಿ. ನನಗೆ ನೀವು ಹಣವೇನೂ ನೀಡಬೇಕಾಗಿಲ್ಲ." ಝೈದರ ತಂದೆ ಹೇಳಿದರು: "ಮಗನೆ, ನಾವು ಹೋಗುವ." ಆದರೆ ಝೈದ್ ಹೇಳಿದರು: "ನಾನು ನಿಮ್ಮನ್ನು ಭೇಟಿಯಾದುದು ಸಂತೋಷ. ನಾನು ಮುಂದೆ ತಾಯಿಯನ್ನೂ ಕಾಣಲು ಬರುವೆನು. ಆದರೆ ಈಗ ನಾನು ನಿಮ್ಮ ಜೊತೆಗೆ ಬರಲಾರೆನು. ನಾನು ಹಝ್ರತ್ ಪೈಗಂಬರರ(ಸ) ಗುಲಾಮನಾಗಿದ್ದೇನೆ. ಅವರಿಂದ ಬೇರ್ಪಟ್ಟು ಹೋಗುವ ಪ್ರಶ್ನೆಯೇ ಇಲ್ಲ. ತಂದೆ ತಾಯಂದಿರಿಗಿಂತ ನಾನು ಅವರನ್ನು ಈಗ ಹೆಚ್ಚಿಗೆ ಪ್ರೀತಿಸುತ್ತೇನೆ."

ಝೈದರ ತಂದೆ, ಚಿಕ್ಕಪ್ಪ ಮೊದಲಾದವರು ಬಹಳ ಒತ್ತಾಯ ಮಾಡಿದರೂ ಅವರು ಅವರ ಮಾತಿಗೆ ಒಪ್ಪಿಗೆ ನೀಡಲಿಲ್ಲ. ಝೈದರ ಈ ಪ್ರೀತಿಯನ್ನು ಕಂಡು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: "ಝೈದ್ ಇದರ ಮೊದಲೇ ಸ್ವತಂತ್ರನಾಗಿದ್ದಾನೆ. ಆದರೆ ಅವನು ಇಂದಿನಿಂದ ನನ್ನ ಪುತ್ರನಾಗಿದ್ದಾನೆ." ಈ ಪರಿಸ್ಥಿತಿಯನ್ನು ನೋಡಿ ಝೈದರ ತಂದೆ ಮತ್ತು ಚಿಕ್ಕಪ್ಪ ಅಲ್ಲಿಂದ ತಮ್ಮ ಊರಿಗೆ ಮರಳಿ ಹೋದರು. ಝೈದ್ ಯಾವಾಗಲೂ ಅಲ್ಲೇ ವಾಸಿಸಲು ತೊಡಗಿದರು.

**(ದೀಬಾಚ ತಫ್ಸೀರುಲ್ ಖುರ್‌ಆನಿನಿಂದ ಸಂಕ್ಷಿಪ್ತವಾಗಿ)**

ಪ್ರವಾದಿ ಎಂದು ವಾದಿಸಿದ ನಂತರ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ವಾತಂತ್ರ್ಯದ ಬಗ್ಗೆ ನಿಲುವಿನ ಮಟ್ಟ ವರ್ಧಿಸಿತು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ಪ್ರಕೃತಿಯೊಂದಿಗೆ ಅವರಿಗೆ ಅವತೀರ್ಣವಾದ ಶರೀಅತ್ ಗ್ರಂಥದ ಆಜ್ಞೆ ಸಹ ಗುಲಾಮರಿಗೆ ಅವರ ಹಕ್ಕುಗಳನ್ನು ಕೊಡಬೇಕೆಂದಾಗಿತ್ತು. ಗುಲಾಮರಿಗೆ ಅವರ ಹಕ್ಕುಗಳನ್ನು ನೀಡಲು ಸಾಧ್ಯವಿಲ್ಲದಿದ್ದರೆ ಅವರನ್ನು ವಿಮೋಚಿಸಿರಿ ಎಂದು ಆಜ್ಞಾಪಿಸಲಾಗಿತ್ತು.

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಒಬ್ಬ ಅನುಯಾಯಿ ತನ್ನ ಗುಲಾಮನನ್ನು ಹೊಡೆಯುತ್ತಿರುವುದನ್ನು ಹಝ್ರತ್ ಪೈಗಂಬರ್(ಸ) ಕಂಡಾಗ ಬಹಳ ಕೋಪವನ್ನು ಪ್ರಕಟಿಸಿದರು. ಆಗ ಹಝ್ರತ್ ಪೈಗಂಬರರ(ಸ) ಅನುಯಾಯಿ ಆ ಗುಲಾಮನನ್ನು ಸ್ವತಂತ್ರಗೊಳಿಸಿ ಹೇಳಿದರು: "ಈಗ ನಾನು ಈ ಗುಲಾಮನನ್ನು ಗುಲಾಮಗಿರಿಯಿಂದ ಬಿಡುಗಡೆಗೊಳಿಸುತ್ತೇನೆ." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಆತನನ್ನು ಬಿಡುಗಡೆಗೊಳಿಸದಿರುತ್ತಿದ್ದರೆ ನೀವು ಅಲ್ಲಾಹನ ಶಿಕ್ಷೆಗೆ ಗುರಿಯಾಗುತ್ತಿದ್ದಿರಿ."

**(ಸಹೀಹ್ ಮುಸ್ಲಿಮ್)**

ಅನ್ಯ ಮತಾವಲಂಬಿಗಳಿಗೆ ತಮ್ಮ ಅಭಿಪ್ರಾಯ ಸ್ವಾತಂತ್ರ್ಯದ ಹಕ್ಕು ನೀಡಿದ ಬಗ್ಗೆ ಒಂದು ಉದಾಹರಣೆ ಹಝ್ರತ್ ಪೈಗಂಬರರ(ಸ) ಸರಕಾರ ಮದೀನದಲ್ಲಿ ಸ್ಥಾಪಿತವಾದ

ಕಾಲಕ್ಕೆ ಸಂಬಂಧಿಸಿದೆ.

ಒಂದು ಹದೀಸಿನಲ್ಲಿ ಹಝ್ರತ್ ಅಬೂಹುರೈರ(ರ) ಹೀಗೆ ವರದಿ ಮಾಡುತ್ತಾರೆ: ಇಬ್ಬರು ಪರಸ್ಪರ ಬೈದುಕೊಂಡು ಜಗಳ ಮಾಡುತ್ತಾ ಇದ್ದರು. ಅವರಲ್ಲೊಬ್ಬ ಮುಸ್ಲಿಮ್, ಇನ್ನೊಬ್ಬ ಯಹೂದಿ. ಮುಸ್ಲಿಮ್ ಹೇಳಿದನು: ಮುಹಮ್ಮದ್ ಪೈಗಂಬರರನ್ನು(ಸ) ಸರ್ವಲೋಕದಿಂದ ಆಯ್ಕೆಮಾಡಿ ಶ್ರೇಷ್ಠತೆ ನೀಡಿದ ಅಲ್ಲಾಹನಾಣೆ! ಯಹೂದಿ ಹೇಳಿದನು: ಪ್ರವಾದಿ ಮೂಸಾರನ್ನು ಸರ್ವಲೋಕದಿಂದ ಆಯ್ಕೆಮಾಡಿ ಶ್ರೇಷ್ಠತೆ ನೀಡಿದ ದೇವನಾಣೆ! ಆಗ ಮುಸ್ಲಿಮನು ಕೈ ಎತ್ತಿ ಯಹೂದಿಗೆ ಹೊಡೆದನು. ಯಹೂದಿ ಹಝ್ರತ್ ಪೈಗಂಬರರಿಗೆ(ಸ) ದೂರಿತ್ತನು. ಹಝ್ರತ್ ಪೈಗಂಬರ್(ಸ) ಜಗಳದ ಬಗ್ಗೆ ಮುಸ್ಲಿಮನಿಂದ ವಿವರಗಳನ್ನು ಕೇಳಿದ ನಂತರ ಹೇಳಿದರು: "ಲಾ ತುಖಯ್ಯಿರೂನಿ ಅಲಾ ಮೂಸಾ – ನನಗೆ ಪ್ರವಾದಿ ಮೂಸಾರಿಗಿಂತ ಶ್ರೇಷ್ಠತೆ ನೀಡಬೇಡಿರಿ." **(ಬುಖಾರಿ)**

ಇದು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಮನಸ್ಸಾಕ್ಷಿ ಸ್ವಾತಂತ್ರ್ಯದ ಬಗ್ಗೆ ಅವರ ಅಭಿಪ್ರಾಯದ ಉನ್ನತ ಮಟ್ಟವಾಗಿತ್ತು. ಆಗ ಮದೀನದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸರಕಾರವಿತ್ತು. ಅವರು ಮದೀನಕ್ಕೆ ವಲಸೆ ಬಂದ ನಂತರ ಅಲ್ಲಿ ಶಾಂತಿಯ ವಾತಾವರಣ ಸೃಷ್ಟಿಸಲು ಮದೀನದ ಗೋತ್ರಗಳು ಮತ್ತು ಯಹೂದಿಯರ ಜೊತೆ ಒಂದು ಒಪ್ಪಂದ ಮಾಡಿದ್ದರು. ಮುಸ್ಲಿಮರು ಬಹುಸಂಖ್ಯಾತರಾದ ಕಾರಣದಿಂದ ಅಥವಾ ಮುಸ್ಲಿಮರಾಗದ ಜನರು ಸಹ ಮುಸ್ಲಿಮರೊಂದಿಗೆ ಸಹಕರಿಸಿದ ಕಾರಣದಿಂದ ಮದೀನದ ಸರಕಾರ ವಾಸ್ತವಿಕವಾಗಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕೈವಶವಾಗಿತ್ತು. ಆದರೆ ಸರಕಾರದ ಆಧಿಪತ್ಯ ದೊರಕಿದ ಕಾರಣ ಮುಸ್ಲಿಮೇತರ ಪ್ರಜೆಗಳ ಭಾವನೆಗಳ ಬಗ್ಗೆ ಲಕ್ಷ್ಯ ನೀಡಬಾರದು ಎಂಬ ಧೋರಣೆ ಆ ಸರಕಾರಕ್ಕಿರಲಿಲ್ಲ. ಎಲ್ಲ ಸಂದೇಶವಾಹಕರಿಗಿಂತ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಶ್ರೇಷ್ಠರು ಎಂದು ಪವಿತ್ರ ಖುರ್‌ಆನ್ ಸಾಕ್ಷ್ಯ ಹೇಳಿದ್ದರೂ ತನ್ನನ್ನು ಇತರ ಸಂದೇಶವಾಹಕರೊಂದಿಗೆ ಹೋಲಿಸಿ ಹೇಳಿ ವಾತಾವರಣವನ್ನು ಕೆಡಿಸಬಾರದೆಂದು ಹಝ್ರತ್ ಪೈಗಂಬರ್(ಸ) ಇಚ್ಛಿಸಿದರು. ಹಝ್ರತ್ ಪೈಗಂಬರ್(ಸ) ಆ ಮುಸ್ಲಿಮನ ವರ್ತನೆ ಬಗ್ಗೆ ಅತೃಪ್ತಿ ಸೂಚಿಸಿದರು: "ನೀವು ನಿಮ್ಮ ಜಗಳಗಳಲ್ಲಿ ಸಂದೇಶವಾಹಕರನ್ನು ತರಬೇಡಿರಿ. ನಿಮ್ಮ ದೃಷ್ಟಿಯಲ್ಲಿ ನಾನು ಎಲ್ಲ ಸಂದೇಶವಾಹಕರಿಗಿಂತ ಶ್ರೇಷ್ಠನಾಗಿರುವೆನು. ಅಲ್ಲಾಹನೂ ಇದರ ಬಗ್ಗೆ ಸಾಕ್ಷ್ಯ ನೀಡಿದ್ದಾನೆ. ಆದರೆ ನಮ್ಮ ಸರಕಾರದಲ್ಲಿ ಒಬ್ಬ ವ್ಯಕ್ತಿಯ ಪ್ರವಾದಿಯ ಬಗ್ಗೆ ಯಾರೋ ಒಬ್ಬನು ಏನೋ ಹೇಳಿದುದರಿಂದ ಅವನ ಹೃದಯಕ್ಕೆ ನೋವಾಗಬಾರದು. ಇದಕ್ಕೆ ನಾನು ಅನುಮತಿಯನ್ನು ನೀಡಲಾರೆನು. ನನ್ನನ್ನು ಗೌರವಿಸುವ ನೀವು ಇತರ ಸಂದೇಶವಾಹಕರನ್ನೂ ಗೌರವಿಸಬೇಕು."

ಇದು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನ್ಯಾಯಪಾಲನೆ, ಅಭಿಪ್ರಾಯ ಸ್ವಾತಂತ್ರ್ಯದ ಮಟ್ಟವಾಗಿದೆ. ಮುಸ್ಲಿಮರನ್ನು ಮತ್ತು ಮುಸ್ಲಿಮೇತರರನ್ನು ಲಕ್ಷ್ಯದಲ್ಲಿರಿಸಿ ಇದನ್ನು ಸ್ಥಾಪಿಸಿದರು. ಕೆಲವು ಸಂದರ್ಭಗಳಲ್ಲಿ ಅವರು ಮುಸ್ಲಿಮೇತರರ ಭಾವನೆಗಳಿಗೆ ಹೆಚ್ಚು ಗಮನ ನೀಡುತ್ತಿದ್ದರು.

## ಮಾನವೀಯ ಮೌಲ್ಯಗಳನ್ನು ಮತ್ತು ಧಾರ್ಮಿಕ ಸೌಹಾರ್ದವನ್ನು ಸ್ಥಾಪಿಸಲು ಹಝ್ರತ್ ಪೈಗಂಬರರ(ಸ) ಅಪ್ರತಿಮ ಕೃತ್ಯರೂಪದ ಉದಾಹರಣೆಗಳು

ಹಝ್ರತ್ ಪೈಗಂಬರ್(ಸ) ಮಾನವೀಯ ಮೌಲ್ಯಗಳನ್ನು ಕಾಪಾಡಲು ಮತ್ತು ಧಾರ್ಮಿಕ ಸೌಹಾರ್ದ ಸ್ಥಾಪಿಸಲು ಮಾಡಿದ ಒಂದು ಕೆಲಸದ ಉದಾಹರಣೆ ಹೀಗಿದೆ: ಅಬ್ದುರ್ರಹ್ಮಾನ್ ಬಿನ್ ಅಬೀ ಲೈಲ ವರದಿ ಮಾಡುತ್ತಾರೆ – ಸಹ್ಲ್ ಬಿನ್ ಹನೀಫ್ ಮತ್ತು ಖೈಸ್ ಬಿನ್ ಸಅದ್‌ರು ಖಾದಿಸಿಯ್ಯ ಎಂಬ ಸ್ಥಳದಲ್ಲಿ ಕುಳಿತಿದ್ದಾಗ ಅವರ ಸಮೀಪದಿಂದ ಒಂದು ಮೃತ ಶರೀರವನ್ನು ದಫನು ಮಾಡಲು ಸಾಗಿಸುವುದಾಗಿ ಕಂಡರು. ಆಗ ಅವರಿಬ್ಬರೂ ಎದ್ದು ನಿಂತರು. ಆಗ ಅವರಿಗೆ ಅದು ಒಬ್ಬ ಮುಸ್ಲಿಮೇತರನ ಮೃತಶರೀರ ಎಂದು ತಿಳಿಸಿದಾಗ ಅವರಿಬ್ಬರೂ ಹೀಗೆ ಹೇಳಿದರು: ಒಮ್ಮೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸಮೀಪದಿಂದ ಒಂದು ಜನಾಝ (ಮೃತ ಶರೀರ) ದಾಟಿ ಹೋಗುತ್ತಿದ್ದಾಗ ಅವರು ಗೌರವ ಸೂಚಕವಾಗಿ ಎದ್ದು ನಿಂತರು. ಅದು ಒಬ್ಬ ಯಹೂದಿಯ ಜನಾಝ ಎಂದು ಅವರಿಗೆ ತಿಳಿಸಿದಾಗ ಅವರು ಹೇಳಿದರು: ಅಲೈಸತ್ ನಫ್‌ಸನ್ – ಏನು ಅವನು ಮನುಷ್ಯನಲ್ಲವೇ? **(ಸಹೀಹ್ ಬುಖಾರಿ)**

ಇದು ಅನ್ಯ ಧರ್ಮಕ್ಕೂ ಮನುಷ್ಯತ್ವಕ್ಕೂ ನೀಡಿದ ಗೌರವವಾಗಿದೆ. ಇಂತಹ ಉದಾಹರಣೆಗಳಿಂದ ಧಾರ್ಮಿಕ ಸೌಹಾರ್ದದ ವಾತಾವರಣ ಸೃಷ್ಟಿಸಲ್ಪಡುತ್ತದೆ. ಇಂತಹ ಕೆಲಸಗಳಿಂದ ಪರಸ್ಪರ ಮೃದುಭಾವನೆಗಳು ಹುಟ್ಟುತ್ತವೆ. ಇಂತಹ ಭಾವನೆಗಳಿಂದಲೇ ಪ್ರೀತಿ ಮತ್ತು ಶಾಂತಿಯ ವಾತಾವರಣ ಉಂಟಾಗುತ್ತದೆ. ಇಂದಿನ ಕಾಲದ ಲೌಕಿಕ ವಾದಿಗಳ ಕೆಲಸಗಳಿಂದ ದ್ವೇಷ ಅಸೂಯೆಗಳ ವಾತಾವರಣ ಮಾತ್ರ ಸೃಷ್ಟಿಸಲ್ಪಡುತ್ತದೆ.

ಇನ್ನೊಂದು ಹದೀಸು ಹೀಗಿದೆ: ಖೈಬರ್ ಕೋಟೆ ಜಯಿಸಿದಾಗ ಯಹೂದಿಯರ ಧರ್ಮ ಗ್ರಂಥವಾದ ತೌರಾತ್‌ನ ಕೆಲವು ಪ್ರತಿಗಳು ಮುಸ್ಲಿಮರಿಗೆ ದೊರಕಿದುವು. ಯಹೂದಿಯರು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಕಂಡು, ತಮಗೆ ತಮ್ಮ ಪವಿತ್ರ ಗ್ರಂಥದ ಪ್ರತಿಗಳನ್ನು ಮರಳಿ ನೀಡಬೇಕೆಂದು ಅಪೇಕ್ಷಿಸಿದಾಗ ಹಝ್ರತ್ ಪೈಗಂಬರ್(ಸ) ಯಹೂದಿಯರ ಧಾರ್ಮಿಕ ಗ್ರಂಥಗಳನ್ನು ಮರಳಿಸಬೇಕೆಂದು ತನ್ನ ಸಹಾಬರಿಗೆ (ಶಿಷ್ಯರಿಗೆ) ಆಜ್ಞಾಪಿಸಿದರು. **(ಅಸ್ಸೀರತುಲ್ ಹಲ್‌ಬಿಯ್ಯ)**

ಆ ಸಮಯದಲ್ಲಿ ಯಹೂದಿಯರ ತಪ್ಪು ಕೆಲಸಗಳ ಕಾರಣದಿಂದ ಅವರಿಗೆ ಶಿಕ್ಷೆ ನೀಡಲಾಗುತ್ತಿತ್ತು. ಅಂತಹ ಸಂದರ್ಭಗಳಲ್ಲೂ ಪೈಗಂಬರ್(ಸ) ತಮ್ಮ ವಿರೋಧಿಗಳ ಧಾರ್ಮಿಕ ಭಾವನೆಗಳಿಗೆ ನೋವುಂಟಾಗುವ ರೀತಿಯಲ್ಲಿ ವರ್ತಿಸುತ್ತಿರಲಿಲ್ಲವೆಂದು ಸ್ಪಷ್ಟವಾಗುತ್ತದೆ.

ನಾನು ವಿವರಿಸಿದವು ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದ ಸಂಭವಗಳಾಗಿವೆ. ಮದೀನದಲ್ಲಿ ಅನ್ಯರೊಂದಿಗೆ ಒಂದು ಒಪ್ಪಂದವಾದ ಬಗ್ಗೆ ನಾನು ಇದರ ಮೊದಲು ಪ್ರಸ್ತಾಪಿಸಿದ್ದೆ. ಆ ಒಪ್ಪಂದದ ಷರತ್ತುಗಳ ಬಗ್ಗೆ ನಾನು ವಿವರಿಸುವೆನು. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮದೀನದಲ್ಲಿ ಸೌಹಾರ್ದದ ವಾತಾವರಣವನ್ನು ಸೃಷ್ಟಿಸಲು ಹೇಗೆ ಪ್ರಯತ್ನಿಸಿದರು? ಆ ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಲು ಹಝ್ರತ್ ಪೈಗಂಬರ್(ಸ)

ಏನು ಮಾಡಲು ಬಯಸುತ್ತಿದ್ದರು? ಅಲ್ಲಿ ಶಾಂತಿ ಸ್ಥಾಪನೆಯಾಗಿ ಮಾನವೀಯ ಮೌಲ್ಯಗಳು ಸ್ಥಾಪಿತವಾಗಲು ಯಾವ ಪ್ರಯತ್ನ ಮಾಡಿದರು? ಎಂಬುದೆಲ್ಲ ಇದರಿಂದ ಸ್ಪಷ್ಟವಾಗುತ್ತದೆ.

**ಯಹೂದಿಯರೊಂದಿಗೆ ಹಝ್ರ್‌ರತ್ ಮುಹಮ್ಮದ್ ಪೈಗಂಬರ್(ಸ) ಮಾಡಿದ ಒಪ್ಪಂದದ ಷರತ್ತುಗಳಲ್ಲಿ ಕೆಲವು ಈ ಕೆಳಗಿನವುಗಳಾಗಿವೆ:**

1. ಮುಸ್ಲಿಮರು ಮತ್ತು ಯಹೂದಿಯರು ಪರಸ್ಪರ ಸಹಾನುಭೂತಿ ಮತ್ತು ಪ್ರಮಾಣಿಕತೆಯಿಂದ ವರ್ತಿಸಿ ಜೀವಿಸುವರು. ಒಂದು ವರ್ಗದವರು ಇನ್ನೊಂದು ವರ್ಗದವರ ವಿರುದ್ಧ ದೌರ್ಜನ್ಯ ಮಾಡಬಾರದು.
   (ಈ ಶರತ್ತನ್ನು ಯಹೂದಿಯರು ಉಲ್ಲಂಘಿಸುತ್ತಾ ಇದ್ದರು. ಹೀಗಿದ್ದರೂ ಹಝ್ರ್‌ರತ್ ಪೈಗಂಬರ್(ಸ) ಸಹಾನುಭೂತಿಯಿಂದ ಅವರೊಂದಿಗೆ ವರ್ತಿಸುತ್ತಿದ್ದರು. ಆದರೆ ಅವರ ಅಕ್ರಮ ಕೃತ್ಯಗಳು ಮಿತಿಮೀರಿದಾಗ ಯಹೂದಿಯರ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಬಂಧಿತರಾದರು.)
2. ಪ್ರತಿಯೊಂದು ಜನಾಂಗಕ್ಕೆ ಧಾರ್ಮಿಕ ಸ್ವಾತಂತ್ರ್ಯವಿರುವುದು. (ಮುಸ್ಲಿಮರು ಬಹುಸಂಖ್ಯಾತರಾಗಿದ್ದರೂ ನೀವು ನಿಮ್ಮ ಧರ್ಮ ಪ್ರಕಾರ ನಂಬಿಕೆಗಳನ್ನು ಹೊಂದಲು ಸ್ವತಂತ್ರರು.)
3. ಎಲ್ಲ ಪ್ರಜೆಗಳ ಜೀವ ಮತ್ತು ಸಂಪತ್ತು ಸಂರಕ್ಷಿಸಲ್ಪಡುವುವು. ದೌರ್ಜನ್ಯ ಮಾಡುವವರನ್ನು ಹೊರತು ಉಳಿದೆಲ್ಲರನ್ನೂ ಗೌರವಿಸಲಾಗುವುದು. (ಅಪರಾಧ ಮಾಡುವವನಿಗೆ ಅವನು ಮುಸ್ಲಿಮನಾದರೂ ಮುಸ್ಲಿಮೇತರನಾದರೂ ಶಿಕ್ಷೆ ಸಿಗುವುದು. ಜನರ ಸಂರಕ್ಷಣೆ ಸಮಾಜದ ಮತ್ತು ಸರಕಾರದ ಕೆಲಸವಾಗಿದೆ.)
4. ಪ್ರತಿಯೊಂದು ಭಿನ್ನಾಭಿಪ್ರಾಯ ಮತ್ತು ಜಗಳ ತೀರ್ಪು ನೀಡಲು ಹಝ್ರ್‌ರತ್ ಮುಹಮ್ಮದ್ ಪೈಗಂಬರರ(ಸ) ಸಮಕ್ಷಮ ಅರ್ಪಿಸಲ್ಪಡುವುದು. ಪ್ರತಿಯೊಂದು ವಿಷಯದ ಬಗ್ಗೆ ತೀರ್ಪು ದೇವಾಜ್ಞೆಗಳ ಪ್ರಕಾರ ನೀಡಲಾಗುವುದು. (ದೇವಾಜ್ಞೆ ಎಂದರೆ ಪ್ರತಿಯೊಂದು ಜನಾಂಗಕ್ಕೆ ಅದರ ಧರ್ಮಶಾಸನ ಪ್ರಕಾರ ತೀರ್ಪು ನೀಡಲಾಗುವುದು ಎಂದು ಅರ್ಥ. ಆದರೆ ತೀರ್ಪಿಗೋಸ್ಕರ ಹಝ್ರ್‌ರತ್ ಪೈಗಂಬರರನ್ನು(ಸ) ಸಮೀಪಿಸಬೇಕು. ಏಕೆಂದರೆ ಸರಕಾರದ ಉನ್ನತ ಆಡಳಿತಾಧಿಕಾರಿ ಅವರಾಗಿದ್ದರು. ಆದುದರಿಂದ ತೀರ್ಪಿನ ಬಗ್ಗೆ ಅಧಿಕಾರ ಅವರಿಗೆ ಮತ್ತು ತೀರ್ಪು ಆಯಾ ಧರ್ಮಶಾಸನ ಪ್ರಕಾರವೇ ನೀಡಬೇಕಾಗಿತ್ತು. ಯಹೂದಿಯರಿಗೆ ಸಂಬಂಧಿಸಿ ಕೆಲವು ತೀರ್ಪುಗಳು ಯಹೂದಿಯರ ಧರ್ಮಶಾಸನ ಪ್ರಕಾರವಾಗಿತ್ತು. ಇದರ ಬಗ್ಗೆ ಆ ತೀರ್ಪು ದೌರ್ಜನ್ಯಕರವೆಂದು ಕ್ರೈಸ್ತರು ಆಕ್ಷೇಪಿಸುತ್ತಾರೆ. ಇತರ ವಿರೋಧಿಗಳೂ ಆಕ್ಷೇಪಿಸುತ್ತಾರೆ. ವಾಸ್ತವಿಕ ವಿಷಯವೇನೆಂದರೆ, ಯಹೂದಿಯರು ಹೇಳಿದ ಪ್ರಕಾರ ಅವರ ಧರ್ಮಶಾಸನ ಅನುಸಾರ ತೀರ್ಪು ನೀಡಲಾಗಿತ್ತು.)
5. ಯಾವುದೇ ವಿಭಾಗ ಹಝ್ರ್‌ರತ್ ಪೈಗಂಬರರ(ಸ) ಅನುಮತಿ ಪಡೆಯದೆ ಯುದ್ಧ ಮಾಡಲು ಹೊರಡಬಾರದು. ಏಕೆಂದರೆ ಒಂದು ಸರಕಾರದ ಅಧೀನದಲ್ಲಿ ಜೀವಿಸುವಾಗ ಆ ಸರಕಾರಕ್ಕೆ ವಿಧೇಯರಾಗಬೇಕಾದುದು ಆವಶ್ಯಕವಾಗಿದೆ. (ಈ ಷರತ್ತು ಈಗಿನ ಕಾಲದ ಜಿಹಾದೀ ಸಂಘಟನೆಗಳಿಗೂ ಅನ್ವಯಿಸುತ್ತದೆ

ಮತ್ತು ಮಾರ್ಗದರ್ಶಿಯಾಗಿದೆ. ಅವರು ಯಾವ ಸರಕಾರದ ಕೆಳಗೆ ಜೀವಿಸುತ್ತಿರುವವರೋ ಆ ಸರಕಾರದ ಅನುಮತಿ ಇಲ್ಲದೆ ಯಾವುದೇ ರೀತಿಯ ಜಿಹಾದ್ ಮಾಡಬಾರದು. ಆದರೆ ಅವರು ತಾವಿರುವ ಸರಕಾರದ ಸೈನ್ಯದಲ್ಲಿ ಸೇರಿ ಆ ಸರಕಾರ ಯುದ್ಧ ಮಾಡುವುದಾದರೆ ಯುದ್ಧದಲ್ಲಿ ಪಾಲುಗೊಳ್ಳಬಹುದು.)

6. ಯಹೂದಿಯರ ಮತ್ತು ಮುಸ್ಲಿಮರ ವಿರುದ್ಧ ಯಾರಾದರೂ ಯುದ್ಧ ಮಾಡಿದರೆ ಅವರು ಒಬ್ಬರಿನ್ನೊಬ್ಬರ ಸಹಾಯಕ್ಕೆ ಬರಬೇಕು. (ಎರಡು ವಿಭಾಗಗಳಲ್ಲಿ ಒಂದರ ವಿರುದ್ಧ ಯಾರಾದರೂ ಯುದ್ಧ ಮಾಡಿದರೆ ಇನ್ನೊಂದು ವಿಭಾಗ ಸಹಾಯಕ್ಕೆ ಬರುವುದು ಮತ್ತು ಶತ್ರುಗಳೊಂದಿಗೆ ರಾಜಿ ಒಪ್ಪಂದವಾದರೆ ಅದರ ಪರಿಣಾಮವಾಗಿ ಯಾವುದಾದರೂ ಲಾಭ ಸಿಗುವುದಾದರೆ ಆ ಲಾಭವನ್ನು ಎರಡು ವಿಭಾಗದ ಜನರಿಗೂ ಹಂಚಿಕೊಡಲಾಗುವುದು.) ಇದೇ ರೀತಿ ಮದೀನವನ್ನು ಯಾರಾದರೂ ಆಕ್ರಮಿಸಿದರೆ ಎಲ್ಲರೂ ಒಗ್ಗೂಡಿ ಆಕ್ರಮಣಗಾರರನ್ನು ಎದುರಿಸುವರು.
7. ಮಕ್ಕದ ಖುರೈಶಿಗಳಿಗೆ ಮತ್ತು ಅವರ ಬೆಂಬಲಿಗರಿಗೆ ಯಹೂದಿಯರು ಯಾವುದೇ ರೀತಿಯ ಸಹಾಯ ಅಥವಾ ಆಶ್ರಯವನ್ನು ನೀಡಬಾರದು. (ಮಕ್ಕದ ವಿರೋಧಿಗಳಾದ ಅವಿಶ್ವಾಸಿಗಳು ಮುಸ್ಲಿಮರನ್ನು ಮಕ್ಕದಿಂದ ಹೊರಗೆ ಹಾಕಿದ್ದರು. ಮುಸ್ಲಿಮರು ಮದೀನಕ್ಕೆ ಬಂದು ಆಶ್ರಯ ಪಡೆದಿದ್ದರು. ಆದುದರಿಂದ ಮದೀನದ ಸರಕಾರದಲ್ಲಿ ವಾಸಿಸುವವರು ಆ ಶತ್ರು ಜನಾಂಗದವರೊಂದಿಗೆ ಯಾವುದೇ ರೀತಿಯ ಒಪ್ಪಂದ ಮಾಡಬಾರದು ಮತ್ತು ಅವರ ನೆರವು ಪಡೆಯಬಾರದು.)
8. ಪ್ರತಿಯೊಂದು ವಿಭಾಗ ತನ್ನ ಖರ್ಚು ವೆಚ್ಚಗಳನ್ನು ತಾನೇ ವಹಿಸಿ ಕೊಳ್ಳುವುದು.
9. ಈ ಒಪ್ಪಂದದ ಕಾರಣ ಯಾವುದೇ ದೌರ್ಜನ್ಯಗಾರ ಅಥವಾ ಅಪರಾಧಿ ಶಿಕ್ಷೆಯನ್ನು ಅನುಭವಿಸುವುದರಿಂದ ರಕ್ಷಿಸಲ್ಪಡಲಾರನು. ಅಪರಾಧಿಗೆ ಶಿಕ್ಷೆ ನೀಡಲಾಗುವುದು ಅಥವಾ ಅವನಿಗೆ ಸೇಡು ತೀರಿಸಲಾಗುವುದು. (ಹಿಂದೆ ಹೇಳಿದ ಹಾಗೆ ದೌರ್ಜನ್ಯ ಮಾಡುವವನಿಗೆ, ಪಾಪಕೃತ್ಯ ಮಾಡುವವನಿಗೆ, ತಪ್ಪು ಕೆಲಸ ಮಾಡುವವನಿಗೆ ಶಿಕ್ಷೆ ಸಿಗುವುದು. ಯಾವುದೇ ವ್ಯತ್ಯಾಸವಿಲ್ಲದೆ ಮುಸ್ಲಿಮನಾದ, ಯಹೂದಿಯಾದ ಅಥವಾ ಅನ್ಯ ಧರ್ಮದವನಾದ ಅಪರಾಧಿಗೆ ಶಿಕ್ಷೆ ವಿಧಿಸಲ್ಪಡುವುದು.) **(ಸೀರತ್ ಖಾತಮುನ್ನಬಿಯ್ಯೀನ್‌ನಿಂದ ಸಂಕ್ಷಿಪ್ತವಾಗಿ)**

ಧಾರ್ಮಿಕ ಸೌಹಾರ್ದ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಕಾಪಾಡಲು ಹಝ್ರತ್ ಮುಹಮ್ಮದ್ ಪೈಗಂಬರ್[ಸ] ನಜ್‌ರಾನಿನ ಕ್ರೈಸ್ತರ ಪ್ರತಿನಿಧಿ ಸಂಘಕ್ಕೆ ಮಸ್‌ಜಿದ್ ನಬವಿಯಲ್ಲಿ ಆರಾಧಿಸಲು ಅನುಮತಿ ನೀಡಿದರು. ಅವರು ಪೂರ್ವದಿಕ್ಕಿಗೆ ಅಭಿಮುಖೀಕರಿಸಿ ತಮ್ಮ ಆರಾಧನೆ ನಡೆಸಿದರು. ಆ ಸಂದರ್ಭದಲ್ಲಿ ಶಿಷ್ಯರ ಅಭಿಪ್ರಾಯ ಹಾಗೆ ಮಾಡಲು ಅನುಮತಿಸಬಾರದು ಎಂದಾಗಿತ್ತು. ಆದರೆ ಹಝ್ರತ್ ಪೈಗಂಬರ್[ಸ] ಹೇಳಿದರು: ಅದರಿಂದ ಯಾವ ವ್ಯತ್ಯಾಸವೂ ಉಂಟಾಗದು.

ನಜ್‌ರಾನಿನ ಜನರಿಗೆ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಶಾಂತಿಯ ದೃಢಪತ್ರಿಕೆಯಲ್ಲಿ ಹೀಗೆ ಹೇಳಿದ್ದರು: ಮುಸ್ಲಿಮ್ ಸೈನ್ಯದ ಮೂಲಕ ನಜ್‌ರಾನಿನ ಕ್ರೈಸ್ತರ ದೇಶದ ಗಡಿಗಳನ್ನು ಸಂರಕ್ಷಿಸುವ ಜವಾಬ್ದಾರಿ ತನಗಿದೆ. ಅವರ ಇಗರ್ಜಿಗಳು, ಅವರ

ಆರಾಧನಾಲಯಗಳು, ಪ್ರವಾಸಿ ಮಂದಿರಗಳು ಅವು ಎಷ್ಟು ದೂರ ಪ್ರದೇಶಗಳಲ್ಲಿದ್ದರೂ ಅಥವಾ ನಗರಗಳಲ್ಲಿದ್ದರೂ ಪರ್ವತಗಳ ಮೇಲಿದ್ದರೂ ಕಾಡು ಪ್ರದೇಶಗಳಲ್ಲಿದ್ದರೂ ಅವುಗಳ ಸಂರಕ್ಷಣೆಯ ಹೊಣೆಗಾರಿಕೆ ಮುಸ್ಲಿಮರದ್ದಾಗುವುದು. ಅವರಿಗೆ ತಮ್ಮ ಧರ್ಮದ ಪ್ರಕಾರ ಆರಾಧನೆ ಮಾಡಲು ಸ್ವಾತಂತ್ರ್ಯವಿರುವುದು. ಅವರ ಆರಾಧನೆಯ ಸ್ವಾತಂತ್ರ್ಯವನ್ನು ರಕ್ಷಿಸುವ ಹೊಣೆಗಾರಿಕೆ ಮುಸ್ಲಿಮರದ್ದಾಗಿದೆ. "ಅವರು ಮುಸ್ಲಿಮ್ ಸರಕಾರದ ಪ್ರಜೆಗಳಾದ ಕಾರಣ ಅವರನ್ನು ಸಂರಕ್ಷಿಸುವ ಹೊಣೆಗಾರಿಕೆ ನನಗಿದೆ" ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು.

ಆ ಶಾಂತಿ ದೃಢಪತ್ರಿಕೆಯಲ್ಲಿ ಹೀಗೆ ಸಹ ಬರೆಯಲಾಗಿತ್ತು: ಮುಸ್ಲಿಮರು ತಮ್ಮ ಯುದ್ಧಕ್ಕೋಸ್ಕರ ಕ್ರೈಸ್ತ ಧರ್ಮದ ಜನರನ್ನು ಅವರ ಇಚ್ಛೆಗೆ ವಿರುದ್ಧವಾಗಿ ತಮ್ಮ ಸೈನ್ಯದಲ್ಲಿ ಸೇರಿಸಲಾರರು. ಕ್ರೈಸ್ತರ ಪಾದರಿಗಳಿಗೆ ಮತ್ತು ಧಾರ್ಮಿಕ ನಾಯಕರಿಗೆ ಯಾವ ಪದವಿಗಳು ಲಭಿಸಿದೆಯೋ ಅವುಗಳಿಂದ ಅವರನ್ನು ಸ್ಥಾನ ಭ್ರಷ್ಟರನ್ನಾಗಿ ಮಾಡಲಿಕ್ಕಿಲ್ಲ. ಅವರೆಲ್ಲರೂ ತಮ್ಮ ಸ್ಥಾನಕ್ಕನುಸಾರವಾಗಿ ಕೆಲಸವನ್ನು ಮುಂದುವರಿಸುವರು. ಅವರ ಆರಾಧನಾಲಯಗಳಲ್ಲಿ ಹಸ್ತಕ್ಷೇಪ ನಡೆಯಲಾರದು. ಅವುಗಳನ್ನು ಯಾವುದೇ ಪರಿಸ್ಥಿತಿಯಲ್ಲಿ ಬೇರೆ ಉಪಯೋಗಕ್ಕೆ ಒಳಪಡಿಸಲಿಕ್ಕಿಲ್ಲ. ಅವುಗಳನ್ನು ಅತಿಥಿ ಮಂದಿರಗಳಾಗಿ ಪರಿವರ್ತಿಸಲಿಕ್ಕಿಲ್ಲ. ಅಲ್ಲಿ ಯಾರನ್ನೂ ವಾಸಿಸಲು ಬಿಡಲಿಕ್ಕಿಲ್ಲ. ಅವರ ಅನುಮತಿ ಇಲ್ಲದೆ ಬೇರೆ ಉದ್ದೇಶಗಳಿಗೋಸ್ಕರ ಬಳಸಲಿಕ್ಕಿಲ್ಲ. ಕ್ರೈಸ್ತ ಪಾದರಿಗಳು ಎಲ್ಲಿದ್ದರೂ ಅವರಿಂದ ಜಿಝಿಯಾ ಮೊದಲಾದ ತೆರಿಗೆಗಳು ವಸೂಲು ಮಾಡಲಿಕ್ಕಿಲ್ಲ. ಯಾವನೇ ಮುಸ್ಲಿಮನಿಗೆ ಕ್ರೈಸ್ತ ಧರ್ಮಾವಲಂಬಿ ಪತ್ನಿ ಇದ್ದರೆ ಅವಳು ತನ್ನ ರೀತಿಯಲ್ಲಿ ಆರಾಧಿಸುವ ಸ್ವಾತಂತ್ರ್ಯವಿರುವುದು. ಯಾರಾದರೂ ತಮ್ಮ ಧರ್ಮ ಪಂಡಿತರ ಸಲಹೆ ಕೇಳಲು ಬಯಸುವುದಾದರೆ ಹಾಗೆ ಮಾಡಬಹುದು. ಇಗರ್ಜಿ ಇತ್ಯಾದಿಗಳ ದುರಸ್ತಿಗೋಸ್ಕರ ಮುಸ್ಲಿಮರಿಂದ ಆರ್ಥಿಕ ಸಹಾಯ ಬೇಡಿದರೆ ಅಥವಾ ಇನ್ನಿತರ ಸಹಾಯ ಅಪೇಕ್ಷಿಸಿದರೆ ಮುಸ್ಲಿಮರು ಸಹಾಯ ನೀಡಬೇಕು. ಏಕೆಂದರೆ ಇದು ಉತ್ತಮ ಕೆಲಸವಾಗಿದೆ. ಇದು ಸಾಲ ರೂಪದಲ್ಲಾಗಲಿ ಉಪಕಾರದ ರೂಪದಲ್ಲಾಗಲಿ ನೀಡುವ ಸಹಾಯವಲ್ಲ. ಇದು ಒಪ್ಪಂದಗಳನ್ನು ಉತ್ತಮವಾಗಿ ಈಡೇರಿಸಲಿಕ್ಕಾಗಿದೆ. ಈ ರೀತಿಯ ಸಾಮಾಜಿಕ ಸಂಬಂಧದ ಮತ್ತು ಪರಸ್ಪರ ನೆರವು ನೀಡುವ ಕೆಲಸ ಮಾಡಬೇಕು.

**(ಝಾದುಲ್ ಮಆದ್‌ನಿಂದ ಸಂಕ್ಷಿಪ್ತವಾಗಿ)**

ಧಾರ್ಮಿಕ ಸ್ವಾತಂತ್ರ್ಯವನ್ನೂ ಸೌಹಾರ್ದವನ್ನೂ ಸ್ಥಾಪಿಸಲು ಹಝ್ರತ್ ಪೈಗಂಬರ್(ಸ) ಕೈಗೊಂಡ ಉನ್ನತ ಮಟ್ಟದ ಕೆಲಸಗಳು ಮೇಲಿನವುಗಳಾಗಿವೆ. ಇಂತಹ ಮಹಾನುಭಾವರ ಬಗ್ಗೆ ದೌರ್ಜನ್ಯ ಮಾಡುವವರೆಂದೂ ಖಡ್ಗ ಬಲದಿಂದ ಇಸ್ಲಾಮಿನ ಪ್ರಚಾರ ಮಾಡಿದರೆಂದೂ ದೋಷಾರೋಪಿಸುವುದು ಅತ್ಯಂತ ದೌರ್ಜನ್ಯ ಭರಿತ ಕೃತ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ:

"ಅರಬ್ ದೇಶದಲ್ಲಿದ್ದ ಗ್ರಂಥ ನೀಡಲ್ಪಟ್ಟ ಜನರು (ಯಹೂದಿಯರು ಮತ್ತು ಕ್ರೈಸ್ತರು) ಮತ್ತು ಬಹುದೇವಾರಾಧಕರು ಅತ್ಯಂತ ಕೆಟ್ಟ ನಡತೆ ಹೊಂದಿದವರಾಗಿದ್ದರು. ಅವರು ಕೆಟ್ಟ ಕೆಲಸ ಮಾಡಿ ತಾವು ಒಳ್ಳೆಯ ಕೆಲಸ ಮಾಡಿದ್ದೇವೆ ಎಂದು ಭಾವಿಸುತ್ತಿದ್ದರು.

ಅವರು ಅಪರಾಧ ಕೃತ್ಯಗಳಿಂದ ದೂರ ಸರಿಯುತ್ತಿರಲಿಲ್ಲ. ಅವರು ಸಾಮಾಜಿಕ ಶಾಂತಿಯನ್ನು ಕೆಡಿಸುತ್ತಿದ್ದರು. ಅಲ್ಲಾಹನು ತನ್ನ ಪೈಗಂಬರರಿಗೆ(ಸ) ಸರಕಾರದ ಲಗಾಮನ್ನು ಕೊಟ್ಟು ಅವರ ಕೈಗಳ ಮೂಲಕ ಬಡವರನ್ನು ರಕ್ಷಿಸಲು ಇಚ್ಛಿಸಿದನು. ಅರಬ್ ದೇಶ ಯಾವುದೇ ಸರಕಾರದ ನಿಯಂತ್ರಣವಿಲ್ಲದೆ ಸ್ವತಂತ್ರವಾಗಿತ್ತು. ಅವರು ಯಾವುದೇ ದೊರೆ ಅಥವಾ ಸರಕಾರದ ಅಧೀನಕ್ಕೊಳಗಾಗಿರಲಿಲ್ಲ. ಆದುದರಿಂದ ಪ್ರತಿಯೊಂದು ಗುಂಪಿನ ಜನರು ಯಾವುದೇ ಹತೋಟಿಗೊಳಗಾಗದೆ ಅತ್ಯಂತ ಧೈರ್ಯದಿಂದ ಜೀವಿಸುತ್ತಿದ್ದರು. ಅಲ್ಲಿ ಅವರಿಗೆ ಅಪರಾಧಕ್ಕೆ ಶಿಕ್ಷೆ ವಿಧಿಸುವ ನಿಯಮಗಳಿರಲಿಲ್ಲ. ಆದುದರಿಂದ ಅಲ್ಲಿನ ಜನರು ದಿನಂಪ್ರತಿ ಅಪರಾಧ ಕೃತ್ಯಗಳನ್ನು ಮಾಡುತ್ತಾ ಮುಂದುವರಿಯುತ್ತಿದ್ದರು. ಅಲ್ಲಾಹನು ಆ ದೇಶದ ಮೇಲೆ ದಯೆದೋರಿದನು. ಹಝ್‌ರತ್ ಮುಹಮ್ಮದ್ ಪೈಗಂಬರರನ್ನು(ಸ) ಆ ದೇಶಕ್ಕೆ ಸಂದೇಶವಾಹಕರನ್ನಾಗಿ ಮಾತ್ರವಲ್ಲ ಆ ದೇಶದ ದೊರೆಯನ್ನಾಗಿಯೂ ಮಾಡಿ ಕಳುಹಿಸಿದನು. ಪವಿತ್ರ ಖುರ್‌ಆನ್ ಸಿವಿಲ್, ಕ್ರಿಮಿನಲ್ ಮತ್ತು ಆರ್ಥಿಕತೆಗೆ ಸಂಬಂಧಿಸಿದ ಎಲ್ಲ ಮಾರ್ಗದರ್ಶನಗಳು ಪೂರ್ಣ ರೂಪದಲ್ಲಿರುವ ನಿಯಮ ಸಂಹಿತೆ ಆಗಿರುತ್ತದೆ. ಹೀಗೆ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಒಬ್ಬ ದೊರೆಯಾಗಿರುವ ಕಾರಣ ಎಲ್ಲ ಜನ ವಿಭಾಗಗಳ ನ್ಯಾಯಾಧೀಶರೂ ಆಗಿದ್ದರು. ಎಲ್ಲ ಧರ್ಮಗಳ ಜನರು ತಮ್ಮ ಮೊಕದ್ದಮೆಗಳ ಬಗ್ಗೆ ಅವರಿಂದ ತೀರ್ಪು ಮಾಡಿಸಿಕೊಳ್ಳುತ್ತಿದ್ದರು."

"ಒಮ್ಮೆ ಒಬ್ಬ ಮುಸ್ಲಿಮ್ ಮತ್ತು ಯಹೂದಿಗೆ ಸಂಬಂಧಿಸಿದ ಮೊಕದ್ದಮೆ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ನ್ಯಾಯಾಲಯದಲ್ಲಿ ವಿಚಾರಣೆಗೆ ಬಂದಾಗ ಅದರ ತೀರ್ಪು ಯಹೂದಿಯ ಪರವಾಗಿ ನೀಡಿದರು. (ಇದರ ಬಗ್ಗೆ ಹಿಂದೆ ಪ್ರಸ್ತಾಪಿಸಲಾಗಿದೆ.)

"ಕೆಲವು ಅವಿವೇಕಿಗಳಾದ ವಿರೋಧಿಗಳು ಪವಿತ್ರ ಖುರ್‌ಆನನ್ನು ಗಾಢವಾಗಿ ಅಧ್ಯಯನ ಮಾಡುವುದಿಲ್ಲ. ಅವರು ಪ್ರತಿಯೊಂದು ಘಟನೆಯನ್ನು ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಸಂದೇಶವಾಹಕನಾಗಿದ್ದರು ಎಂಬ ವಿಚಾರದ ಕೆಳಗೆ ತಂದು ಆಕ್ಷೇಪಿಸುತ್ತಾರೆ. ಆದರೆ ವಾಸ್ತವಿಕವಾಗಿ ಅವರು ವಿಧಿಸಿದ ಶಿಕ್ಷೆಗಳು ಅವರ ಖಿಲಾಫತ್ ಅಥವಾ ದೊರೆತನದ ಸ್ಥಾನದ ಪ್ರಕಾರ ನೀಡಿದುದಾಗಿತ್ತು.

"ಬನೀ ಇಸ್ರಾಈಲ್ ಜನಾಂಗದಲ್ಲಿ ಹಝ್‌ರತ್ ಮೂಸಾ ಅಲೈಹಿಸ್ಸಲಾಮರ ನಂತರ ನಬಿ (ಪ್ರವಾದಿ) ಮತ್ತು ದೊರೆ ಬೇರೆ ಬೇರೆ ಆಗಿರುತ್ತಿದ್ದರು. ದೊರೆಗಳು ರಾಜಕೀಯ ಕ್ರಮಗಳ ಮೂಲಕ ಶಾಂತಿಯನ್ನು ಕಾಪಾಡುತ್ತಿದ್ದರು. ಆದರೆ ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ(ಸ) ಈ ಎರಡು ಹುದ್ದೆಗಳನ್ನು ಒಟ್ಟಿಗೆ ಅಲ್ಲಾಹನು ನೀಡಿದನು. ಅಪರಾಧಿಗಳನ್ನು ಬೇರ್ಪಡಿಸಿ ಉಳಿದ ಜನರೊಂದಿಗೆ ವರ್ತಿಸುವ ರೀತಿಯ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿರುವ ಈ ಕೆಳಗಿನ ವಚನ ತಿಳಿಸುತ್ತದೆ:



"(ಓ ಪೈಗಂಬರ್,) ನೀನು ಗ್ರಂಥ ನೀಡಲ್ಪಟ್ಟವರೊಡನೆ ಮತ್ತು ಅನಕ್ಷರಸ್ಥರೊಡನೆ ಹೇಳು: ಏನು ನೀವು ಇಸ್ಲಾಮ್ ಧರ್ಮವನ್ನು ಸೇರುತ್ತೀರೋ? ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೆ ಅವರು ಮಾರ್ಗದರ್ಶನ ಪಡೆದವರಾಗುವರು. ಅವರು ಮುಖ ತಿರುಗಿಸಿ ಹೋದರೆ ನಿನ್ನ ಕೆಲಸ ದೇವ ಸಂದೇಶ ತಲಪಿಸುವುದು ಮಾತ್ರವಾಗಿದೆ." (ಪವಿತ್ರ ಖುರ್‌ಆನ್ 3:21)

"ಪವಿತ್ರ ಖುರ್‌ಆನಿನ ಈ ವಚನದಲ್ಲಿ 'ನಿನ್ನ ಕೆಲಸ ಯುದ್ಧ ಮಾಡುವುದಾಗಿದೆ' ಎಂದು ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ(ಸ) ಹೇಳಿಲ್ಲ. ಇದರಿಂದ ತಿಳಿಯುವುದೇನೆಂದರೆ, ಅಪರಾಧಿ ಕೃತ್ಯಗಳನ್ನು ಮಾಡುವವರ ವಿರುದ್ಧ, ಮುಸ್ಲಿಮರನ್ನು ಕೊಲ್ಲುವವರ ವಿರುದ್ಧ, ಅಥವಾ ಸಾರ್ವಜನಿಕ ಶಾಂತಿ ಕೆಡಿಸುವವರ ವಿರುದ್ಧ ಮತ್ತು ಕಳ್ಳತನ ಡಕಾಯಿತಿಗಳಲ್ಲಿ ನಿರತರಾಗುವವರ ವಿರುದ್ಧ ಮಾತ್ರ ಯುದ್ಧ ಮಾಡಲು ಆಜ್ಞಾಪಿಸಲಾಗಿದೆ. ಈ ಯುದ್ಧ ಮಾಡಿದುದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ದೊರೆಯಾಗಿರುವ ಸ್ಥಿತಿಯಲ್ಲಿಯೇ ಹೊರತು ಸಂದೇಶವಾಹಕನಾಗಿರುವ ಸ್ಥಿತಿಯಲ್ಲಿ ಅಲ್ಲ. (ಹಝ್ರತ್ ಪೈಗಂಬರ್(ಸ) ಸರಕಾರದ ಪರಮಾಧಿಕಾರಿಯಾದ ಕಾರಣ ಯುದ್ಧ ಮಾಡುತ್ತಿದ್ದರೇ ಹೊರತು ಪ್ರವಾದಿ ಎಂಬ ನೆಲೆಯಲ್ಲಿ ಅಲ್ಲ.) ಅಲ್ಲಾಹನು ಇದರ ಬಗ್ಗೆ ಹೀಗೆ ಹೇಳಿದ್ದಾನೆ: 'ಅಲ್ಲಾಹನ ಮಾರ್ಗದಲ್ಲಿ ನಿಮ್ಮ ವಿರುದ್ಧ ಯುದ್ಧ ಮಾಡುವ ಜನರೊಂದಿಗೆ ನೀವು ಯುದ್ಧ ಮಾಡಿರಿ. ನೀವು ಅತಿರೇಕದಿಂದ ವರ್ತಿಸಬೇಡಿರಿ. ಅತಿರೇಕದಿಂದ ವರ್ತಿಸುವವರನ್ನು ಅಲ್ಲಾಹನು ಇಷ್ಟಪಡುವುದಿಲ್ಲ.' (ಪವಿತ್ರ ಖುರ್‌ಆನ್ 2:191)

**(ಚಶ್ಮಃ ಮಅರಿಫತ್ – ರೂಹಾನೀ ಖಝಾಇನ್ – ಸಂಪುಟ 23 ಪುಟ 242–243)**

ಆದುದರಿಂದ ಯಾವ ಪರಿಶುದ್ಧ ಪೈಗಂಬರರಿಗೆ(ಸ) ಈ ನಿಯಮ ಸಂಹಿತೆ ಅವತೀರ್ಣಗೊಂಡಿದೆಯೋ, ಆ ಪೈಗಂಬರರು ಈ ಆಜ್ಞೆಗಳಿಗೆ ಸಂಬಂಧಿಸಿ ಮಿತಿಮೀರಿ ವರ್ತಿಸುವರೇ? ಹಝ್ರತ್ ಪೈಗಂಬರ್(ಸ) ಮಕ್ಕವನ್ನು ಜಯಿಸಿದ ಸಂದರ್ಭದಲ್ಲಿ, "ನೀವು ಇಸ್ಲಾಮ್ ಧರ್ಮವನ್ನು ಸೇರಿದರೆ ನಿಮಗೆ ರಕ್ಷಣೆ ದೊರಕುವುದು" ಎಂಬ ಷರತ್ತನ್ನು ವಿಧಿಸದೆ ಎಲ್ಲರಿಗೆ ಸಾರ್ವತ್ರಿಕ ಕ್ಷಮೆಯ ಘೋಷಣೆ ಮಾಡಿದರು. ಇದರ ಒಂದು ಉದಾಹರಣೆಯನ್ನು ನಾವು ನೋಡಿದ್ದೇವೆ. ಈ ಕ್ಷಮಾದಾನದ ವಿವಿಧ ರೂಪಗಳಿದ್ದುವು. ಆದರೆ ಒಮ್ಮೆಯೂ ಹಝ್ರತ್ ಮುಹಮ್ಮದ್ ಪೈಗಂಬರ್(ಸ) "ನೀವು ಆವಶ್ಯಕವಾಗಿಯೂ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿರಿ. ಆಗ ನಿಮಗೆ ಕ್ಷಮೆ ನೀಡಲಾಗುವುದು" ಎಂಬ ಶರತ್ತನ್ನು ವಿಧಿಸಿರಲಿಲ್ಲ. ವಿವಿಧ ಸ್ಥಳಗಳಿಗೆ ಹೋಗಿ ಆಶ್ರಯ ಪಡೆಯುವ ಜನರಿಗೆ, ತನ್ನ ಶಿಷ್ಯರೊಬ್ಬರ ಪತಾಕೆಯ ಕೆಳಗೆ ಬಂದು ಸೇರುವವರಿಗೆ, ಕಅ್‌ಬದ ವಠಾರದಲ್ಲಿ ಪ್ರವೇಶಿಸುವವರಿಗೆ, ವಿಶಿಷ್ಟ ವ್ಯಕ್ತಿಯ ಮನೆಯಲ್ಲಿ ಆಶ್ರಯ ಪಡೆದವರಿಗೆ ಕ್ಷಮೆ ನೀಡಲಾಗುವುದೆಂದು ಘೋಷಿಸಲಾಗಿತ್ತು. ಇದು ಬೇರೆ ಎಲ್ಲಿಯೂ ಕಾಣದಂತಹ ಮಹೋನ್ನತ ಉದಾಹರಣೆಯಾಗಿದೆ. ಮಕ್ಕದ ಜನರೊಂದಿಗೆ ಹೀಗೆ ಹೇಳಲಾಯಿತು:

ಲಾ ತಸ್‌ರೀಬ ಅಲೈಕುಮುಲ್ ಯೌಮ್ "ಇಂದು ನಿಮ್ಮ ಮೇಲೆ ಯಾವ ದೋಷಾರೋಪಣೆಯೂ ಇಲ್ಲ."

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಸಾವಿರಾರು ದುರೂದ್ ಪ್ರಾರ್ಥನೆಗಳನ್ನು ಅರ್ಪಿಸುತ್ತೇವೆ. ಅವರು ಅತ್ಯುನ್ನತ ಜೀವಿತ ಮಾದರಿಯನ್ನು ಪ್ರಕಟಿಸಿದರು ಮತ್ತು ನಮಗೆ ಅದರ ಬಗ್ಗೆ ಉಪದೇಶಿಸಿದರು.

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಉಪದೇಶಗಳ ಪ್ರಕಾರ ವರ್ತಿಸಲು ನಮಗೆ ಅಲ್ಲಾಹನು ಸೌಭಾಗ್ಯವನ್ನು ನೀಡಲಿ – ಆಮೀನ್.

❖❖❖❖❖❖❖